بِسْمِ اللّٰہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 01
ಸಂಚಿಕೆ: 21
ವಾರ್ಷಿಕ ಶುಲ್ಕ ರೂ.500/-
ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

04 ಜೂನ್ 2020, 04 ಎಹ್‌ಸಾನ್ 1399 ಹಿಜರಿ ಶಮ್‌ಸಿ,
11 ಶವ್ವಾಲ್ 1441 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاٰتُوا النِّسَآءَ صَدُقٰتِهِنَّ نِحْلَةً ؕ فَاِنْ طِبْنَ لَكُمْ عَنْ شَیْءٍ مِّنْهُ نَفْسًا فَكُلُوْهُ هَنِیْٓــًٔا مَّرِیْٓـــًٔا ○

(ಅನ್ನಿಸಾಅ್:05)

ಅಂದರೆ: ಸ್ತ್ರೀಯರಿಗೆ ಅವರ ವಿವಾಹಧನ (ಮಹರ್)ವನ್ನು ಆತ್ಮ ಸಂತೋಷದಿಂದ ನೀಡಿರಿ. ನಂತರ, ಅವರು ಸ್ವಿಚ್ಛೆಯಿಂದ ಅದರಿಂದೇನಾದರೂ ನಿಮಗೆ ಬಿಟ್ಟುಕೊಟ್ಟರೆ, ಅದನ್ನು ನೀವು ಸಂತೋಷದಿಂದ ಅನುಭೋಗಿಸಿರಿ.

**ನಾನು ತಿಳಿದಂತೆ, ಜನರು ನಮಾಝುಗಳಲ್ಲಿ ಆಲಸ್ಯ ಹಾಗೂ ನರಾಸಕ್ತಿ ಹೊಂದಲು ಕಾರಣವೇನೆಂದರೆ ಅವರಿಗೆ ಅದರ ರುಚಿ, ಅದರಿಂದ ಲಭಿಸುವ ನೆಮ್ಮದಿ ಮತ್ತು ಮನಃಶ್ಯಾಂತಿ ತಿಳಿಯದಾಗಿದೆ. ಅಲ್ಲಾಹನು ನಮಾಝುಗಳಲ್ಲಿ ತನ್ನ ಅನುಗ್ರಹಗಳನ್ನು ದಯಪಾಲಿಸಿರುತ್ತಾನೆ.**

**ಅಲ್ಲಾಹನೊಡನೆ ತುಂಬಾ ವ್ಯಾಕುಲತೆ ಮತ್ತು ಕಳಕಳಿಯಿಂದ ಪ್ರಾರ್ಥಿಸಬೇಕಾಗಿದೆ. ಯಾವ ರೀತಿ ಫಲಗಳಲ್ಲಿ ಮತ್ತು ಇತರ ತಿಂಡಿ ತಿನಸುಗಳಲ್ಲಿ ವಿಭಿನ್ನ ರೀತಿಯ ಸ್ವಾದಗಳಿವೆಯೋ ಅದೇ ರೀತಿ ನಮಾಝ್ ಮತ್ತು ಆರಾಧನೆಗಳಿಂದಲೂ ಅಲ್ಲಾಹನು ಕರುಣಿಸಿದ ಸ್ವಾದಗಳಿವೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ದಾಸತ್ವ ಮತ್ತು ಪಾಲಕನ ನಡುವೆ ಇರುವ ಸಂಬಂಧದ ವಾಸ್ತವ

ಕೆಲ ಮಾಲಿಕರ ಮತ್ತು ಅವರ ಕೆಲಸದಾಳುಗಳ ನಡುವೆ ಇರುವ ಸಂಬಂಧದ ವಾಸ್ತವಿಕತೆ ಅತ್ಯಂತ ಗಾಬರಿಯನ್ನೂ ದುಃಖವನ್ನೂ ಉಂಟುಮಾಡುತ್ತದೆ. ಒಂದೇ ಒಂದು ದಿನ ಯಾರಿಗಾದರೂ ಆಹಾರ ರುಚಿಸಲಿಲ್ಲವಾದರೆ ವೈದ್ಯರ ಹತ್ತಿರ ಹೋಗಿ ಎಷ್ಟೊಂದು ವಿನಯದಿಂದ ತಮ್ಮ ಕಷ್ಟಗಳನ್ನು ತೋಡಿಕೊಳ್ಳುತ್ತಾರೆ, ಹಣ ಖರ್ಚು ಮಾಡುತ್ತಾರೆ, ಆ ರುಚಿಯನ್ನು ಮರಳಿ ಪಡೆಯಲು ಎಷ್ಟೆಲ್ಲ ದುಃಖಗಳನ್ನು ಸಹಿಸಿಕೊಳ್ಳುತ್ತಾರೆ. ತನ್ನ ಪತ್ನಿಯೊಂದಿಗೆ ಲೈಂಗಿಕ ಸಂಬಂಧದಲ್ಲಿ ವಿಫಲನಾದರೆ ಗಾಬರಿಗೊಂಡು ಕೆಲವೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಕೆಲವರು ಸಾಯುತ್ತಾರೆ ಆದರೆ ಅಕಟಕಟಾ! ಆರಾಧನೆಯಲ್ಲಿ ಸಾಮರಸ್ಯ ಕಾಣದ ನತದೃಷ್ಟರು, ರೋಗಿಗಳು, ಏಕೆ ಚಿಂತಿತರಾಗಿ ಪ್ರಯತ್ನ ಮಾಡುವುದಿಲ್ಲ? ಅವರನ್ನು ಏಕೆ ಈ ವಿಷಯ ಗಾಬರಿಗೊಳಿಸುವುದಿಲ್ಲ? ಲೋಕದ ಸುಖ ಸಂತೋಷಕ್ಕಾಗಿ ಅವರು ಏನೆಲ್ಲ ಮಾಡುತ್ತಾರೆ! ಆದರೆ ನೈಜ ಮತ್ತು ಶಾಶ್ವತ ಸುಖಕ್ಕಾಗಿ ಅವರು ಏಕೆ ವ್ಯಾಕುಲಗೊಳ್ಳುವುದಿಲ್ಲ? ಅವರು ಎಂತಹ ದೌರ್ಭಾಗ್ಯವಂತರು! ಎಂತಹ ವಂಚಿತರು! ಅವರು ತಾತ್ಕಾಲಿಕ ಮತ್ತು ನಶ್ವರ ಸುಖಕ್ಕಾಗಿ ಚಿಕಿತ್ಸೆ ಪಡೆಯಲು ಪರದಾಡುತ್ತಾರೆ. ಆದರೆ ಅತ್ಯಾವಶ್ಯಕ ಹಾಗೂ ಶಾಶ್ವತವಾದ ಸುಖಗಳ ಬಗ್ಗೆ ಚಿಂತಿಸುವುದಿಲ್ಲ. ಆದರೆ ಇವುಗಳನ್ನು ನೆಲೆ ನಿಲ್ಲಿಸಲು ದೃಢ ನಿಶ್ಚಯದ ಅವಶ್ಯಕತೆ ಇದೆ. ಪವಿತ್ರ ಖುರ್‌ಆನಿನಲ್ಲಿ ಒಂದು ಸಂದರ್ಭದಲ್ಲಿ ಸಜ್ಜನರ ಉದಾಹರಣೆಯನ್ನು ಮಹಿಳೆಯರೊಂದಿಗೆ ಹೋಲಿಸಲಾಗಿದೆ. ಅದರಲ್ಲಿ ಒಂದು ರಹಸ್ಯವಿದೆ. ಸತ್ಯ ವಿಶ್ವಾಸಿಗಳನ್ನು ಮರಿಯುವ್ ಮತ್ತು ಆಸಿಂಯಾರೊಂದಿಗೆ ಹೋಲಿಸಲಾಗಿದೆ. ಅಂದರೆ ಅಲ್ಲಾಹನು ಬಹುದೇವಾರಾಧಕರಿಂದಲೂ ಸತ್ಯವಿಶ್ವಾಸಿಗಳಿಗೆ ಜನ್ಮ ನೀಡುತ್ತಾನೆ. ಅಂತೂ ಮಹಿಳೆಯರೊಂದಿಗೆ ಹೋಲಿಸುವುದರಲ್ಲಿ ಒಂದು ಸೂಕ್ಷ್ಮವಾದ ರಹಸ್ಯವಿದೆ. ಯಾವ ರೀತಿ ಸ್ತ್ರೀ ಪುರುಷರ ಪರಸ್ಪರ ಸಂಬಂಧವಿರುತ್ತದೆಯೋ ಅದೇ ರೀತಿ ಮಾಲಿಕ ಮತ್ತು ಕೆಲಸದಾಳುಗಳ ನಿಡುವೆ ಸಂಬಂಧವಿರುತ್ತದೆ. ಸ್ತ್ರೀ ಪುರುಷರ ಮಧ್ಯೆ ಪರಸ್ಪರ ಪ್ರೀತಿ ಮತ್ತು ಅನ್ಯೋನ್ಯ ಸಂಬಂಧವಿದ್ದರೆ ಅದು ಉತ್ತಮ ಜೋಡಿ ಎಣಿಸಿಕೊಳ್ಳುತ್ತದೆ. ಇಲ್ಲವಾದರೆ ಕುಟುಂಬವೇ ಅಸ್ತವ್ಯಸ್ತವಾಗುತ್ತದೆ ಮತ್ತು ಅದರಿಂದಾಗಿ ಫಲಪ್ರಾಪ್ತಿಯಾಗುವುದಿಲ್ಲ. ಪುರುಷನು ಬೇರೆಡೆಗೆ ಸುಖವನ್ನು ಅರಸುತ್ತಾ ಹೋಗಿ ನೂರಾರು ಖಾಯಿಲೆಗಳಿಗೆ ಕಾರಣನಾಗುತ್ತಾನೆ. ಕೆಲವರು ನಪುಂಸಕತೆಯಿಂದ, ಕುಷ್ಠರೋಗಿಗಳಂತೆ ಇಹ ಲೋಕದಲ್ಲಿಯೇ ಇತರರ ಸಹವಾಸದಿಂದ ವಂಚಿತರಾಗುತ್ತಾರೆ. ಸಂತಾನವಾದರೂ, ವಂಶಪಾರಂಪರ್ಯ ರೋಗಗಳಿಂದಾಗಿ ಪೀಳಿಗೆಯಿಂದ ಪೀಳಿಗೆಗೆ ಈ ಪಿಡುಗು ಮುಂದುವರೆಯುತ್ತದೆ. ಒಂದೆಡೆ ಹೆಂಡತಿ ನಾಚಿಕೆಗೆಟ್ಟವಳಾಗುತ್ತಾಳೆ. ಹಾಗಾಗಿ, ಮಾನ ಮರ್ಯಾದೆಗೆ ಭಂಗ ಬಂದು ನಿಜವಾದ ಶಾಂತಿ ನಷ್ಟವಾಗುತ್ತದೆ. ದಾಂಪತ್ಯ ಜೀವನ ಕೆಟ್ಟು ಹೋದರೆ ಎಷ್ಟೊಂದು ಕೆಟ್ಟ ಪರಿಣಾಮಗಳೂ ಗೊಂದಲಗಳೂ ಉಂಟಾಗುತ್ತವೆ! ಅದೇ ರೀತಿ ಮನುಷ್ಯನು ಆಧ್ಯಾತ್ಮಿಕತೆಯಿಂದಲೂ ಬೇರ್ಪಟ್ಟು ಗುಹ್ಯ ರೋಗಗಳಿಗೆ ತುತ್ತಾದವನಂತಾಗುತ್ತಾನೆ. ಲೌಕಿಕ ಜೋಡಿಗಿಂತಲೂ ಹೆಚ್ಚು ದುಃಖ ಮತ್ತು ಆಪತ್ತುಗಳಿಗೆ ಗುರಿಯಾಗುತ್ತಾನೆ. ಯಾವ ರೀತಿ ಐಹಿಕ ದಾಂಪತ್ಯ ಜೀವನದಲ್ಲಿ ಒಂದು ಸ್ವಾದವಿದೆಯೋ ಅದೇ ರೀತಿ ಮಾಲಿಕನ ಮತ್ತು ಅವರ ಕೆಲಸದಾಳುವಿನ ಸಂಬಂಧದಲ್ಲಿಯೂ ಒಂದು ಶಾಶ್ವತವಾದ ಸ್ವಾದವಿದೆ. ಯಾರಿಗೆ ಈ ಸ್ವಾದ ದೊರೆಯುತ್ತದೆಯೋ ಅವನು ಐಹಿಕ ಸುಖಭೋಗಗಳ ಸ್ವಾದಗಳಿಗಿಂತಲೂ ಹೆಚ್ಚಿನ ಸ್ವಾದವನ್ನು ಇಲ್ಲಿ ಅನುಭವಿಸುತ್ತಾನೆ. ತನ್ನ ಪೂರ್ಣ ಆಯಸ್ಸಿನಲ್ಲಿ ಒಂದೇ ಒಂದು ಸಲವಾದರೂ ಈ ಸ್ವಾದವನ್ನು ಪಡೆಯಲು ಅವನು ಪ್ರಯತ್ನಿಸುತ್ತಾನೆ. ಆದರೆ ದುರದೃಷ್ಟದ ಮಾತೇನೆಂದರೆ ಲೋಕದ ಒಂದು ದೊಡ್ಡ ಸಂಖ್ಯೆಯ ಜನರು ಈ ರಹಸ್ಯವನ್ನು ತಿಳಿದವರಾಗಿರುವುದಿಲ್ಲ. ಅವರು ಕೇವಲ ನಾಮಮಾತ್ರಕ್ಕಾಗಿ ನಮಾಝ್ ಮಾಡುತ್ತಾರೆ. ನಮಾಝಿನಲ್ಲಿ ಏಕಾಗ್ರತೆ ಇರುವುದಿಲ್ಲ. ಬೇಸರದಿಂದ ನಮಾಝ್ ನಿರ್ವಹಿಸುತ್ತಾರೆ. ನನಗೆ ಮತ್ತೊಂದು ವಿಷಯ ನೋಡಿ ಇನ್ನಷ್ಟು ವಿಷಾದವಾಗುತ್ತದೆ. ಏನೆಂದರೆ ಕೆಲ ಜನರು ಕೇವಲ ಈ ಲೋಕದ ಜನರ ಮುಂದೆ ಸಜ್ಜನರಂತೆ ಕಾಣುವ ಮುಖವಾಡವನ್ನು ಧರಿಸುತ್ತಾರೆ. ಇದರಿಂದ ಅವರು ಲೋಕದ ಮುಂದೆ ಸಜ್ಜನರು ಎಂದು ಎಣಿಸಿಕೊಳ್ಳುತ್ತಾರೆ. ಆದರೆ ಅವರಿಗೆ ಯಾಕೆ ಮನವರಿಕೆಯಾಗುವುದಿಲ್ಲ? ಆಡಂಬರದಿಂದ ಮಾಡಿದ ನಮಾಝುಗಳಿಂದ ಸಜ್ಜನರು, ಮಾನ ಮರ್ಯಾದೆ ಪಡೆಯವವರಾದರೆ ಒಬ್ಬ ನಿಜವಾದ ಭಕ್ತನಾಗಿ ಆರಾಧನೆ ಸಲ್ಲಿಸಿದರೆ ಅವನು ಏನೆಲ್ಲ ಮರ್ಯಾದೆಗಳನ್ನು ಪಡೆಯಲಿಕ್ಕಿಲ್ಲ!

**ನಮಾಝಿನಲ್ಲಿ ಸಾಮರಸ್ಯ ಉಂಟಾಗದಿರಲು ಕಾರಣ ಮತ್ತು ಅದಕ್ಕಿರುವ ಪರಿಹಾರವನ್ನುನಾನು ಕಂಡುಕೊಂಡಿದ್ದೇನೆ.**

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಂಬಂಧವನ್ನು ಜೋಡಿಸುವ ಮೂಲಕ ಮಾತ್ರವೇ ದಾಸನ ಮತ್ತು ಅಲ್ಲಾಹನ ಮಧ್ಯೆ ವಾಸ್ತವಿಕ ಸಂಬಂಧವನ್ನು ಸ್ಥಾಪಿಸುವ ನೈಪುಣ್ಯತೆ ನಮಗೆ ಲಭಿಸುತ್ತದೆ. ಅಲ್ಲಾಹನು ಜೀವಂತನಾಗಿರುವ ಬಗ್ಗೆ ಪರಿಪೂರ್ಣ ದೃಢವಿಶ್ವಾಸ ಮತ್ತು ಅವನ ಸಂಪ್ರೀತಿಯ ಬಗ್ಗೆ ತೃಪ್ತಿಯನ್ನು ಗಳಿಸುವ ಉನ್ನತ ಮಟ್ಟ ಗಳಿಸಲು ಸಾಧ್ಯವಾಗುತ್ತದೆ.**

---

**ಏನಾದರೂ ಆವಶ್ಯಕತೆ ಇದ್ದರೆ ಅಲ್ಲಾಹನೊಂದಿಗೆ ಬೇಡಿಕೊಳ್ಳಬೇಕು. ಬೇರೆ ಯಾರಿಂದಲೂ ಎಂದೂ ಆವಶ್ಯಪಡಬಾರದು. ಇದು ಅತ್ಯಂತ ಆವಶ್ಯಕವಾದ ವೈಶಿಷ್ಟ್ಯವಾಗಿದೆ ಮತ್ತು ಪ್ರತಿಯೊಬ್ಬ ವಾಕಿಫೇ ಝಿಂದಗಿ ಇದನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸಬೇಕು.**

---

**ಈ ಮಾರ್ಗವನ್ನು ನಮ್ಮ ಎಲ್ಲಾ ವೈದ್ಯರೂ ಅನುಸರಿಸಬೇಕಾಗಿದೆ. ಕೇವಲ ತಮ್ಮ ಚಿಕಿತ್ಸೆಯ ಮೇಲೆ ಅಥವಾ ಔಷಧಿಗಳ ಮೇಲೆ ಭರವಸೆ ಇರಿಸದೆ ತಮ್ಮ ರೋಗಿಯವರೊಂದಿಗೆ ಉತ್ತಮವಾಗಿ ವ್ಯವಹರಿಸಿ ಅವರಿಗಾಗಿ ಪ್ರಾರ್ಥಿಸಿದರೆ ಉತ್ತಮ. ಅದರೊಂದಿಗೆ ಎರಡು ರಕತ್ ನಫಿಲ್ ನಮಾಝ್ ನಹ ನಿರ್ವಹಿಸಿದರೆ ಇದು ಅತ್ಯುತ್ತಮವಾಗುತ್ತದೆ.**

---

**ಧಾರ್ಮಿಕ ಕಾರ್ಯಗಳಿಗೆ ನಾವು ಲೌಕಿಕ ಕಾರ್ಯಗಳ ಮೇಲೆ ಆದ್ಯತೆಯನ್ನು ನೀಡುವೆವು ಎಂಬ ಬೈಅತ್ ಪ್ರತಿಜ್ಞೆಯನ್ನು ತಮ್ಮ ಪೂರ್ಣ ಸಾಮರ್ಥ್ಯಗಳಿಗನುಸಾರವಾಗಿ ನಿಭಾಯಿಸುವವರಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದುದಕ್ಕೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವವರೂ, ಅಹ್ಮದಿಯಾ ಖಿಲಾಫತ್‌ನೊಂದಿಗೆ ಪರಿಪೂರ್ಣವಾದ ಪ್ರಾಮಾಣಿಕತೆಯನ್ನೂ ನಿಷ್ಠೆಯನ್ನೂ ಹೊಂದಿದವರೂ ಆಗಿದ್ದರು, ಅವರು ಹುಖೂಖುಲ್ ಇಬಾದ್‌ಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವವರೂ ಆಗಿದ್ದರು. ಇಸ್ಲಾಮಿನ ಸುಂದರ ತತ್ವಗಳನ್ನು ಅನುಷ್ಠಾನಕ್ಕೆ ತರುವಂತೆ ಮಾಡಲು ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಯಾವ ದಾಸನನ್ನು ಕಳುಹಿಸಿದ್ದನೋ ಆ ದಾಸನ ಉಪದೇಶಗಳನ್ನು ಕಾರ್ಯರೂಪಕ್ಕೆ ತಂದವರು ಅವರಾಗಿದ್ದರೆಂದು ಸಾಬೀತು ಗೊಳಿಸಿದ ಮೂರು ಜನ ದಿವಂಗತರಾದ ಮುಕರ್ರಮ್ ಝುಲ್‌ಫಿಕಾರ್ ಅಹ್ಮದ್ ಡಾಮಾಂಕ್ ಸಾಹೆಬ್ ಇಂಡೋನೇಶಿಯಾದ ರೀಜನಲ್ ಮುಬಲ್ಲಿಗ್ ಆಗಿದ್ದರು, ಮುಕರ್ರಮ್ ಡಾ॥ ಪೀರ್ ಮುಹಮ್ಮದ್ ಸಖೀ ಅಹ್ಮದ್ ಸಾಹೆಬ್, ಇಸ್ಲಾಮಬಾದ್, ಪಾಕಿಸ್ತಾನ್. ಮತ್ತು ಮುಕರ್ರಮ್ ಗುಲಾಮ್ ಮುಸ್ತಫಾ ರಝಾ ಸಾಹೆಬ್ ಲಂಡನ್ ರವರ ಗುಣಲಕ್ಷಣಗಳ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01–05–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ- بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಈಗ ನಾನು ನಿಧನ ಹೊಂದಿದ ಕೆಲವರ ಬಗ್ಗೆ ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಅವರಲ್ಲಿ ಪ್ರತಿಯೊಬ್ಬರು ವಿವಿಧ ಜೀವಿತ ಮಾರ್ಗಗಳನ್ನು ಅವಲಂಬಿಸಿದ್ದರು. ಅವರು ವಿವಿಧ ಕೆಲಸಗಳಲ್ಲಿ ಕಾರ್ಯನಿರತರಾಗಿದ್ದರು. ಅವರ ವಿದ್ಯಾಭ್ಯಾಸದ ಮಟ್ಟ ಸಹ ವ್ಯತ್ಯಸ್ಥವಾಗಿದ್ದುವು. ಆದರೆ ಒಂದು ವಿಷಯಕ್ಕೆ ಸಂಬಂಧಿಸಿ ಅವರು ಸಹಭಾಗಿಗಳಾಗಿದ್ದರು. ಅವರು ಧಾರ್ಮಿಕ ಕಾರ್ಯಗಳಿಗೆ ನಾವು ಲೌಕಿಕ ಕಾರ್ಯಗಳ ಮೇಲೆ ಆದ್ಯತೆಯನ್ನು ನೀಡುವೆವು ಎಂಬ ಬೈಅತ್ ಪ್ರತಿಜ್ಞೆಯನ್ನು ತಮ್ಮ ಪೂರ್ಣ ಸಾಮರ್ಥ್ಯಗಳಿಗನುಸಾರವಾಗಿ ನಿಭಾಯಿಸುವವರಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದುದಕ್ಕೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವವರೂ, ಅಹ್ಮದಿಯಾ ಖಿಲಾಫತ್‌ನೊಂದಿಗೆ ಪರಿಪೂರ್ಣವಾದ ಪ್ರಾಮಾಣಿಕತೆಯನ್ನೂ ನಿಷ್ಠೆಯನ್ನೂ ಹೊಂದಿದವರೂ ಆಗಿದ್ದರು, ಅವರು ಹುಖೂಖುಲ್ ಇಬಾದ್‌ಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವವರೂ ಆಗಿದ್ದರು. ಇಸ್ಲಾಮಿನ ಸುಂದರ ತತ್ವಗಳನ್ನು ಅನುಷ್ಠಾನಕ್ಕೆ ತರುವಂತೆ ಮಾಡಲು ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಯಾವ ದಾಸನನ್ನು ಕಳುಹಿಸಿದ್ದನೋ ಆ ದಾಸನ ಉಪದೇಶಗಳನ್ನು ಕಾರ್ಯರೂಪಕ್ಕೆ ತಂದವರು ಅವರಾಗಿದ್ದರೆಂದು ಸಾಬೀತು ಗೊಳಿಸಿದರು.

ಅವರಿಗೆ ಸಂಬಂಧಿಸಿದ ಘಟನೆಗಳನ್ನು ಆಲಿಸುವಾಗ ನಮಗೆ ಹೀಗೆ ದೃಢವಾಗುತ್ತದೆ: ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಂಬಂಧವನ್ನು ಜೋಡಿಸುವ ಮೂಲಕ ಮಾತ್ರವೇ ದಾಸನ ಮತ್ತು ಅಲ್ಲಾಹನ ಮಧ್ಯೆ ವಾಸ್ತವಿಕ ಸಂಬಂಧವನ್ನು ಸ್ಥಾಪಿಸುವ ನೈಪುಣ್ಯತೆ ನಮಗೆ ಲಭಿಸುತ್ತದೆ. ಅಲ್ಲಾಹನು ಜೀವಂತನಾಗಿರುವ ಬಗ್ಗೆ ಪರಿಪೂರ್ಣ ದೃಢವಿಶ್ವಾಸ ಮತ್ತು ಅವನ ಸಂಪ್ರೀತಿಯ ಬಗ್ಗೆ ತೃಪ್ತಿಯನ್ನು ಗಳಿಸುವ ಉನ್ನತ ಮಟ್ಟ ಗಳಿಸಲು ಸಾಧ್ಯವಾಗುತ್ತದೆ.

ಆ ನಿಧನ ಹೊಂದಿದವರಲ್ಲಿ ಒಬ್ಬರು ನಮ್ಮ ಜಮಾಅತಿನ ಮುಬಲ್ಲಿಗ್ ಝುಲ್‌ಫಿಖಾರ್ ಅಲಿ ಡಾಮಾಂಕ್ ಸಾಹಿಬ್. ಇಂಡೋನೇಶಿಯಾ ದೇಶದ ರೀಜನಲ್ ಮುಬಲ್ಲಿಗರಾಗಿದ್ದ ಅವರು ಏಪ್ರಿಲ್ ದಿನಾಂಕ 21ರಂದು ತನ್ನ 42ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು ಮೇ 24, 1978ರಲ್ಲಿ ನಾರ್ಥ್ ಸ್ಮಾರ್ಟರ್‌ನಲ್ಲಿ ಜನಿಸಿದರು. ಅವರ ತಂದೆಯ ಹೆಸರು ಶೆಹ್‌ರೂಲ್ ಡಾಮಾಂಕ್ ಸಾಹೆಬ್ ಆಗಿತ್ತು. ಅವರ ತಾತನ ಹೆಸರು ಶೆಹ್‌ನೂರ್ ಡಾಮಾಂಕ್ ಆಗಿತ್ತು. ಅವರ ಕುಟುಂಬದಲ್ಲಿ ಅವರ ಪಿತಾಮಹನ (ತಾತ) ಮೂಲಕ ಅಹ್ಮದಿಯ್ಯತ್ ಪ್ರವೇಶಿಸಿತು. ಅವರು 1944ರಲ್ಲಿ ಮೌಲಾನ ಝೀನಿ ದೆಹ್‌ಲಾನ್ ಸಾಹೆಬ್ ಅವರ ಮುಖಾಂತರ ಬೈಅತ್ ಮಾಡಿದ್ದರು. ದಿವಂಗತ ಝುಲ್‌ಫಿಖಾರ್ ಅಲಿ ಡಾಮಂಕ್ ಸಾಹೆಬರು 1997ರಿಂದ 2002ರ ತನಕ ಇಂಡೋನೇಶಿಯಾದ ಜಾಮಿಅ ಅಹ್ಮದಿಯಾದಲ್ಲಿ ಧಾರ್ಮಿಕ ವಿದ್ಯಾಭ್ಯಾಸ ಗಳಿಸಿದರು. ಅನಂತರ ಅವರು ವಿವಿಧ ಸ್ಥಳಗಳಲ್ಲಿ ಹದಿನೆಂಟು ವರ್ಷಗಳ ಕಾಲ ಮುಬಲ್ಲಿಗರಾಗಿ ಜಮಾಅತಿಗೆ ಸೇವೆ ಸಲ್ಲಿಸಿದರು. ಅವರು ಅವರ ಪತ್ನಿ ಮುಕರ್ರಮ ಮರಿಯಮ್ ಸಿದ್ದೀಖ ಸಾಹಿಬ ಮತ್ತು ನಾಲ್ವರು ಮಕ್ಕಳು ಜಾಝಿಬ್, ಆಯಿಶ ಖೌಲ, ಖೈರ ಫಾತಿಮ ಮತ್ತು ಖೈಸರ ನಸೀರ. ಪುತ್ರನಗೆ 15ವರ್ಷ ಪ್ರಾಯವಿದೆ ಮತ್ತು 8 ತಿಂಗಳ ಕಿರಿಯ ಪುತ್ರಿ ಇವರೆಲ್ಲರನ್ನು ಅಗಲಿ ಹೋಗಿದ್ದಾರೆ. ಇವರೆಲ್ಲರು ವಖ್‌ಫೆ ನೌ ಪದ್ಧತಿಗೆ ಸೇರಿದವರಾಗಿದ್ದಾರೆ.

ನಮ್ಮ ಮುಬಲ್ಲಿಗ್ ಮಿಅರಾಜ್ ದೀನ್ ಸಾಹಿಬ್ ಹೇಳುತ್ತಾರೆ: ಝುಲ್‌ಫಿಖಾರ್ ಸಾಹಿಬ್ ಅತ್ಯಂತ ಯಶಸ್ವೀ ಮತ್ತು ಪರಿಶ್ರಮಿ ಮುಬಲ್ಲಿಗರಾಗಿದ್ದರು. ಅವರನ್ನು ಎಲ್ಲೆಲ್ಲಾ ನೇಮಿಸಲಾಗುತ್ತಿತ್ತೋ ಅಲ್ಲೆಲ್ಲಾ ಅವರು ತರಬೇತಿ ಬಗ್ಗೆ ನಿಗಾವಹಿಸುತ್ತಿದ್ದರು. ಅದೇ ರೀತಿ ತಬ್ಲೀಗಿನ ಕೆಲಸವನ್ನೂ ಅತ್ಯಂತ ಚೆನ್ನಾಗಿ ಈಡೇರಿಸುತ್ತಿದ್ದರು. ಅವರು ಎಲ್ಲಾರಿಂದಲೂ ಬಹಳ ಪ್ರೀತಿಯಿಂದ ವರ್ತಿಸುತ್ತಿದ್ದರು. ಭೇಟಿಯಾಗುವಾಗಲು ಮುಗುಳ್ನಗುತ್ತಾ ಭೇಟಿ

ಆಗುತ್ತಿದ್ದರು. ಅವರು ಯಾರಿಂದಲೂ ಏನನ್ನೂ ಎಂದೂ ಅವಶ್ಯಪಡುತ್ತಿರಲಿಲ್ಲ. ಯಾವಾಗಲೂ ದುಆ ಮಾಡುವ ಬಗ್ಗೆ ಉಪದೇಶಿಸುತ್ತಿದ್ದರು. ಒಬ್ಬ ವಾಕಿಫೇ ಝಿಂದಗಿಯ ವೈಶಿಷ್ಟ್ಯವಾಗಿರಬೇಕಾದ ಆತ್ಮ ಇದೇ ಆಗಿದೆ. ಏನಾದರೂ ಆವಶ್ಯಕತೆ ಇದ್ದರೆ ಅಲ್ಲಾಹನೊಂದಿಗೆ ಬೇಡಿಕೊಳ್ಳಬೇಕು. ಬೇರೆ ಯಾರಿಂದಲೂ ಎಂದೂ ಆವಶ್ಯಪಡಬಾರದು. ಇದು ಅತ್ಯಂತ ಆವಶ್ಯಕವಾದ ವೈಶಿಷ್ಟ್ಯವಾಗಿದೆ ಮತ್ತು ಪ್ರತಿಯೊಬ್ಬ ವಾಕಿಫೇ ಝಿಂದಗಿ ಇದನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸಬೇಕು.

ಅವರು ಅಲ್ಲಾಹನ ಅನುಗ್ರಹದಿಂದ ಬಹಳಷ್ಟು ಬೈಅತ್‌ಗಳು ಮಾಡಿಸುವ ಮುಬಲ್ಲಿಗರಲ್ಲಿ ಸೇರಿದ್ದರು ಆದ್ದರಿಂದ ಅವರಿಗೆ ಜಮಾಅತ್ತಿನ ವ್ಯವಸ್ಥೆಯಡಿ 2018ರಲ್ಲಿ ಇಲ್ಲಿಯ ಜಲ್ಸದಲ್ಲಿ ಪಾಲ್ಗೊಳ್ಳಲು ಸೌಭಾಗ್ಯ ಲಭಿಸಿತು. ಕಾರ್ಯ ನಿರ್ವಹಿಸುವಾಗ ಅವರು ಯಾವಾಗಲು ಉತ್ತಮವಾದ ಪ್ಲ್ಯಾನಿಂಗ್‌ನೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದರು ಹೀಗಾಗಿ ಅವರು ಎಲ್ಲಾ ಕ್ಷೇತ್ರದಲ್ಲಿ ಯಶಸ್ಸುಗಳಿಸುತ್ತಿದ್ದರು.

ಆಸಿಫ್ ಮುಈನ್ ಸಾಹಿಬ್ ಎಂಬ ಮುರಬ್ಬಿ ಅವರ ಉತ್ತಮ ಗುಣಗಳ ಬಗ್ಗೆ ಹೀಗೆ ಬರೆದಿದ್ದಾರೆ: ಝುಲ್‌ಫಿಖಾರ್ ಅಹ್ಮದ್ ಸಾಹಿಬ್ ಅತ್ಯಂತ ಸಾತ್ವಿಕರೂ ನಿಷ್ಠಾವಂತರೂ ಆಗಿದ್ದರು. ಅವರು ಅನುಸರಣೆ ತೋರುವವರೂ ಆಗಿದ್ದರು. ಅವರು ರೋಗ ಬಾಧಿತರಾಗಿದ್ದಾಗ ಸಹ ಜಮಾಅತಿನ ಕೆಲಸಗಳಿಗೆ ಆದ್ಯತೆ ನೀಡುತ್ತಿದ್ದರು. ಆಸಿಫ್ ಸಾಹೆಬ್ ಬರೆಯುತ್ತಾರೆ: ರಿಯಾಔ ರಾಜ್ಯದ ಒಂದು ರೀಜನ್‌ನಲ್ಲಿ ಅವರು ರೀಜನಲ್ ಮುಬಲ್ಲಿಗ್ ಆಗಿ ಕಾರ್ಯನಿರ್ವಹಿಸುತ್ತಿರುವಾಗ (ಆಸಿಫ್ ಸಾಹೆಬರಿಗೆ) ಅವರೊಂದಿಗೆ ಕೆಲಸ ಮಾಡಲು ಭಾಗ್ಯ ಲಭಿಸಿತು. ಅವರು ಬಹಳ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದರು. ಸರ್ಕಾರ ಹಾಗೂ ಅನ್ಯ ಸಂಸ್ಥೆಗಳೊಂದಿಗೆ ದೃಢವಾದ ಸಂಬಂಧ ಹೊಂದಿದ್ದರು ಆದ ಕಾರಣ ಅವರಿಗೆ ಅನೇಕ ಬಾರಿ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಉಪನ್ಯಾಸ ನೀಡಲು ಅಹ್ವಾನಿಸುತ್ತಿದ್ದರು. ಇದಲ್ಲದೆ ಅವರು ರಾಜ್ಯದಲ್ಲಿ ಅನೇಕ Lost generation ನೊಂದಿಗೆ ಸಂಪರ್ಕಹೊಂದಿ ಅವರಿಗೆ ಜಮಾಅತ್ತಿನ ಸಂದೇಶ ನೀಡುತ್ತಿದ್ದರು. ಈ ಯೋಜನೆಯನ್ನು ಅವರು ಸಂಪೂರ್ಣ ರಾಜ್ಯದಲ್ಲಿ ಜಾರಿಯಲ್ಲಿರಿಸಿದರು. ಹೀಗೆ ಅವರಿಗೆ ಒಂದು ಪ್ರಾದೇಶಿಕ ಜಮಾಅತ್ ಸೆಂಗೇಗ್ಗಿಗೆ 20 ವರ್ಷಗಳ ನಂತರ ಪುನಃ ಖಾಯೆಂಗೊಳಿಸುವ ಸೌಭಾಗ್ಯ ಲಭಿಸಿತು. ಅಲ್ಲಿನ ಜನರು Lost Generation ಎಂದು ಹೇಳುತ್ತಾರೆ. ಅವರನ್ನು ಸಂಪರ್ಕಿಸಲು ಇವರು ದೋಣಿಯ ಮುಖಾಂತರ ಚಿಕ್ಕ ಚಿಕ್ಕ ದ್ವೀಪಗಳಿಗೆ ಹೋಗಬೇಕಾಗುತ್ತದೆ. ಒಂದು ದ್ವೀಪದಿಂದ ಇನ್ನೊಂದು ದ್ವೀಪದವರೆಗೆ ಒಂದುವರೆ, ಎರಡು ಗಂಟೆಗಳ ಕಾಲ ಪ್ರಯಾಣಿಸ ಬೇಕಾಗುತ್ತದೆ ಅವರು ರೋಗ ಬಾಧಿತರಾಗಿದ್ದರೂ ಸಹ ಬಹಳ ಧೈರ್ಯ ವಹಿಸುತ್ತಿದ್ದರು. ಅವರು ಹೇಳುತ್ತಿದ್ದರು ನನ್ನಲ್ಲಿ ಎಲ್ಲಿಯ ತನಕ ಧರ್ಮದ ಸೇವೆಯ ಶಕ್ತಿ ಇದೇಯೋ ಅಲ್ಲಿಯ ತನಕ ನಾನು ಧರ್ಮಸೇವೆ ಮಾಡುತ್ತಿರುವೆನು. ಹೀಗೆ ಅವರ ಪ್ರವಾಸಗಳಿಂದ ನಾಲ್ಕು ಕುಂಟುಂಬಗಳು ಅಲ್ಲಾಹನ ಅನುಗ್ರಹದಿಂದ ಜಮಾಅತ್ತಿನಲ್ಲಿ ಸೇರಿದರು.

ಅವರು ಡಯಾಲಿಸಿಸ್ ಚಿಕಿತ್ಸೆಯಲ್ಲಿದ್ದರು. ಅಂತಹ ಸ್ಥಿತಿಯಲ್ಲಿಯೂ ಅವರು ಒಂದು ಸ್ಥಳಿಯ ಸಭೆಯಲ್ಲಿ ಹಾಜರಾದರು. ಅವರೊಂದಿಗೆ 'ನೀವು ಇಷ್ಟು ಕಷ್ಟಪಟ್ಟು ಏಕೆ ಬಂದಿರಿ' ಎಂದು ವಿಚಾರಿಸಿದಾಗ ಅವರು ಹೇಳಿದರು: ನಾನು ಜೀವಿಸಿರುವ ಕಾಲದಲ್ಲಿ ನಾನು ರೋಗಿಯಾಗಿದ್ದಾಗ ಸಹ ಜಮಾಅತಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಯಾವಾಗಲೂ ಭಾಗವಹಿಸಲು ಪ್ರಯತ್ನಿಸುವೆನು. ನಾನು ರೋಗ ಭಾದಿತನಾಗಿದ್ದರು ಸಹ ನಾನು ಧರ್ಮಸೇವೆಯ ಕಾರ್ಯಗಳಲ್ಲಿ ಭಾಗವಹಿಸುವುದೇ ನನ್ನ ಆಶೆಯಾಗಿದೆ. ಇದು ಆ ವಾಕಿಫೇ ಝಿಂದಗಿಯಲ್ಲಿದ್ದ ಮನೋಭಾವವಾಗಿದೆ. ಇಂತಹ ಭಾವನೆ ಎಲ್ಲಾ ವಾಕಿಫೇ ಝಿಂದಗಿಗಳಲ್ಲಿ ಇರಬೇಕಾಗಿದೆ. ಅಲ್ಲದೆ ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಗಾಬರಿಯನ್ನು ಪ್ರಕಟಿಸಲು ಪ್ರಾರಂಭಿಸಬಾರದು.

ಅದೇ ರೀತಿ ಮುಝಫ್ಫರ್ ಅಹ್ಮದ್ ಸಾಹೆಬ್ ಅಲ್ಲಿನ ಒರ್ವ ಮುಬಲ್ಲಿಗ್ ಆಗಿದ್ದಾರೆ. ಅವರು ಬರೆಯುತ್ತಾರೆ: ನನಗೆ ಅವರೊಂದಿಗೆ ಜಾಮಿಯದಲ್ಲಿ ವಿದ್ಯಾಭ್ಯಾಸ ಮಾಡುವ ಭಾಗ್ಯ ಲಭಿಸಿತು ಮತ್ತು ಕೊನೆಯದಾಗಿ ಖಾದಿಯಾನಿನಲ್ಲಿ ಅವರೊಂದಿಗೆ ಭೇಟಿ ಆಗಿತ್ತು. ಅಂದರೆ ಅವರೊಂದಿಗೆ ಖಾದಿಯಾನ್‌ಗೆ ಹೋಗಿದ್ದರು. ಈ ವರ್ಷ ಹೋಗಿರಬಹುದು. ಖಾದಿಯಾನ್ ಹೋಗುವುದಕ್ಕು ಮುಂಚೆ ಅವರ ಆರೋಗ್ಯ ಚೆನ್ನಾಗಿರಲಿಲ್ಲ ಅವರು ಹೀಗೆ ಪ್ರಾರ್ಥಿಸುತ್ತಿದ್ದರು: ಓ ಅಲ್ಲಾಹನೇ ನನಗೆ ಖಾದಿಯಾನ್‌ಗೆ ಹೋಗುವಷ್ಟು ಜೀವ ನೀಡು. ಅವರು ಹೇಳುತ್ತಿದ್ದರು ಬೈತುಲ್ಲಾಹ್‌ದಲ್ಲಿ ಉಮ್ರಹ್ ಅನುಷ್ಠಾನದ ಅವಕಾಶವು ಲಭಿಸಿತು ಮತ್ತು ಕಾಲದ ಖಲೀಫರನ್ನು ಭೇಟಿ ಆಗುವ ಸೌಭಾಗ್ಯ ಲಭಿಸಿತು. ಈಗ ಕೇವಲ ಖಾದಿಯಾನ್‌ಗೆ ಹೋಗುವ ಆಶೆ ಇದೆ. ಹೀಗೆ ಅಲ್ಲಾಹನು ಅವರ ಈ ಆಶೆಯನ್ನು ಸಹ ಪೂರೈಸಿದನು. ಈ ವರ್ಷ ಜಲ್ಸ ಸಾಲಾನ ಅಂತು ನಡೆಯಲಿಲ್ಲ ಆದರೆ ಅದಕ್ಕು ಮುಂಚೆ ಇವರೆಲ್ಲರು ಖಾದಿಯಾನ್‌ಗೆ ತಲುಪಿದ್ದರು. ಹೀಗೆ ಅವರಿಗೆ ಅಲ್ಲಿ ಬಹಳ ಸ್ವತಂತ್ರವಾಗಿ ಆರಾಧನೆ ಮಾಡಲು ಸೌಭಾಗ್ಯ ಅವರಿಗೆ ಲಭಿಸಿತು. ಈ ಮುರಬ್ಬಿ ಸಾಹೆಬರು ಬರೆಯುತ್ತಾರೆ: ಖಾದಿಯಾನಿನಲ್ಲಿ ಶೀತದ ಹವಾಮಾನವು ಬಹಳ ತೀರ್ವವಿದ್ದರಿಂದ ಅವರಿಗೆ ಬೇಗನೇ ಇಂಡೋನೇಶಿಯಕ್ಕೆ ತೆರಳಬೇಕಾಯಿತು ಆದರೂ ಇಂತಹ ಕಷ್ಟದ ಸಂದರ್ಭದಲ್ಲಿಯು ಸಹ ಅವರ ಈ ಆಶೆಯು ಪೂರ್ಣಗೊಂಡಿತು. ಹೀಗೆ ಅವರಿಗೆ ಬೈತುದ್ದುಆ, ಮಸ್ಜಿದ್ ಮುಬಾರಕ್ನಲ್ಲಿ ನಮಾಝ್ ನಿರ್ವಹಿಸಲು ಹಾಗೂ ಪ್ರಾರ್ಥನೆ ಮಾಡಲು ಸೌಭಾಗ್ಯ ಲಭಿಸಿತು. ಅವರು ಹೇಳುತ್ತಾರೆ ನಾನು ಅವರನ್ನು ವೀಲ್‌ಚೇರ್‌ನ ಮೇಲೆ ಕೂರಿಸಿಕೊಂಡು ಬಿಹಿಷ್ತಿ ಮಖ್ಬರಕ್ಕೆ ಕರೆದುಕೊಂಡು ಹೋಗುತ್ತಿದ್ದೆ. ಅಲ್ಲಿ ಅವರು ದುಆ ಮಾಡಿದರು. ಅವರು ಬಹಳ ಶ್ರಮವಹಿಸಿ ಕೆಲಸ ಮಾಡುವವರಾಗಿದ್ದರು. ಅವರು ರೋಗಿ ಆಗಿದ್ದರೂ ಸಹ ಧೈರ್ಯದಿಂದ ಅದನ್ನು ಎದುರಿಸುತ್ತಿದ್ದರು ಅವರಿಗೆ ಏನೇ ಜಮಾಅತಿನ ಕೆಲಸ ನೀಡಿದರು ಅವರು ಅದನ್ನು ಬಹಳ ನಿಷ್ಠೆಯಿಂದ ಮಾಡುತ್ತಿದ್ದರು. ಅದೇ ರೀತಿ ಇನ್ನೋರ್ವ ಮುಬಲ್ಲಿಗ್ ಸಾಜಿದ್ ಸಾಹೆಬ್ ಅವರು ಬರೆಯುತ್ತಾರೆ: ಅವರು ಸೀನಿಯರ್ ಆಗಿದ್ದರು ಸಹ ಪ್ರಚಾರದ ಕೆಲಸಗಳಲ್ಲಿ ಜುನಿಯರ್‌ರವರ ಸಲಹೆ ಪಡೆಯುತ್ತಿದ್ದರು. ಬಹಳ ವಿನಮ್ರ ಸ್ವಭಾವದವರಾಗಿದ್ದರು. ದೃಢ ಇರಾದೆ ಹೊಂದಿದ್ದರು. ಅವರು ಕಳೆದ ವರ್ಷ ರೋಗಿ ಆಗಿದ್ದರೂ ಕಾಯಿಲೆಯಿಂದ ವಾಸಿ ಆದ ನಂತರ ಖುದ್ದಾಮುಲ್ ಅಹ್ಮದಿಯದ ಇಜ್‌ತಿಮಾದಲ್ಲಿ ಭಾಗವಹಿಸಿದ್ದರು.

ಬಾಸೋಕಿ ಸಾಹೆಬ್ ಇವರು ಸಹ ಮುಬಲ್ಲಿಗ್ ಆಗಿದ್ದಾರೆ ಬರೆಯುತ್ತಾರೆ: ಕೊನೆಯ ಮೂರು ವರ್ಷಗಳು ಮಿಷನ್ ಹೌಸ್ ಕಚ್ಚೇರಿಗೆ ನನ್ನ ವರ್ಗಾವಣೆ ಆದಾಗ ತಬ್‌ಲೀಗಿನ ಕೆಲಸಗಳ ಬಗ್ಗೆ ಮುಬಲ್ಲಿಗರನ್ನು ಸಂಪರ್ಕಿಸಿದಾಗ ತಬ್‌ಲೀಗಿನ ಕೆಲಸಗಳನ್ನು ದಿವಂಗತ ಝುಲ್‌ಫಿಕಾರ್ ಸಾಹೆಬರು ಬಹಳ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ತಬ್‌ಲೀಗಿನ ಕಾರ್ಯಕ್ರಮಗಳನ್ನು ನಿರ್ವಹಿಸಲು ಅವರು ದಾಯಿಯಾನ್ ಹಾಗು ಪ್ರಾದೇಶಿಕ ಮುಬಲ್ಲಿಗ್ ಅವರಿಗೆ ಉತ್ತಮವಾದ ವ್ಯವಸ್ಥೆಗಳು ನೀಡುತ್ತಿದ್ದರು. ನನಗೆ ಅವರು ಯಾವಾಗಲು ಹೇಳುತ್ತಿದ್ದರು ಬೈಅತ್ ಮಾಡುವವರ ಸಂಖ್ಯೆಯನ್ನು ಅಪ್‌ಡೇಟ್ ಮಾಡುತ್ತಾ ಇರಬೇಕು ಹೀಗೆ ಮಾಡಿದರೆ ದಾಯಿಯಾನರಲ್ಲಿ (ಅಲ್ಲಾಹನ ಕಡೆ ಆಮಂತ್ರಿಸುವರು) ಉತ್ಸಾಹ ತುಂಬುವುದು. ಅದು ಹೀಗೆ ಮಾಡಬಹುದು ಬೈಅತ್ ಮಾಡುವವರ ಸಂಖ್ಯೆಯನ್ನು ನೋಡಿ ಅದರ ಬಗ್ಗೆ ದಾಯಿಯಾನ್ ಅವರೊಂದಿಗೆ ಚರ್ಚಿಸಬೇಕು. ಹೀಗೆ ದಾಯಿಯಾನರು ಸಹ ಎಕ್ಟಿವ್ ಆಗುವರು ಹೀಗೆ ನವ ಅಹ್ಮದಿಯರನ್ನು ವ್ಯವಸ್ಥಿತವಾಗಿಡಲು ಸಾಧ್ಯವಾಗುವುದು.

ಮುಬಲ್ಲಿಗ್ ಸರ್‌ಮದ್ ಅಹ್ಮದ್ ಸಾಹೆಬ್ ಹೇಳುತ್ತಾರೆ: ಧರ್ಮ ಪ್ರಚಾರದ ಕೆಲಸಗಳನ್ನು ನಿಭಾಯಿಸುವಲ್ಲಿ ಅವರು ಬಹಳ ವಿಶೇಷವಾದ ಪರಿಣಿತಿ ಹೊಂದಿದ್ದರು. ನಾವು ಉತ್ತರ ಸ್ಮಾರ್ಟ್ರ್ ಪ್ರದೇಶದಲ್ಲಿ ಬೋನ್ಟೊಪಾನೆ ದಿಂದ ರಾಜ್ಯದ ಗಡಿ ಭಾಗದ ಪ್ರದೇಶ ಸೋಸಾದ ತನಕ ತಬ್‌ಲೀಗಿನ ಹೊಸ ಮಾರ್ಗಗಳನ್ನು ತೆರೆಯುವ ಯೋಜನೆ ಮಾಡುತ್ತಿರುವಾಗ ಅವರು ಬಹಳ ಧೈರ್ಯದಿಂದ ಮತ್ತು ಆಕಾಂಕ್ಷೆಯಿಂದ ಕಾರ್ಯಕ್ರಮಗಳನ್ನು ಸಿದ್ಧಗೊಳಿಸಿದರು. ಅಲ್ಲಾಹನ ಅನುಗ್ರಹದಿಂದ ಈ ಯೋಜನೆಯು ಬಹಳ ದಿವಸ ನಡೆಯಿತು ಅನಂತರ ಕೆಲವು ಸ್ಥಿರ ನಿಧಿಯ ಕೊರತೆಯಿಂದ ತಡೆಗಳು ಆದವು ಆದರೆ ಅವರ ಈ ಯೋಜನೆಯ ಕಾರಣದಿಂದ ಬಹುತೇಕ ನವ ಅಹ್ಮದಿಯರು ಈ ಪ್ರದೇಶದಿಂದಲೇ ಬಂದರು. ಅವರು ಯಾವಾಗಲು ಹೇಳುತ್ತಿದ್ದರು: ಎಂದೂ ನಿರಾಶಿತರಾಗಬೇಡಿರಿ ಏಕೆಂದರೆ ನಮ್ಮ ಕೆಲಸ ಕೇವಲ ತಬ್‌ಲೀಗ್ ಮಾಡುವುದು ಮತ್ತು ಬೀಜ ಬಿತ್ತುವುದಾಗಿದೆ. ಇದರ ಕಟಾವೆಯು ಮತ್ತೆ ಇದರ ಫಲವು ಬೇರೆಯವರ ಭಾಗಕ್ಕೆ ಬಂದು ಸೇರಬಹುದು. ಏನೇ ಇರಲಿ ಅವರು ಝುಲ್‌ಫಿಖಾರ್ ಅಹ್ಮದ್ ಸಾಹಿಬರು ದೃಢವಾದ ಇಚ್ಛಾಶಕ್ತಿ ಹೊಂದಿದವರೂ ನಿಷ್ಠೆಯಿಂದ ತಮ್ಮ ವಕ್‌ಫನ್ನು ಈಡೇರಿಸುವವರೂ ಆಗಿದ್ದರು.

ಅಲ್ಲಾಹನು ಅವರ ಪದವಿಗಳನ್ನು ಉನ್ನತ ಗೊಳಿಸಲಿ. ಅವರು ತಮ್ಮ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸಿದರು. ಮಾತ್ರವಲ್ಲ ವಕ್‌ಫ್‌ಗೆ ಸಂಬಂಧಿಸಿದ ಪ್ರತಿಜ್ಞೆಗಳನ್ನು ಸಹ ಚೆನ್ನಾಗಿ ನಿಭಾಯಿಸಿದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ. ಅವರ ಪತ್ನಿ, ಮಕ್ಕಳನ್ನು ಅಲ್ಲಾಹನು ತನ್ನ ಸಂರಕ್ಷಣೆಯಲ್ಲಿ ಇರಿಸುವವನಾಗಲಿ. ಅವನೇ ಅವರ ಮೇಲ್ವಿಚಾರಕನಾಗಲಿ.

ನಿಧನ ಹೊಂದಿದ ಇನ್ನೊಬ್ಬರು, ಡಾಕ್ಟರ್ ಪೀರ್ ಮುಹಮ್ಮದ್ ನಖಿಯುದ್ದೀನ್ ಸಾಹಿಬ್. ಪಾಕಿಸ್ಥಾನದ ಇಸ್ಲಾಮಾಬಾದ್‌ನಲ್ಲಿ ಎಪ್ರಿಲ್ ದಿನಾಂಕ 18ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು ಮೃತರಾಗುವುದಕ್ಕೆ ಎಂಟು–ಹತ್ತು ದಿನಗಳ ಮೊದಲು ಅವರಲ್ಲಿ ಕೊರೋನ ರೋಗ ಬಾಧೆಯ ಲಕ್ಷಣಗಳು ಕಾಣಿಸಿಕೊಂಡಿದ್ದುವು. ಅದಕ್ಕಾಗಿ ಅವರನ್ನು ಆಸ್ಪತ್ರಗೆ ಸೇರಿಸಲಾಯಿತು ಅಲ್ಲಿ ಅವರ ಆರೋಗ್ಯವು ಸ್ಟೇಬಲ್ ಆಗುತ್ತಿತ್ತು ಆದರೆ ಎಪ್ರಿಲ್ 18ರಂದು ಅವರ ಆರೋಗ್ಯ ಕೆಡಲು ಪ್ರಾರಂಭವಾದಾಗ ಅವರಿಗೆ ತಕ್ಷಣ ಐ.ಸಿ.ಯು ನಲ್ಲಿ ಸೇರಿಸಿದರು. ಅಲ್ಲಿ ಅವರು ಸಂಜೆಯ ಹೊತ್ತು ಅಗಲಿ ಹೋದರು. ಅವರು ಪತ್ನಿ ಒಬ್ಬ ಪುತ್ರ ಮತ್ತು ನಾಲ್ವರು

ಪುತ್ರಿಯರನ್ನು ಅಗಲಿ ಹೋಗಿದ್ದಾರೆ. ಎಲ್ಲಾ ಮಕ್ಕಳು ದಾಂಪತ್ಯ ಜೀವನ ಸಾಗಿಸುತ್ತಿದ್ದಾರೆ. ಮೃತರ ಪಿತನ ಕುಟುಂಬದವರೂ ಮಾತೆಯ ಕುಟುಂಬದವರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರ ಸಂತಾನ ಪರಂಪರೆಗೆ ಸೇರಿದವರಾಗಿದ್ದರು. ಅವರ ವಂಶಾವಳಿಯು ಹಝ್ರತ್ ಸೂಫಿ ಅಹ್ಮದ್ ಜಾನ್ ಸಾಹೆಬ್[ರ] ಅವರೊಂದಿಗೆ ಸೇರುತ್ತದೆ. ಅವರ ತಾತ ಹಝ್ರತ್ ಪೀರ್ ಮಝ್‌ಹರುಲ್ ಹಖ್ ಸಾಹೆಬ್[ರ] ಮತ್ತು ತಾಯಿಯ ಕಡೆಯಿಂದ ತಾತ ಹಝ್ರತ್ ಮಾಸ್ಟರ್ ಸಝೀರ್ ಹುಸೈನ್ ಸಾಹೆಬ್[ರ] ಇವರಿಬ್ಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬರಲ್ಲಿ ಸೇರಿದ್ದರು. ಹಝ್ರತ್ ಪೀರ್ ಮಝ್‌ಹರುಲ್ ಹಖ್ ಸಾಹೆಬ್ ಅವರಿಗೆ ಖಾದಿಯಾನನಲ್ಲಿ ಮದ್‌ರಸ ಅಹ್ಮದಿಯಾದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್[ರ] ರವರ ಸಹಪಾಠಿಯಾಗಲು ಸೌಭಾಗ್ಯ ಪಡೆದಿದ್ದರು. ಲುಧಿಯಾನದಿಂದ ಬಾಲ್ಯದಲ್ಲಿ ಹಿಜ್ರತ್ ಮಾಡಿ ಖಾದಿಯಾನ್‌ಗೆ ಬಂದಿದ್ದರು. ಸುಮಾರು ಆರು ತಿಂಗಳ ಕಾಲದವರೆಗೆ ಪೀರ್ ಮಝ್‌ಹರುಲ್ ಹಖ್ ಸಾಹೆಬ್ ಮುಂತಾದವರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಮನೆಯಲ್ಲಿ ವಾಸಿಸಲು ಸೌಭಾಗ್ಯ ಗಳಿಸಿದರು. ಮಾನ್ಯ ಡಾ॥ ಸಾಹೆಬ್‌ರವರ ತಾಯಿ ಹಕೀಮ್ ಮುಹಮ್ಮದ್ ಹುಸೈನ್ ಸಾಹೆಬ್ ಮರ್‌ಹೂಮ್ ಈಸರವರ ಮೊಮ್ಮಗಳಾಗಿದ್ದರು. ಡಾ॥ ಪೀರ್ ಮುಹಮ್ಮದ್ ನಖಿಉದ್ದೀನ್ ಸಾಹೆಬ್ 1947ರಲ್ಲಿ ಭಾರತದ ವಿಭಜನೆಯ ಕಾಲದಲ್ಲಿ ಅವರು ಒಂದು ವರ್ಷ ಪ್ರಾಯದವರಾಗಿದ್ದರು. ಹೀಗೆ ಸುಮಾರು 74ವರ್ಷ ಅವರ ಪ್ರಾಯದವರಾಗಿದ್ದರು. ಹೀಗೆ ಅವರು ತಮ್ಮ ಇಡೀ ಕುಟುಂಬ ಸಮೇತ ಖಾದಿಯಾನಗೆ ಹಿಜ್ರತ್ ಮಾಡಿ ಬಂದಿದ್ದರು. 1970ರಲ್ಲಿ ಅವರು ಎಂ.ಬಿ.ಬಿ.ಎಸ್ ಪದವಿ ಗಳಿಸಿದರು. ನಂತರ ಅವರು ಇಸ್ಲಾಮಾಬಾದ್‌ಗೆ ಆಗಮಿಸಿದರು. ಇಲ್ಲಿ ಅವರಿಗೆ ಸರಕಾರಿ ನೌಕರಿ ಲಭಿಸಿತು. ಬಹಳ ವರ್ಷ ಅವರು ಇಲ್ಲಿ ಕಾರ್ಯನಿರ್ವಹಿಸಿದ ನಂತರ ಇರಾನ್‌ಗೆ ಹೋದರು. ಎರಡು ಮೂರು ವರ್ಷಗಳ ಕಾಲ ಅಲ್ಲಿ ಕಾರ್ಯನಿರ್ವಹಿಸಿ ಪುನಃ ಪಾಕಿಸ್ತಾನಕ್ಕೆ ಬಂದರು. ಇಲ್ಲಿ ಇಸ್ಲಾಮಬಾದ್‌ನಲ್ಲಿ ತಮ್ಮ ಕ್ಲಿನಿಕ್ ತೆರೆದಿದ್ದರು. ಕಳೆದ ಇಪ್ಪತ್ತೈದು ಮೂವತ್ತು ವರ್ಷಗಳಿಂದ ಅವರು ತಮ್ಮ ಕ್ಲಿನಿಕ್ ನಡೆಸುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಅವರು ಯಶಸ್ವಿಯಾಗಿದ್ದರು. ಅವರು ಬಡವರಿಗೆ ಬಹಳ ಸೇವೆ ಸಲ್ಲಿಸುತ್ತಿದ್ದರು.

ಇಸ್ಲಾಮಾಬಾದ್ ಜಮಾಅತಿನ ಅಮೀರ್ ಆಗಿರುವ ಡಾ॥ ಅಬ್ದುಲ್ ಬಾರಿ ಸಾಹೆಬ್ ಬರೆಯುತ್ತಾರೆ: ಕಳೆದ ಹನ್ನೆರಡು ವರ್ಷಗಳ ಕಾಲ ಡಾಕ್ಟರ್ ಸಾಹಿಬರು ಇಸ್ಲಾಮಾಬಾದ್ ಜಮಾಅತಿನ ಖಾಝಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಯಾವಾಗಲೂ ಪವಿತ್ರ ಖುರ್‌ಆನ್ ಮತ್ತು ಸುನ್ನತ್ ಅನುಸಾರವಾಗಿ ತೀರ್ಪು ನೀಡುತ್ತಿದ್ದರು. ಎರಡು ಪಕ್ಷಗಳ ಜನರಿಗೂ ಅತ್ಯಂತ ಸಮಾಧಾನಕರವಾಗಿ ತೀರ್ಪು ನೀಡುತ್ತಿದ್ದರು. ಅತ್ಯಂತ ಸದ್ಗುಣ ಸಂಪನ್ನರೂ ವಾತ್ಸಲ್ಯವುಳ್ಳವರೂ ಬಡವರ ಬಗ್ಗೆ ಅನುಕಂಪವುಳ್ಳವರೂ ಎಲ್ಲರಿಗೂ ಪ್ರಿಯರಾದವರೂ ಆಗಿದ್ದರು. ಅವರು ಮುಗುಳ್ನಗುತ್ತಾ ಜನರನ್ನು ಭೇಟಿಯಾಗುತ್ತಿದ್ದರು. ಅಲ್ಲಾಹನ ಸೃಷ್ಟಿಗಳ ಸೇವೆ ಮಾಡಲು ಯಾವಾಗಲೂ ಮುಂದೆ ಇರುತ್ತಿದ್ದರು. ಜಮಾಅತಿನ ಬಡವರಾದ ಮತ್ತು ಬಲಹೀನರಾದ ರೋಗಿಗಳಿಗೆ ಅವರ ಕ್ಲಿನಿಕ್ ಯಾವಾಗಲೂ ಸ್ವಾಗತ ನೀಡುತ್ತಿತ್ತು. ಜನರಿಗೆ ಉಪಯೋಗಕಾರಿ ವ್ಯಕ್ತಿ ಆಗಿದ್ದರು. ಅವರ ಜನರೊಂದಿಗಿನ ಸಂಪರ್ಕವು ಬಹಳ ವಿಶಾಲವಾಗಿತ್ತು. ಇವರಲ್ಲಿ ಅಹ್ಮದಿಯೇತರ ಜನರು ಬಹಳಷ್ಟಿದ್ದರು. ಅಲ್ಲಾಹನು ಅವರಿಗೆ ಉತ್ತಮ ಮಾತಿನ ಶಕ್ತಿ ನೀಡಿದ್ದನು. ಹಾಗಾಗಿ ಅಹ್ಮದೀಯೇತರ ಜನರಿಗೆ ನೈಜ್ಯ ಸಂದೇಶ ತಲುಪಿಸುತ್ತಿದ್ದರು.

ಇವರು ಹೇಳುತ್ತಾರೆ ಡಾ॥ ಸಾಹೇಬರು ಅವರಿಗೆ ಹೇಳಿದರು 1970ರಲ್ಲಿ ನಾನು ಎಂ.ಬಿ.ಬಿ.ಎಸ್ ಪರೀಕ್ಷೆಯಲ್ಲಿ ಉತ್ತೀರ್ಣನಾದಾಗ ನನ್ನ ತಾತ ಹಝ್ರತ್ ಪೀರ್ ಮಝ್‌ಹರುಲ್ ಹಖ್ ಸಾಹೆಬ್ ಅವರ ಬಳಿ ರಬ್ವಕ್ಕೆ ಹೋಗಿ ಅವರಿಗೆ ಈ ಸುವಾರ್ತೆಯನ್ನು ತಿಳಿಸಿದೆ. ನಾನು ನನ್ನ ಕುಟುಂಬದಲ್ಲಿ ಮೊಟ್ಟಮೊದಲು ಡಾಕ್ಟರ್ ಆಗುವವನಾಗಿದ್ದೆ. ನನ್ನ ತಾತ ಬಹಳ ಸಂತೋಷಗೊಂಡು ನನಗೆ ಬಹಳಷ್ಟು ಉಪದೇಶಗಳನ್ನು ನೀಡಿದರು. ಅದರಲ್ಲಿ ಈ ಉಪದೇಶವೂ ಇತ್ತು ಅಂದರೆ ನೀನು ನಿನ್ನ ರೋಗಿಯರಿಗೆ ಔಷಧಿ ನೀಡುವ ಜೊತೆಯಲ್ಲಿ ಅವರಿಗಾಗಿ ಪ್ರಾರ್ಥನೆಯು ಮಾಡಬೇಕು. ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ ಯಾವ ವೈದ್ಯನು ತನ್ನ ರೋಗಿಯರಿಗಾಗಿ ದುಆ ಮಾಡದೆ ಕೇವಲ ತನ್ನ ಚಿಕಿತ್ಸೆಯ ಮೇಲೆ ಭರವಸೆ ಇರಿಸುತ್ತಾನೊ ಆತನು ಶಿರ್ಕ್ ಮಾಡುವವನಾಗಿದ್ದಾನೆ. ಡಾ॥ ನಖಿಉದ್ದೀನ್ ಸಾಹೆಬ್ ಹೇಳುತ್ತಿದ್ದರು: ನಾನು ವೈದ್ಯನಾಗಿ 50 ವರ್ಷಗಳ ಕಾಲ ಕಳೆದಿದೆ ಅಂದಿನಿಂದಲೂ ನಾನು ನನ್ನ ತಾತನ ಮಾತನ್ನು ಅಂಗೀಕರಿಸಿ ಅದನ್ನು ಕಾರ್ಯರೂಪಕ್ಕೆ ತಂದು ನಾನು ನನ್ನ ರೋಗಿಗಳನ್ನು ಬಹಳ ಕಡಿಮೆ ದರದಲ್ಲಿ ಚಿಕಿತ್ಸೆ ನೀಡುತ್ತಿದ್ದೇನೆ, ಅವರೊಂದಿಗೆ ಪ್ರೀತಿಯಿಂದ ವರ್ತಿಸುತ್ತೇನೆ, ಅದಲ್ಲದೆ ನಾನು ಅವರಿಗಾಗಿ ಎರಡು ರಕತ್ ನಫಿಲ್ ನಮಾಝ್ ಸಹ ಸಲಿಸುತ್ತೇನೆ ಅದರಲ್ಲಿ ಅವರಿಗಾಗಿ ಪ್ರಾರ್ಥಿಸುತ್ತೇನೆ. ಈ ಮಾರ್ಗವನ್ನು ನಮ್ಮ ಎಲ್ಲಾ ವೈದ್ಯರೂ ಅನುಸರಿಸಬೇಕಾಗಿದೆ. ಕೇವಲ ತಮ್ಮ ಚಿಕಿತ್ಸೆಯ ಮೇಲೆ ಅಥವಾ ಔಷಧಿಗಳ ಮೇಲೆ ಭರವಸೆ ಇರಿಸದೆ ತಮ್ಮ ರೋಗಿಯವರೊಂದಿಗೆ ಉತ್ತಮವಾಗಿ ವ್ಯವಹರಿಸಿ ಅವರಿಗಾಗಿ ಪ್ರಾರ್ಥಿಸಿದರೆ ಉತ್ತಮ. ಅದರೊಂದಿಗೆ ಎರಡು ರಕತ್ ನಫಿಲ್ ನಮಾಝ್ ನಹ ನಿರ್ವಹಿಸಿದರೆ ಇದು ಅತ್ಯುತ್ತಮವಾಗುತ್ತದೆ.

ಡಾಕ್ಟರ್ ಸಾಹಿಬರ ಪತ್ನಿ ಉಝ್ಮ ಸಾಹಿಬ ಹೇಳುತ್ತಾರೆ: ನನ್ನ ಪತಿ ಅತ್ಯಂತ ನಿಷ್ಠಾವಂತ ಸಮರ್ಪಣೆ ಮನೋಭಾವದ ಅಹ್ಮದಿ ಆಗಿದ್ದರು. ಧರ್ಮ ಪ್ರಚಾರ ಮಾಡುವ ಭಾವನೆ ಅವರಲ್ಲಿ ತುಂಬಿ ಹರಿಯುತ್ತಿತ್ತು. ಅವರು ತಮ್ಮ ಜೀವನದಲ್ಲಿ ಬಹಳಷ್ಟು ಜನರನ್ನು ಬೈಅತ್ ಮಾಡಿಸಿದಾರೆ. ಮತ್ತು ನೂರಾರು ಜನರನ್ನು ಅವರು ಅಹ್ಮದಿಯತ್‌ನ ಸತ್ಯಾಂಶವನ್ನು ಒಪ್ಪುವ ಹಾಗೆ ಮಾಡಿದ್ದಾರೆ ಅನೇಕ ಜನರು ಭಯದಿಂದ ಅಹ್ಮದಿ ಆಗಲಿಲ್ಲ ಆದರೆ ಅಹ್ಮದಿಯತ್‌ನ ಸತ್ಯಾಂಶವನ್ನು ಒಪ್ಪಿದ್ದಾರೆ. ಮತ್ತೆ ಹೇಳುತ್ತಾರೆ: ಅವರು ಹೀಗೆ ಬರೆದಿದ್ದಾರೆ ಡಾ॥ ಸಾಹೇಬರು ತಮ್ಮ ರೋಗಿಯವರಿಗಾಗಿ ನಫಿಲ್ ನಮಾಝ್ ನಿರ್ವಹಿಸುತ್ತಿದ್ದರು ಮತ್ತೆ ಅವರಿಗಾಗಿ ದುಆ ಮಾಡುತ್ತಿದ್ದರು. ರೋಗಿಗಳ ಪ್ರೀತಿಯನ್ನು ಕಂಡು ಸಾಂಕ್ರಮಿಕ ರೋಗದ ದಿನಗಳಲ್ಲಿಯು ಅವರ ರೋಗಿಗಳು ಚಿಂತಕ್ರಾಂತರಾಗಬಾರದೆಂದು ಅವರು ಕ್ಲೀನಿಕ್ಕಿಗೆ ಹೋಗುತ್ತಿದ್ದರು. ಜ್ವರ ಬಂದಾಗ ರಜೆ ಮಾಡುತ್ತಿದ್ದರು. ಅವರು ಮತ್ತೆ ಬರೆಯುತ್ತಾರೆ: ಇದು ಅವರಲ್ಲಿದ್ದ ವಿಶೇಷ ಗುಣಗಳಾಗಿದ್ದವು. ರೋಗಿಗಳನ್ನು ಪರಿಶೀಲಿಸಿ ಅವರಿಗೆ ಚಿಕಿತ್ಸೆ ನೀಡುವುದು, ಅವರಿಗಾಗಿ ಪ್ರಾರ್ಥಿಸುವುದು ಇವೆಲ್ಲದರೊಂದಿಗೆ ಅವರು ಅತ್ಯಂತ ಅನುಸರಣೆ ತೋರುವ ಪುತ್ರನೂ ಮಾದರಿ ಪತಿಯೂ ವಾತ್ಸಲ್ಯಮಯ ಪಿತನೂ ಸಹೋದರ ಸಹೋದರಿಯರ ಬಗ್ಗೆ ಕಾಳಜಿ ಹೊಂದಿದ ಸರ್ವ ಜನರ ಹಿತೈಷಿಯೂ ಆಗಿದ್ದರು. ಅವರಿಗೆ ಜೀವಂತ ದೇವನೊಂದಿಗೆ ಬಹಳ ಗಾಢವಾದ ಸಂಬಂಧವಿತ್ತು. ಅವರು ಅಪರಿಮಿತವಾಗಿ ಪ್ರಾರ್ಥಿಸುವವರಾಗಿದ್ದರು. ಅಲ್ಲಾಹನು ಸಹ ಅವರ ಪ್ರಾರ್ಥನೆಗಳಿಗೆ ಉತ್ತರಿಸುತ್ತಿದ್ದನು. ಹೇಳುತ್ತಾರೆ ಅವರು ತಮ್ಮ ಪುತ್ರಿಗಾಗಿ ಬಹಳ ದುಆ ಮಾಡುತ್ತಿದ್ದರು. ಅವಳ ಮನೆಯಲ್ಲಿ ಸಂತಾನ ವಿರಲಿಲ್ಲ. ಅವಳಿಗಾಗಿ ಬಹಳ ದುಆ ಮಾಡುತ್ತಿದ್ದರು. ಒಮ್ಮೆ ರಾತ್ರಿ ನಾವು ಆಕೆಯ ಮನೆಯಲ್ಲಿದ್ದೆವು ಮುಂಜಾನೆ ತಹಜ್ಜುದ್ ನಮಾಝಿಗಾಗಿ ಅವರು ವಝು ಮಾಡಿ ವಾಶ್‌ರೂಮ್‌ನಂದ ಹೊರಗೆ ಬಂದರೆ ತಕ್ಷಣ ಅವರು ಸ್ವಲ್ಪ ಬಾಗಿದರು ಅದನ್ನು ಕಂಡು ನಾವು ಅವರಿಗೆ ಕೇಳಿದೆವು ಏನಾಯಿತು ಎಂದು? ಆಗ ಅವರು ಹೇಳಿದರು ಈ ಮಂಚದ ಮೇಲೆ ಒಂದು ಮಗುವಿತ್ತಲ್ಲ ಅದೆಲ್ಲಿ? ಎಂದು. ಅಂದರೆ ಅವರಿಗೆ ಅಲ್ಲಾಹನು ಸಾಕ್ಷಾತ್ಕಾರದಿಂದ ತಿಳಿಸಿದನು. ಒಂದು ಮಗು ಈ ಮಂಚದ ಮೇಲಿತ್ತು ಎಂದು. ಅವರು ಹೇಳುತ್ತಾರೆ ಆ ಮಂಚದ ಮೇಲಿಂದ ಬೀಳುತ್ತಿತ್ತು ಅದನ್ನು ಹಿಡಿಯಲು ಬಾಗಿದೆ ಎಂದು ಹೇಳಿದರು. ಈ ಘಟನೆಯ ಕೆಲವು ಕಾಲದ ನಂತರ ಅಲ್ಲಾಹನ ಅನುಗ್ರಹದಿಂದ ಅವರ ಪುತ್ರಿಗೆ ಪುತ್ರ ಜನಿಸಿದನು.

ಅರ್‌ಶದ್ ಏಜಾಝ್ ಸಾಹೆಬ್ ಅವರ ಸಹೋದರಿಯ ಪುತ್ರನಾಗಿದ್ದಾರೆ ಅವರ ಅಳಿಯ ಆಗಿದ್ದಾರೆ ಅವರು ಹೇಳುತ್ತಾರೆ: ದಿವಂಗತರು ನನ್ನ ಸಂಬಂಧದಲ್ಲಿ ನನ್ನ ತಾಯಿಯ ಹಿರಿಯ ಸಹೋದರರಾಗಿದ್ದರು. ಆದ್ದರಿಂದ ನಾನು ಅವರ ಬಗ್ಗೆ ಬಹಳಷ್ಟು ಕೇಳಿದ್ದೆ. ಅಪರಿಮಿತ ಪ್ರಾರ್ಥಿಸುವವರಾಗಿದ್ದರು, ಬಡ ಜನರಿಗೆ ಸಹಾಯ ಮಾಡುವವರಾಗಿದ್ದರು, ನಿಷ್ಠಾವಂತ ಮತ್ತು ಚಿಕ್ಕ ಚಿಕ್ಕ ವಿಷಯಗಳಲ್ಲಿಯು ಅಲ್ಲಾಹ್ ಹಾಗೂ ಅವನ ಪ್ರವಾದಿ[ಸ] ರ ಕಡೆ ಗಮನ ಹರಿಸುವವರಾಗಿದ್ದರು. ಯಾವುದೇ ವಿಷಯದ ಬಗ್ಗೆ ಸಲಹೆ ಯಾಚಿಸಬೇಕಾದರೆ ನಮ್ಮ ಮನಸ್ಸಿಗೆ ಇವರ ಹೆಸರು ಬರುತ್ತಿತ್ತು. ತಮ್ಮ ಸೋದರ ಮಾವ ಡಾ॥ ಸಾಹೇಬರ ಬಗ್ಗೆ ಹೇಳುತ್ತಾರೆ ಅವರ ಇನ್ನೊಂದು ಕಷ್‌ಫ್ (ದಿವ್ಯ ಸ್ವಪ್ನ) ಎಂ.ಟಿ.ಎ ಯ ಬಗ್ಗೆ ಇದೆ. ಅದರ ಅರಿವು ಯಾರಿಗಾದರು ಇದೇಯೋ ಇಲ್ಲವೋ ಗೊತ್ತಿಲ್ಲ. ಅವರು ಹೇಳುತ್ತಾರೆ: 2010ರ ಘಟನೆ ಇದಾಗಿದೆ. 2010ರಲ್ಲಿ ಟಚ್ ಸ್ಕ್ರೀನ್ ಫೋನ್‌ಗಳು ಪಾಕಿಸ್ತಾನದಲ್ಲಿ ಸಾಮಾನ್ಯವಾಗಿರಲಿಲ್ಲ. ಆಗ ಅವರು ಹೇಳುತ್ತಾರೆ ನಾನು ನನ್ನ ಸೋದರ ಮಾವನ ಬಳಿ ಕುಳಿತಿದ್ದೆ ಆಗ ಅವರು ಹೇಳಿದರು ಕೆಲ ದಿವಸಗಳ ಮುಂಚೆ ನಾನು ಒಂದು ಘೋಷಣೆ ಆಗುತ್ತಿರುವುದನ್ನು ನೋಡಿದೆ. ಅಝಾನ್ ಆಗುವ ರೀತಿಯಲ್ಲಿ ಆಗ ಎಲ್ಲಾ ಜನರು ತಮ್ಮ ಜೋಬಿನಿಂದ ಯಾವುದೋ ವಸ್ತು ತೆಗೆದುಕೊಂಡು ತಮ್ಮ ಕಿವಿಯಿಂದ ಏನೋ ಕೇಳಿಸುತ್ತಿದ್ದಾರೆ. ವಿಚಾರಿಸಿದಾಗ ತಿಳಿದು ಬಂದದೇನೆಂದರೆ ಖಲೀಫರ ಖುತ್‌ಬದ ಸಮಯವಾಗಿದೆ ಅದನ್ನು ಎಲ್ಲಾ ಜನರು ಲೈವ್ ಆಲಿಸುತ್ತಿದ್ದಾರೆ. ಈ ಮಾತು ಪೂರ್ಣವಾಗುತ್ತಿರುವುದು ನಾವು ಇಂದು ಪ್ರತಿ ವಾರ ನೋಡುತ್ತಿದ್ದೇವೆ.

ಮತ್ತೆ ಅವರು ಬರೆಯುತ್ತಾರೆ ಹಝ್ರತ್ ಸೂಫಿ ಅಹ್ಮದ್ ಜಾನ್ ಸಾಹೆಬ್[ರ] ರವರ ಕುಟುಂಬಕ್ಕೆ ಸೇರಿರುವುದು ಗೌರವದ ವಿಷಯ ಎಂದು ಪರಿಗಣಿಸುತ್ತಿದ್ದರು ಮತ್ತು ತಮ್ಮ ಇಡೀ ಕುಟುಂಬದವರನ್ನು ಅಲ್ಲಾಹನನೊಂದಿಗೆ

ಸಂಬಂಧ ಹೊಂದಲು ಉಪದೇಶಿಸುತ್ತಿದ್ದರು. ಕೇವಲ ಓರ್ವ ದೈವ ಭಕ್ತರ ಕುಟುಂಗಕ್ಕೆ ಸೇರಿದರೆ ಸಾಕಾಗುವುದಿಲ್ಲ ಬದಲಿಗೆ ತಮ್ಮ ಸಂಪರ್ಕ ಅಲ್ಲಾಹನೊಂದಿಗೆ ಹೊಂದಿರಬೇಕು ಎಂದು ಹೇಳುತ್ತಿದ್ದರು. ಯಾವಾಗಲೂ ದಾವತ್ ಇಲಲ್ಲಾಹ್ ಕಡೆ ಗಮನ ನೀಡುತ್ತಿದ್ದರು. ಇದರ ಬಗ್ಗೆ ಇವರು ಸಹ ಅದನ್ನೆ ಪ್ರಸ್ತಾಪಿಸಿದ್ದಾರೆ ಮತ್ತು ಅನೇಕ ಜನರು ಇದರ ಬಗ್ಗೆ ಹೇಳಿದ್ದಾರೆ. ಅವುಗಳನ್ನೆಲ್ಲ ಇಲ್ಲಿ ಪ್ರಸ್ತಾಪಿಸಲು ಸಾಧ್ಯವಿಲ್ಲ. ಅವರು ದಾವತ್ ಇಲಲ್ಲಾಹ್ ಮಾಡುವುದರ ಬಗ್ಗೆ ಬಹಳ ಆಸಕ್ತಿ ಹೊಂದಿದ್ದರು ಮತ್ತು ಪವಿತ್ರ ಖುರ್‌ಆನಿನಿಂದ ಬಹಳ ಸ್ಪಷ್ಟವಾದ ಸಾಕ್ಷ್ಯಾಧಾರಗಳನ್ನು ನೀಡುತ್ತಿದ್ದರು ಎಂದು ಎಲ್ಲರೂ ಬರೆದಿದ್ದಾರೆ.

ಜಲ್ಸ ಸಾಲಾನದ ಸಂದರ್ಭದಲ್ಲಿ ವಿಶೇಷವಾಗಿ ಜಮಾಅತ್ತಿನ ಜನರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಅವರ ಅತಿಥಿ ಸತ್ಕಾರ ಮಾಡುತ್ತಿದ್ದರು. ಜಲ್ಸವನ್ನು ಕೇಳಿಸುತ್ತಿದ್ದರು ಹೀಗೆ ತಬ್‌ಲೀಗ್ ಮಾಡುತ್ತಿದ್ದರು. ಇವರು ಹೇಳುತ್ತಾರೆ ಕರೋನ ಸಾಂಕ್ರಮಿಕ ರೋಗ ಹೊರಡಿದರು ಇವರು ಕ್ಲೀನಿಕನ್ನು ಹೋಗುವುದು ಬಿಡಲಿಲ್ಲ. ನಾನು ಅವರಿಗೆ ಅನೇಕ ಬಾರಿ ಪೋನ್ ಮುಖಾಂತರ ಹೇಳಿದೆ ಮತ್ತು ಕ್ಲೀನಿಕ್ಕಿಗೆ ಹೋಗದಿರಿ ಎಂದು ಹೇಳಿದೆ ಅವರು ಹೀಗೆ ಹೇಳುತ್ತಿದ್ದರು: ವೈದ್ಯ ಮನೆಯಲ್ಲಿ ಕುಳಿತುಕೊಂಡರೆ ರೋಗಿಯರು ಏನು ಮಾಡಬೇಕು. ಅವರು ನನಗೆ ಅನೇಕ ಸಾಕ್ಷ್ಯಾಧಾರಗಳನ್ನು ನೀಡುತ್ತಿದ್ದರು ಅದಕ್ಕೆ ನನಗೆ ಉತ್ತರ ನೀಡಲು ಸಾಧ್ಯವಾಗುತ್ತಿರಲಿಲ್ಲ. ಅವರು ಬಹಳ ರೋಗ ಬಾಧಿತರಾದರು ಸಹ ಅವರು ಕ್ಲೀನಿಕ್ಕಿಗೆ ಹೋಗುತ್ತಿದ್ದರು ಮತ್ತು ಯಾವಾಗಲೂ ಹೀಗೆ ಹೇಳುತ್ತಿದ್ದರು: ನಾವು ಇಲ್ಲಿ ಸೇವೆ ಮಾಡಲು ಬರುವುದು. ಕ್ಲೀನಿಕ್‌ನ ಉದ್ದೇಶ ಕೇವಲ ಸಂಪತ್ತುಗಳಿಸುವುದಲ್ಲ ಬದಲಿಗೆ ಸೇವೆ ಮಾಡುವುದಾಗಿದೆ.

ಅವರ ಓರ್ವ ಪುತ್ರಿ ನೂರ್ರೈನ್ ಆಯಿಶ ನೂರುದ್ದೀನ್ ಹೇಳುತ್ತಾರೆ: ನನ್ನ ತಂದೆ ಬಹಳ ಕರುಣೆದೋರುವ ಹಾಗೂ ಬಹಳ ಪ್ರಾರ್ಥಿಸುವ ವ್ಯಕ್ತಿ ಆಗಿದ್ದರು. ಪ್ರತಿಯೊಂದು ವಿಷಯದಲ್ಲಿ ಯಾವಾಗಲೂ ದುಆ ಮಾಡಲು ಹಾಗೂ ಅಲ್ಲಾಹನಿಂದ ಸಂಪರ್ಕ ಹೊಂದಲು ಉಪದೇಶಿಸುತ್ತಿದ್ದರು. ಅವರು ಹೇಳುತ್ತಾರೆ ನಾವು ಯಾವುದಾದರು ವಿಷಯದಲ್ಲಿ ಅವರಿಗೆ ದುಆ ಮಾಡಲು ಹೇಳಿದಾಗ ಅವರು ಮೊದಲು ನೀವು ದುಆ ಮಾಡಿರಿ ನಾನು ಸಹ ದುಆ ಮಾಡುವೆನು ಎಂದು ಹೇಳಿದ ನಂತರ ಅಲ್ಲಾಹನಿಂದ ಮಾರ್ಗದರ್ಶನ ಪಡೆದು ನಮಗೆ ಅವರಿಗೆ ಅಲ್ಲಾಹನು ಸ್ವಪ್ನದ ಮೂಲಕ ತಿಳಿಸಿದ್ದಾನೆ ಎಂದು ಹೇಳುತ್ತಿದ್ದರು. ತಮ್ಮ ವೃದ್ಧಿಯ ಮೂಲಕ ಸಾವಿರಾರು ಜನರಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತಿದ್ದರು. ರೋಗಿಗಳಿಗೆ ಬಹಳ ಕಡಿಮೆ ದರದಲ್ಲಿ ಚಿಕಿತ್ಸೆ ನೀಡುತ್ತಿದ್ದರು. ಹೀಗಾಗಿ ಅವರ ಬಳಿ ಬಡ ರೋಗಿಗಳು ಹೆಚ್ಚಾಗಿ ಬರುತ್ತಿದ್ದರು. ಮತ್ತೆ ಅವರು ಬರೆಯುತ್ತಾರೆ ನನ್ನ ತಂದೆಯವರು ಓಡಾಡುತ್ತಿರುವ ಪವಿತ್ರ ಖುರ್‌ಆನ್ ಆಗಿದ್ದರು. ಯಾವುದೇ ವಿಷಯದಲ್ಲಿ ಅವರು ಪವಿತ್ರ ಖುರ್‌ಆನಿನ ಮೂಲಕವೇ ಮಾರ್ಗದರ್ಶನ ಪಡೆಯುತ್ತಿದ್ದರು. ಅವರು ಮೊದಲು ಪವಿತ್ರ ಖುರ್‌ಆನಿನ ವಚನವನ್ನು ಓದಿ ಅದರ ಅರ್ಥ ಹೇಳುತ್ತಿದ್ದರು. ಮತ್ತೆ ಖಿಲಾಫತ್ತಿನ ಬಗ್ಗೆ ಹೇಳಬೇಕಾದರೆ: ಅವರಿಗೆ ಖಿಲಾಫತ್‌ನ ಬಗ್ಗೆ ಅಪಾರವಾದ ಪ್ರೀತಿ ಇತ್ತು ಎಂ.ಟಿ.ಎನಲ್ಲಿ ಹುಝೂರ್‌ರವರ ಖುತ್‌ಬ ಜುಮುಅ ಪ್ರಸಾರ ವಾಗುತ್ತಿರುವಾಗ ಅವರು ತಮ್ಮ ಮನೆಯಲ್ಲಿಯೇ ಡಿಶ್‌ನ ವ್ಯವಸ್ಥೆ ಮಾಡಿದರು ಅದರ ಉದ್ದೇಶ ಜನರು ನಮ್ಮ ಮನೆಗೆ ಬಂದು ಖಲೀಫರನ್ನು ನೋಡಲಿ ಎಂದಾಗಿತ್ತು. ಮತ್ತು ಜಲ್ಸ ಸಾಲಾನದ ಕೊನೆಯ ದಿನ ಹುಝೂರ್‌ರವರ ಭಾಷಣವನ್ನು ಕೇಳಲು ತಮ್ಮ ಮನೆಯಲ್ಲಿಯೇ ವ್ಯವಸ್ಥೆ ಮಾಡಿ ಅಲ್ಲಿ ಬಹುತೇಕ ಅಹ್ಮದೀಯೇತರರನ್ನು ಕರೆಸಿ ಹುಝೂರ್‌ರವರ ಭಾಷಣವನ್ನು ಕೇಳಿಸುತ್ತಿದ್ದರು. ಬೈಅತ್ ಸಮಾರಂಭವನ್ನು ಸಂಪೂರ್ಣವಾಗಿ ತೋರಿಸುತ್ತಿದ್ದರು. ಮತ್ತೆ ಅವರು ಹೇಳುತ್ತಿದ್ದರು ಇವರೆಲ್ಲರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅತಿಥಿಗಳಾಗಿದ್ದಾರೆ.

ಅವರ ಪುತ್ರಿ ವರ್‌ದ ಹೇಳುತ್ತಾರೆ: ನಮಗೆ ಚಿಕ್ಕ ವಯಸ್ಸಿನಿಂದಲೇ ನಮಾಝ್, ಪವಿತ್ರ ಖುರ್‌ಆನ್, ಉಪವಾಸ ಮೊದಲಾದವುಗಳ ಬಗ್ಗೆ ಶಿಕ್ಷಣ ನೀಡಿದ್ದರಲ್ಲದೆ ಚಂದ ಕೊಡುವ ಮತ್ತು ದಾನಧರ್ಮ ನೀಡುವ ಸ್ವಭಾವವನ್ನು ಅವರು ನಮ್ಮಲ್ಲಿ ರೂಢಿಸಿದ್ದರು. ನಮ್ಮೆಲ್ಲರ ಸಹೋದರಿಯರ ವಿವಾಹದ ಸಂದರ್ಭದಲ್ಲಿ ಅವರು ಕೇವಲ ಧಾರ್ಮಿಕ ವಿಷಯವನ್ನೇ ನೋಡಿ ವಿವಾಹ ಮಾಡಿದರು. ಎಂದೂ ಲೌಕಿಕ ವಸ್ತುಗಳ ಬಗ್ಗೆ ಚಿಂತಿಸಲಿಲ್ಲ. ಬಾಲ್ಯದಿಂದಲೂ ನಮಗೆ ಹೇಳುತ್ತಿದ್ದರು ಎಲ್ಲಾ ರೀತಿಯ ಆಸೆಗಳು ಪೂರೈಸಲು ಸಾಧ್ಯವಿಲ್ಲ ಎಂದು. ಆದ್ದರಿಂದ ಯಾವಾಗಲು ದುಆ ಹಾಗೂ ಸಹನೆಯಿಂದಿರಬೇಕು.

ಅವರ ಓರ್ವ ಅಳಿಯ ಅಬ್ದುಲ್ ಖುದ್ದೂಸ್ ಸಾಹೆಬ್ ಹೇಳುತ್ತಾರೆ: ನನ್ನ ಹಾಗೂ ನನ್ನ ಮಾವನವರ ಸಂಬಂಧ ತಂದೆ ಹಾಗೂ ಮಗನ ಸಂಬಂಧದ ಹಾಗಿತ್ತು. ನನಗೆ ಯಾವಾಗಲು ಅವರೊಂದಿಗೆ ಭೇಟಿಯಾಗಲು ಉತ್ಸಾಹವಿರುತ್ತಿತ್ತು ಏಕೆಂದರೆ ಅವರಿಂದ ಯಾವುದಾದರು ಹೊಸ ವಿಷಯ ತಿಳಿದುಕೊಳ್ಳ ಬಹುದು ಎಂದು. ಅವರು ಹೇಳುತ್ತಾರೆ ನಾನು ವಿವಾಹ ಆದ ಪ್ರಾರಂಭದ ದಿನಗಳಲ್ಲಿ ಅವರೊಂದಿಗೆ ನಾನು ಸ್ವತಂತ್ರವಾಗಿರುತ್ತಿರಲಿಲ್ಲ, ಸಂಕೋಚ ಹೆಚ್ಚಾಗಿತ್ತು. ಅವರು ನಮ್ಮೊಂದಿಗೆ ಎಂತಹ ಆತ್ಮೀಯತೆಯಿಂದ ವರ್ತಿಸಿದರು ಎಂದರೆ ನಮ್ಮ ಸಂಕೋಚವೆ ದೂರವಾಯಿತು. ಅವರಿಗೆ ಯಾವುದೇ ಲೌಕಿಕ ವಿಷಯದಲ್ಲಿ, ರಾಜಕೀಯದಲ್ಲಿ ಯಾವುದೇ ಉತ್ಸಾಹವಿರಲಿಲ್ಲ. ಆರಾಧನೆ, ಖುರ್‌ಆನ್, ಧಾರ್ಮಿಕ ಬೋಧನೆ ಹಾಗೂ ನೈತಿಕತೆಯ ವಿಷಯದಲ್ಲಿ ಅವರಿಗೆ ಉತ್ಸಾಹವಿತ್ತು. ಬಿದ್‌ಅತ್‌ಗಳ ವಿರೋಧಿ ಆಗಿದ್ದರು ವಿಶೇಷವಾಗಿ ಮದುವೆ ಸಮಾರಂಭಗಳಲ್ಲಿ ಅವರು ಕೆಟ್ಟ ಪದ್ಧತಿಗಳನ್ನು ತಡೆದರು.

ಅದೇ ರೀತಿ ಅವರ ಇನ್ನೊರ್ವ ಪುತ್ರಿ ಖುರ್ರತುಲ್ ಐನ್ ಹಾದಿಯ ಹೇಳುತ್ತಾರೆ: ನಮ್ಮ ತಂದೆ ನನಗೆ ಎಂದೂ ಯಾರ ಬಗ್ಗೆಯು ಯಾವುದೇ ಮಾತನ್ನು ಮನಸ್ಸಿನಲ್ಲಿಟ್ಟುಕೊಳ್ಳ ಬೇಡ ಎಂದು ಉಪದೇಶಿಸಿದರು. ತಮ್ಮ ಮಾವರ ಮನೆಯವರನ್ನು ತಮ್ಮ ಮನೆಯವರು ಎಂದು ತಿಳಿದುಕೊ. ಯಾರಿಗೂ ಸಹ ತನ್ನ ಮಾತಿನ ಮುಖಾಂತರವಾಗಲಿ ಅಥವ ತನ್ನ ಕಾರ್ಯದಿಂದಾಗಲಿ ತೊಂದರೆ ನೀಡಬೇಡ. ಅವರು ಹೀಗೂ ಸಹ ಉಪದೇಶಿಸಿದರು: ಒಳ್ಳೆಯವರೊಂದಿಗೆ ಒಳ್ಳೆಯವರ ಹಾಗೆ ವ್ಯವಹಾರ ಮಾಡುವುದು ವಿಶೇಶವಾದ ವಿಷಯವಲ್ಲ ಕೆಟ್ಟ ಜನರೊಂದಿಗೆ ಒಳ್ಳೆಯ ರೀತಿಯಲ್ಲಿ ವ್ಯವಹರಿಸುವುದು ದೊಡ್ಡ ವಿಷಯವಾಗಿದೆ. ಹೀಗೆ ನಮಗೆ ಇಸ್ಲಾಮ್ ಬೋಧಿಸುತ್ತದೆ. ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ನಮಗೆ ಈ ಕಾಲಘಟ್ಟದಲ್ಲಿ ಇದು ನೈತಿಕತೆ ಆಗಿದೆ ಮತ್ತು ಈ ವಿಷಯಗಳು ಬೇರೆಯವರ ಗಮನ ಸೆಳೆಯುತ್ತದೆ ಎಂದು ತಿಳಿಸಿದ್ದಾರೆ. ಮತ್ತೆ ಅವರು ಹೇಳುತ್ತಾರೆ: ಕಿಡಿಗೇಡಿತನ ಕೊಲೆಗಿಂತಲು ದೊಡ್ಡ ಪಾಪವಾಗಿದೆ. ಆದ್ದರಿಂದ ಕಿಡಿಗೇಡಿತನವನ್ನು ತಡೆಯಲು ಸತ್ಯವಂತನಾಗಿ ಸುಳ್ಳುಗಾರನ ಹಾಗೆ ವರ್ತಿಸ ಬೇಕಾಗುತ್ತದೆ. ಇದು ಸಹ ಬಹಳ ಉತ್ತಮವಾದ ಉಪದೇಶ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಮಾಡಿದ್ದಾರೆ ಇಂದಿನ ಕಾಲದಲ್ಲಿ ಪೋಷಕರು ತಮ್ಮ ಮಕ್ಕಳನ್ನು ಇಂತಹ ಉಪದೇಶವನ್ನು ಮಾಡಿದರೆ ಒಂದು ಸುಂದರವಾದ ಸಮಾಜವನ್ನು ನಾವು ಸೃಷ್ಟಿಸಬಹುದು.

ಡಾಕ್ಟರ್ ಸಾಹಿಬರ ಪುತ್ರ ಪೀರ್ ಮುಹ್‌ಯುದ್ದೀನ್ ಸಾಹಿಬ್ ಹೇಳುತ್ತಾರೆ: ನಾನು ಸ್ವಪ್ನದಲ್ಲಿ ಕಂಡೆನು: ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ನಮ್ಮ ಮನೆಯ ಮೊಗಸಾಲೆಯಲ್ಲಿ ದರ್ಸ್ ನೀಡುತ್ತಿದ್ದಾರೆ. ಅವರು ನನ್ನೊಂದಿಗೆ ಹೇಳಿದರು: ನಿಮ್ಮ ಪಿತ ವಲಿಯುಲ್ಲಾಹ್ ಆಗಿದ್ದಾರೆ. ನನ್ನನ್ನು ನಂಬಿ ಅವರು ವಲಿಯುಲ್ಲಾಹ್ ಆಗಿದ್ದಾರೆ ಎಂದರು.

ಬಡ ಜನರ ಬಗ್ಗೆ ಬಹಳ ಕಾಳಜಿವಹಿಸುವವರಾಗಿದ್ದರು. ಅನೇಕ ಕುಟುಂಬಗಳನ್ನು ಒಂದು ಮಾಸದ ದಿನಸಿ ಮತ್ತು ಮಕ್ಕಳ ವಿದ್ಯಭ್ಯಾಸ, ಔಷಧಿ ಹಾಗೂ ಅವರ ಚಿಕಿತ್ಸೆಯ ಹೊಣೆಗಾರಿಕೆಗೆ ನಿಭಾಯಿಸುತ್ತಿದ್ದರು. ಒಂದು ದಿನದಲ್ಲಿ ಶೇ.50ರಷ್ಟು ಜನರಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತಿದ್ದರು.

ಅದೇ ರೀತಿ ಅವರ ಇನ್ನೊರ್ವ ಅಳಿಯ ಅಬ್ದುಸ್ಸಮದ್ ಸಾಹೆಬ್ ಹೇಳುತ್ತಾರೆ: ಪವಿತ್ರ ಖುರ್‌ಆನಿನೊಂದಿಗೆ ಬಹಳ ಪ್ರೇಮವಿತ್ತು. ಯಾವುದಾದರು ಉಲ್ಲೇಖ ನೀಡಬೇಕಾದರೆ ಅವರು ಖುರ್‌ಆನಿನ ವಚನ ಅವಶ್ಯಕವಾಗಿ ಓದುತ್ತಿದ್ದರು. ಅನಂತರ ಅದರ ಅನುವಾದ ನೀಡುತ್ತಿದ್ದರು. ಅಹ್ಮದೀಯೇತರರು ಯಾರಾದರು ಅವರಿಗೆ ಮಿರ್ಝಾ ಗುಲಾಮ್ ಅಹ್ಮದ್ ಸಾಹೆಬ್‌ರವರ ಯಾವುದಾದರು ಪವಾಡ ತೋರಿಸಿರಿ ಎಂದು ಹೇಳುತ್ತಿದ್ದರೆ ಅವರು ಹೇಳುತ್ತಿದ್ದರು: ನಾನು ಅವರ ಒಂದು ಪವಾಡವಾಗಿದ್ದೇನೆ ಎಂದು ಹೇಳುತ್ತಿದ್ದರು. ಅವರು ಸಂಪೂರ್ಣವಾದ ಅಹ್ಮದಿ ಆಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಜಮಾಅತ್ತಿನೊಂದಿಗೆ ಆಶಿಸಿದ ಹಾಗೆ ಅವರು ಆಗಿದ್ದರು. ಅವರ ವ್ಯಕ್ತಿತ್ವದ ಒಂದು ವಿಶೇಷತೆ ಏನಾಗಿತ್ತು ಎಂದರೆ ಅವರೊಂದಿಗೆ ಭೇಟಿಯಾಗುವವರ ಸ್ವಭಾವವು ಒಳಿತಿನ ಕಡೆ ಪರಿವರ್ತನೆಗೊಳ್ಳುತ್ತಿತ್ತು. ಇದು ಓರ್ವ ದೈವ ಪುರುಷನ ವಿಶೇಷತೆ ಆಗಿರುತ್ತದೆ ಅವರೊಂದಿಗೆ ಕುಳಿತುಕೊಳ್ಳುವವರಲ್ಲಿ ಒಳ್ಳೆಯ ಸ್ವಭಾವ ಉಂಟಾಗಬೇಕು. ಆದ್ದರಿಂದ ಅವರು ಹೇಳುತ್ತಿದ್ದರು ನಾನೆ ಒಂದು ಪವಾಡ ಆಗಿದ್ದೇನೆ ಎಂದು. ಬದಲಿಗೆ ಕೆಲವೊಮ್ಮೆ ಅಹ್ಮದೀಯೇತರರು ಇವರು ಹಾಸ್ಯ ಮಾಡುತ್ತಿದ್ದಾರೆ ಎಂದು ಭಾವಿಸಿದಾಗ ಅವರು ಹೇಳುತ್ತಿದ್ದರು ನಾನು ಹಾಸ್ಯ ಮಾಡುತ್ತಿಲ್ಲ, ಇದು ನಿಜವಾಗಿದೆ ಎಂದು ಸಾಕ್ಷ್ಯಾಧಾರದಿಂದ ಅವರು ಸಾಬೀತು ಪಡಿಸುತ್ತಿದ್ದರು. ಮತ್ತು ಅವರು ಹೇಳುತ್ತಿದ್ದರು ಯಾರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉಪದೇಶಗಳನ್ನು ಸರಿಯಾದ ರೀತಿಯಲ್ಲಿ ಅನುಸರಿಸುತ್ತಾರೊ ಅವರು ನಿಜವಾಗಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸತ್ಯತೆಗೆ ಒಂದು ಸಾಕ್ಷಿ ಹಾಗೂ ಪವಾಡವಾಗಿದ್ದಾರೆ ಎಂದು. ಈ ಮಟ್ಟವನ್ನು ಪ್ರತಿಯೊಂದು ಅಹ್ಮದಿಯರು ಅನುಸರಿಸಬೇಕಾಗಿದೆ.

ಅದೇ ರೀತಿ ಅಬ್ದುರ್ರೌಫ್ ಸಾಹೆಬ್ ಇಸ್ಲಾಮಬಾದ್‌ನ ಅಮೀರ್ ಆಗಿದ್ದಾರೆ ಅವರು ಹೇಳುತ್ತಾರೆ: ಅನೇಕ ಜನರು ಹೇಳುತ್ತಾರೆ ನಮಗೆ ಬೇರೆ ವೈದ್ಯರ ಬಗ್ಗೆ ಅರಿವೇ ಇಲ್ಲ. ಈಗ ನಾವೇನು ಮಾಡಬೇಕು. ಜಮಾಅತ್ತಿನ ಅನೇಕ ಜನರಿಗೆ ಎಂದೂ ಚಿಕಿತ್ಸೆಗೆ ತೊಂದರೆ ಆಗಲಿಲ್ಲ. ಅವರು ಯಾವುದೇ

ಯಾಚನೆ ಇಲ್ಲದೆ ಡಾ॥ ನಖಿ ಸಾಹೆಬ್‌ರವರ ಬಳಿ ಆಗಮಿಸುತ್ತಿದ್ದರು. ಅನೇಕ ಅಹ್ಮದೀಯೇತರರು ಸಹ ಹೀಗೆ ತಮ್ಮ ಭಾವನೆಗಳನ್ನು ವ್ಯಕ್ತ ಪಡಿಸಿದ್ದಾರೆ ಅವರು ನಮ್ಮ ಮನೆಯ ಹಿರಿಯರಾಗಿದ್ದರು. ನಾವು ಅವರ ಸಲಹೆ ಇಲ್ಲದೆ ಏನು ಕೆಲಸ ಮಾಡುತ್ತಿರಲಿಲ್ಲ. ಕೇವಲ ಅಹ್ಮದಿಯಲ್ಲ ಬದಲಿಗೆ ಅಹ್ಮದಿಯೇತರರು ಸಹ ಅವರೊಂದಿಗೆ ಸಲಹೆ ಪಡೆಯುತ್ತಿದ್ದರು. ಕೆಲವು ಅಹ್ಮದಿಯೇತರರು ತಮ್ಮ ಮನೆಯ ತೊಂದರೆಗಳ ಬಗ್ಗೆ ಅವರೊಂದಿಗೆ ನಿವಾರಿಸಿಕೊಳ್ಳುತ್ತಿದ್ದರು. ಏಕೆಂದರೆ ಅವರ ಕ್ಲಿನಿಕ್ 40 ವರ್ಷದಿಂದಲೂ ಅದೇ ಜಾಗದಲ್ಲಿತ್ತು. ಮೊದಲು ತಂದೆ ಚಿಕಿತ್ಸೆಗಾಗಿ ಬರುತ್ತಿದ್ದರು ನಂತರ ಅವರ ಮಕ್ಕಳು ಚಿಕಿತ್ಸೆಗೆ ಬರತೊಡಗಿದರು. ಅವರು ಹೇಳುತ್ತಾರೆ ಡಾ॥ ಸಾಹೇಬರು ನಮಗೆ ಅನೇಕ ಜನರ ಘಟನೆಗಳನ್ನು ಹೇಳಿದ್ದಾರೆ. ಕೆಲವು ಅಹ್ಮದೀಯೇತರರು ತಮ್ಮ ಮಕ್ಕಳ ನಡುವೆ ಯಾವುದಾದರು ಗೊಂದಲ ಸೃಷ್ಟಿಯಾದರೆ ಅವರು ಡಾ॥ ಸಾಹೆಬ್ ಅವರಲ್ಲಿ ನಿವಾರಿಸಿಕೊಳ್ಳಲು ಹೇಳಿ ಮರಣ ಹೊಂದಿದ್ದಾರೆ.

ಇವರು ಬರೆಯುತ್ತಾರೆ ಕಳೆದ ವರ್ಷ 2019ರಲ್ಲಿ ಜೂನ್ ತಿಂಗಳ ಕೊನೆಯ ಜುಮುಅ ದಿವಸ ನನ್ನ ಬಳಿ ಜುಮುಅ ನಮಾಝ್ ನಿರ್ವಹಿಸಿದ ನಂತರ ನನ್ನ ಕಚ್ಚೇರಿಗೆ ಆಗಮಿಸಿ ಕಚೇರಿಯ ಬಾಗಿಲನ್ನು ಮುಚ್ಚಿ ಹೇಳಿದರು ನಾನು ನಿಮಗೆ ಒಂದು ವಿಷಯ ತಿಳಿಸ ಬೇಕಾಗಿದೆ ಇದರ ಬಗ್ಗೆ ಕೇವಲ ನನ್ನ ಪತ್ನಿಗೆ ಮಾತ್ರ ಹೇಳಿದ್ದೇನೆ ಅದೇನೆಂದರೆ: ಕೆಲದಿನಗಳ ಮುಂಚೆ ನಾನು ಒಂದು ಸ್ವಪ್ನ ಕಂಡಿದ್ದೇನೆ ಅದರಲ್ಲಿ ನಾನು ಒಂದು ಯುದ್ಧದ ಮೈದಾನದಲ್ಲಿ ನಿಂತಿದ್ದೇನೆ. ಅಲ್ಲಿ ಶಹೀದ್ ಆಗಿರುವವರಲ್ಲಿ ನಾನು ನನ್ನನ್ನು ಕಂಡಿಲ್ಲ ಹಿಂದಿನಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಧ್ವನಿ ಕೇಳಿಸಿತು ಯಾರಿಗೆ 5 ಗಾಯಗಳಾಗಿವೆಯೋ ಅವರು ಶಹೀದ್ ಎಂದರ್ಥ. ನಾನು ಹಿಂದಿರುಗಿ ನೋಡಿದಾಗ ಅಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಒಂದು ಎತ್ತರದ ಜಾಗದಲ್ಲಿ ಸರ್ವ ಸೈನ್ಯಾಧಿಪತಿಯಾಗಿ ನಿಂತಿದ್ದಾರೆ. ಆಗ ನಾನು ನನ್ನ ಗಾಯಗಳನ್ನು ಎಣಿಕೆ ಮಾಡಲು ಪ್ರಾರಂಭಿಸಿದೆ. ಆಗ ಮೂರು ಗಾಯಗಳು ಬಹಳ ಆಳವಾಗಿರುವುದನ್ನು ಸಿಕ್ಕವು ಮತ್ತೊಂದು ಕಾಲಿನ ಮೇಲೆ ಹಗುರವಾದ ಗಾಯಗಳಾಗಿತ್ತು. ಆಗ ನಾನು ಬಹಳ ಇಸ್ತಗ್‌ಫಾರ್ ಮಾಡಲು ಪ್ರಾರಂಭಿಸಿದೆ. ತದನಂತರ ನಾನು ನಿದ್ರೆಯಿಂದ ಎದ್ದೆ ಇದರ ಅರ್ಥ ಏನು ಎಂದು ಯೋಚಿಸುತ್ತಾ ಇದ್ದೆ. ಅವರು ಹೇಳುತ್ತಾರೆ: ನನ್ನ ಮನಸ್ಸಿನಲ್ಲಿ ಚಂದದ ಬಗ್ಗೆ ಬಹಳ ತೀವ್ರ ಯೋಚನೆಯಾಯಿತು. ಅವರು ಹೇಳುತ್ತಾರೆ: ನನ್ನಿಂದ ತಡವಾಗಿದೆ. ನಾನು ಮಾರನೆಯ ದಿವಸ ಫಜರ್ ನಮಾಝ್‌ಗಾಗಿ ಎಚ್ಚರಗೊಂಡಾಗ ನನ್ನ ಮನಸ್ಸಿನಲ್ಲಿ ಬಹಳ ತೀವ್ರವಾದ ಯೋಚನೆ ಹುಟ್ಟುತು. ನಾನು ಇನ್ನೂ ನನ್ನ ಚಂದಗಳ ಬಗ್ಗೆ ಪರಿಶೀಲಿಸಲಿಲ್ಲ ಎಂದು. ನಾನು ತಕ್ಷಣ ಹೋಗಿ ಪರಿಶೀಲಿಸಿದಾಗ ನಿಜವಾಗಿಯು ಇನ್ನು ಸ್ವಲ್ಪ ಹಣದ ಲಕ್ಕವಾಗಿರಲಿಲ್ಲ. ಅಂದು ಅವರು ಹತ್ತು ಲಕ್ಷದ ಚೆಕ್ಕನ್ನು ಸೆಕ್ರೇಟರಿ ಮಾಲ್ ಅವರಿಗೆ ನೀಡಿದ್ದೇನೆ. ಹೀಗೆ ನಾನು ಅಂದಿನಿಂದ ಇಸ್‌ತಿಗ್‌ಫಾರ್ ಮಾಡುತ್ತಿದ್ದೇನೆ ಎಂದು ಹೇಳಿದರು.

ಅಝಿಝುರ್‌ರಹ್ಮಾನ್ ಸಾಹೆಬ್ ಅವರ ಸಹೋದರಿಯ ಪುತ್ರರಾಗಿದ್ದಾರೆ ಅವರು ಹೇಳುತ್ತಾರೆ: ಅನೇಕ ಬಾರಿ ಅವರ ಬಾಲ್ಯಾವಸ್ಥೆಯ ಘಟನೆಗಳನ್ನು ಕೇಳಿದ್ದೇನೆ ಅವರು ನಿಜವಾಗಿಯೂ ಬಹಳ ತೊಂದರೆಗಳನ್ನು ಅನುಭವಿಸಿ ಅಲ್ಲಾಹನ ಅನುಗ್ರಹದಿಂದ ಹಾಗೂ ಪೋಷಕರ ದುಆವಿನ ಕಾರಣದಿಂದ ಅವರು ವೈದ್ಯರಾಗಿದ್ದರು. ಅವರು ಹೇಳುತ್ತಿದ್ದರು: ಅವರು ಅನೇಕ ಬಾರಿ ಕಾಗದವನ್ನು ಖರೀದಿಸಲು ಅವರ ಬಳಿ ಹಣವಿರುತ್ತಿರಲಿಲ್ಲ ಅವರು ಉಪಯೋಗಿಸಿರುವಂತಹ ಕವರ್‌ಗಳನ್ನು ತೆಗೆದು ಅದರಲ್ಲಿ ಟಿಪ್ಪಣಿಗಳನ್ನು ಬರೆಯುತ್ತಿದ್ದರು. ಅದೇ ರೀತಿ ಊರಿನ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಅಲ್ಲಿ ಗಣಿತದ ಮೇಷ್ಟ್ರು ಇರಲಿಲ್ಲ ಅವರು ಬೇರೆ ಊರಿಗೆ ಹೋಗಿ ಅಲ್ಲಿನ ಗಣಿತ ಮೇಷ್ಟ್ರಿಂದ ಗಣಿತ ಕಲಿಯುತ್ತಿದ್ದರು. ಮತ್ತೆ ತಮ್ಮ ಊರಿನಲ್ಲಿದ್ದ ಬೇರೆ ಸಹಪಾಠಿಯವರನ್ನು ಕಲಿಸುತ್ತಿದ್ದರು.

ನಮಾಝ್ ಕಡ್ಡಾಯವಾಗಿ ನಿರ್ವಹಿಸುತ್ತಿರುವ ಬಗ್ಗೆ ಒಂದು ಘಟನೆ ಹೇಳಿದರು: ಅವರು ಬಾಲ್ಯಾವಸ್ಥೆಯಲ್ಲಿದ್ದಾಗ ಅವರ ಸಹೋದರಿ ಆಟವಾಡುತ್ತಾ ಇಶಾ ನಮಾಝ್ ನಿರ್ವಹಿಸದೆ ಮಲಗಿಕೊಂಡರು. ಅವರ ತಾಯಿ ಅವರಿಗೆ ಕೇಳಿದರು ಇಶಾ ನಮಾಝ್ ನಿರ್ವಹಿಸಿದ್ದೀಯೆ ಎಂದು ಪ್ರಶ್ನಿಸಿದಾಗ ಬಾಲ್ಯಾವಸ್ಥೆಯಲ್ಲಿ ಅವರು ನಿದ್ರೆಯಲ್ಲಿ ಹೌದು ನಿರ್ವಹಿಸಿದ್ದೇನೆ ಎಂದು ಹೇಳಿದರು. ಅವರು ಹೇಳುತ್ತಾರೆ ಮಧ್ಯ ರಾತ್ರಿಯಲ್ಲಿ ಅವರ ತಾಯಿ ಬಂದು ನಿದ್ರೆಯಿಂದ ಎಬ್ಬಿಸಿ ಅಳುತ್ತಾ ಹೇಳಿದರು ನೀವು ನನಗೆ ನಮಾಝಿನ ವಿಷಯದಲ್ಲಿ ನನ್ನ ಬಳಿ ಸುಳ್ಳು ಹೇಳಿದ್ದೀಯ ಎಂದು. ಅಂದರೆ ಅವರಿಗೆ ಅಲ್ಲಾಹನ ಸ್ವಪ್ನದ ಮುಖಾಂತರ ತಿಳಿಸಿದನು. ಅವರು ಹೇಳುತ್ತಾರೆ ಅಂದಿನಿಂದ ನಾವು ಎಂದೂ ನಮಾಝ್ ಬಿಡಲಿಲ್ಲ. ಹೀಗೆ ಅಹ್ಮದಿ ತಾಯಂದಿಯರು ಆಗಿರಬೇಕು. ಮಕ್ಕಳ ತರಬೇತಿ, ನಮಾಝುಗಳ ಬಗ್ಗೆ ಯೋಚನೆ ಮತ್ತು ಅವರಿಗಾಗಿ ದುಆ ಸಹ ಮಾಡುತ್ತಿದ್ದರು. ಅವರು ಮನಸ್ಸಿನಿಂದ ದುಆ ಮಾಡಿದಾಗ ಅಲ್ಲಾಹನು ಸಹ ಅವರಿಗೆ ಸ್ವಪ್ನದ ಮುಖಾಂತರ ತಿಳಿಸದನು. ಅನೇಕ ವಿಷಯಗಳಲ್ಲಿ ಅವರು ಪವಿತ್ರ ಖುರ್‌ಆನಿನಿಂದ ಸಾಕ್ಷ್ಯಾಧಾರ ನೀಡುತ್ತಿದ್ದರು. ಅಲ್ಲಾಹನೊಂದಿಗೆ ಸಂಪರ್ಕ ಹೊಂದಲಿಲ್ಲವಾದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಬೈಅತ್‌ನ ಹಕ್ಕನ್ನು ಈಡೇರಿಸಲು ಸಾಧ್ಯವಿಲ್ಲ ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಆಗಮನದ ಉದ್ದೇಶವೆ ಅಲ್ಲಾಹನಿಂದ ನೈಜ್ಯ ಸಂಬಂಧ ಹೊಂದುವುದಾಗಿದೆ.

ಅದೇ ರೀತಿ ಡಾ॥ ಅತಾಉರ‍್ರಹ್ಮಾನ್ ಸಾಹೆಬ್ ಅವರು ಇನ್ನೊರ್ವ ಸಹೋದರಿಯ ಪುತ್ರರಾಗಿದ್ದಾರೆ ಅವರು ಹೇಳುತ್ತಾರೆ: ಪವಿತ್ರ ಖುರ್‌ಆನಿನ ಬಗ್ಗೆ ಬಹಳ ಆಲೋಚಿಸುತ್ತಿದ್ದರು. ಖುರ್‌ಆನಿನ ಬಗ್ಗೆ ಉತ್ತಮ ಜ್ಞಾನ ಹೊಂದಿದ್ದರು. ಸಾಮಾನ್ಯವಾಗಿ ಉದ್ಧವಾದ ವಚನಗಳನ್ನು ಕಂಠಪಾಠ ಮಾಡುತ್ತಿದ್ದರು. ಪಾಕಿಸ್ತಾನದ ಇಂದಿನ ಸ್ಥಿತಿಯಲ್ಲಿಯು ಸಹ ವಿರೋಧಿಗಳನ್ನು ಮನೇಗೆ ಅಹ್ವಾನಿಸಿ ಜಲ್ಸ ಸಾಲಾನ ಹಾಗೂ ಖುತ್‌ಬಾಗಳನ್ನು ತೋರಿಸುತ್ತಿದ್ದರು. ನಿಮ್ಮ ತಬ್‌ಲೀಗಿನಿಂದ ಅನೇಕ ಜನರು ಪ್ರಭಾವಿತರಾಗುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಅನೇಕ ಜನರು ಅವರಿಂದ ಬೈಅತ್ ಮಾಡಿ ಜಮಾಅತ್ತಿನಲ್ಲಿ ಸೇರ್ಪಡೆ ಆಗಿದ್ದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ.

ಇನ್ನು ನಾನು ಪ್ರಸ್ತಾಪಿಸುವ ಮುಕರ‍್ರಮ್ ಗುಲಾಮ್ ಮುಸ್ತಫಾ ಸಾಹಿಬ್ ಲಂಡನ್‌ನಲ್ಲಿ ವಾಸಿಸುತ್ತಿದ್ದರು. ಅವರು ಪ್ರೈವೇಟ್ ಸೆಕ್ರೆಟರಿ ಕಚೇರಿಯಲ್ಲಿ ಸ್ವಯಂ ಸೇವಕರಾಗಿದ್ದರು. ಎಪ್ರಿಲ್ 25ರಂದು ಅವರು ನಿಧನ ಹೊಂದಿದರು **– ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.**

ಅವರು 1983ರಲ್ಲಿ ಖಲೀಫತುಲ್ ಮಸೀಹ್ ರಾಬಿರವರ ಕಾಲಘಟ್ಟದಲ್ಲಿ ಬೈಅತ್ ಮಾಡಿದರು. 1986ರಲ್ಲಿ ಇವರು ಲಂಡನ್‌ಗೆ ಆಗಮಿಸಿ ಮಸೀದಿಯಲ್ಲಿ ತಂಗಿದರು. ಅಲ್ಲಿ ಬಂದ ತಕ್ಷಣ ವಖ್ಫ್‌ಗೆ ಅರ್ಜಿ ಸಲ್ಲಿಸಿದರು. ಏಕೆಂದರೆ ಅವರ ವಿದ್ಯಾಭ್ಯಾಸ ಬಹಳ ಕಡಿಮೆ ಇತ್ತು. ಆದರೆ ಅವರ ವಖ್ಫ್ ಸ್ವೀಕೃತವಾಗಲಿಲ್ಲ ಆದರೂ ಅವರು ವಖ್ಫೆ ಝಿಂದಗಿಯ ಹಾಗೆ ಮೊದಲು ಕಿಚನ್‌ನಲ್ಲಿ ಅನಂತರ ಕಚ್ಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಎಲ್ಲಿಯ ತನಕ ಎಂದರೆ ಅಲ್ಲಾಹನ ಅನುಗ್ರಹದಿಂದ ಅವರ ಕೆಲಸವೂ ಪ್ರಗತಿ ಹೊಂದಿತು. ಬರಿಗೈ ಬಂದಿದ್ದರು ಆದರೆ ಅಲ್ಲಾಹನು ಅವರನ್ನು ಅನುಗ್ರಹಿಸಿದಾಗ ಅವರು ಸ್ವಲ್ಪ ಸಂಪತ್ತನ್ನುಗಳಿಸಿದರು. ಹೀಗೆ ಅಲ್ಲಾಹನ ಅನುಗ್ರಹದಿಂದ ಅವರು ಆ ಸಂಪತ್ತಿನಿಂದ ಬಡವರಿಗಾಗಿ ಖರ್ಚು ಮಾಡುತ್ತಿದ್ದರು ಹಾಗೂ ಜಮಾಅತ್ತಿನಲ್ಲಿಯು ಸಹ ಖರ್ಚು ಮಾಡುತ್ತಿದ್ದರು. ನಾನು ಹೇಳುತ್ತಿದ್ದೆ ವಖ್ಫೆ ಝಿಂದಗಿಯ ಹಾಗೆ ಅವರು ಕಾರ್ಯ ನಿರ್ವಹಿಸುತ್ತಿದ್ದರು. ಖಲೀಫತುಲ್ ಮಸೀಹ್ ರಾಬಿ[ರ] ರವರ ಕಾಲದಲ್ಲಿಯೂ ಹಾಗೂ ನನ್ನ ಖಿಲಾಫತ್ ಕಾಲದಲ್ಲಿ ಅವರು ಒರ್ವ ವಾಖಿಫೆ ಝಿಂದಗಿಯ ಹಾಗೆ ಕಾರ್ಯ ನಿರ್ವಹಿಸುತ್ತಿದ್ದರು ಎಲ್ಲಿಗಾದರು ಹೋಗಬೇಕಾದರೆ ಅಥವಾ ಒಂದು ಸುದೀರ್ಘ ಕಾಲಕ್ಕೆ ರಜೆ ಬೇಕಾದರೆ ಅವರು ಅರ್ಜಿ ಸಲ್ಲಿಸಿ ಅಪ್ಪಣೆ ಪಡೆಯುತ್ತಿದ್ದರು. ಆದರೆ ಅವರು ವಾಕಿಫೆ ಝಿಂದಗಿ ಆಗಿರಲಿಲ್ಲ. ಆದರೆ ಅವರು ಒಬ್ಬ ವಾಕಿಫೆ ಝಿಂದಗಿಯ ಹಾಗೆ ಕೆಲಸ ಮಾಡುತ್ತಿದ್ದರು. ಅವರು ಅಲ್ಲಾಹನೊಂದಿಗೆ ಮಾಡಿದ ವಕ್‌ಫ್ ಪ್ರತಿಜ್ಞೆಯನ್ನು ಬಹಳ ನಿಷ್ಠೆಯಿಂದ ಈಡೇರಿಸಿದರು.

ಮಸೀದಿಯಲ್ಲಿ ತಂಗಿದಾಗ ಅವರನ್ನು ಪ್ರಾರಂಭದಲ್ಲಿ ಹೋಟಲ್‌ನಲ್ಲಿ ಕಾರ್ಯ ನಿರ್ವಹಿಸಲು ಕಳುಹಿಸಿದ್ದರು. ಅಲ್ಲಿ ಅವರಿಗೆ ವೇಟರ್ ಕೆಲಸ ದೊರೆಯಿತು. ಅವರಿಗೆ ಈ ಕಸಬು ಇಷ್ಟವಾಗಲಿಲ್ಲ. ಹೀಗೆ ಅವರು ಮಾರನೆಯ ದಿವಸ ಕೆಲಸವನ್ನು ತ್ಯಜಿಸಿ ಹಿಂದಿರುಗಿದರು. ಅವರು ಹೇಳಿದರು: ನಾನು ಯೋಚಿಸಿದೆ ಕೆಲಸವಿಲ್ಲದೆ ನನಗೆ ಹಣ ಸಿಗುತ್ತಿದೆಯಾದರೆ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಲಂಗರ್‌ನಲ್ಲಿಯೇ ಏಕೆ ಕೆಲಸ ಮಾಡಬಾರದು ಎಂದು ಅವರು ವಲೀ ಶಾಹ್ ಸಾಹೆಬ್‌ರವರೊಂದಿಗೆ ಮಸ್ಜಿದ್ ಫಝಲ್‌ನ ಕಿಚನ್‌ನಲ್ಲಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದರು. ಕೆಲವು ಕಾಲ ಹಿಫಾಝತೆ ಖಾಸ್‌ನಲ್ಲಿಯು ಕಾರ್ಯನಿರ್ವಹಿಸಿದರು. 1993ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು ತಆಲ) ಅವರನ್ನು ಪ್ರೈವೇಟ್ ಸೆಕ್ರೆಟರಿಯ ಕಚೇರಿಯಲ್ಲಿ ಕೆಲಸಕ್ಕೆ ನೇಮಿಸಿದರು. ಅನಂತರ ಅವರು ಇಲ್ಲಿನ ತನಕ ಬಹಳ ಉತ್ತಮವಾದ ರೀತಿಯಲ್ಲಿ ತಮ್ಮ ಕೆಲಸ ನಿರ್ವಹಿಸುತ್ತಾ ಇದ್ದರು. ಅವರು ಮೂಸೀ ಆಗಿದ್ದರು. ಅವರು ಪತ್ನಿ ಹಾಗೂ ಇಬ್ಬರು ಪುತ್ರಿಯರು ಹಾಗೂ ಒರ್ವ ಪುತ್ರರನ್ನು ಅಗಲಿ ಹೋಗಿದ್ದಾರೆ.

ಅವರ ಪತ್ನಿ ಮಹ್‌ಮೂದ ಮುಸ್ತಫಾ ಸಾಹಿಬ ಬರೆಯುತ್ತಾರೆ: ನಾನು ನನ್ನ ಪತಿಯೊಂದಿಗೆ ಅಂದಾಜು 34 ವರ್ಷಗಳ ಕಾಲ ಜೀವಿಸಿದೆ. ಅವರ ಪ್ರತಿಯೊಂದು ಕೆಲಸ ಅಲ್ಲಾಹನಿಗೋಸ್ಕರವಾಗಿತ್ತು ಎಂದು ನಾನು ಸಾಕ್ಷ್ಯ ಹೇಳುತ್ತೇನೆ. ಅವರು ಪ್ರಾಮಾಣಿಕರಾದ ಪತಿ, ಪಿತ, ಸಹೋದರ ಮತ್ತು ಸ್ನೇಹಿತರಾಗಿದ್ದರು. ಅವರು ತಮ್ಮ ಸಂಬಂಧಗಳನ್ನು ನಿಭಾಯಿಸುವವರೂ ಖಿಲಾಫತ್‌ಗೋಸ್ಕರ ಬಲಿದಾನ ನೀಡಲು ಸಿದ್ಧರಾದವರೂ ಆಗಿದ್ದರು. ಖಿಲಾಫತ್‌ನ

ಮೇಲೆ ಜೀವ ನೀಡಲು ಸಿದ್ಧವಾಗಿದ್ದರು. ಅವರು ಹೇಳುತ್ತಿದ್ದರು ನಾನು ಪಾಕಿಸ್ತಾನದಲ್ಲಿ ಬೈಅತ್ ಮಾಡಿ ಜಮಾಅತ್‌ಗೆ ಸೇರಿದಾಗ ನನ್ನ ಮನಸ್ಸಿನಲ್ಲಿ ಪ್ರತಿಜ್ಞೆ ಮಾಡಿದ್ದೆ ನಾನು ಯಾವಾಗಲು ಖಿಲಾಫತ್‌ನ ಸಮೀಪ ಇರುವೆನು ಎಂದು. ಆ ಕಾಲದಲ್ಲಿ ಅವರ ಬಳಿ ಏನೂ ಇರಲಿಲ್ಲ ಆದರೆ ಅಲ್ಲಾಹನ ಅನುಗ್ರಹದಿಂದ ಅವರು ತಮ್ಮ ಪ್ರತಿಜ್ಞೆಯನ್ನು ಪೂರೈಸಿದರು. ಅವರಿಗೆ ಆರ್ಥಿಕ ತ್ಯಾಗ ಮಾಡುವ ಬಗ್ಗೆ ಬಹಳ ಉತ್ಸಾಹವಿತ್ತು. ಅವರು ಹೇಳುತ್ತಾರೆ: ನನಗೆ ನೆನಪಿದೆ– ನನ್ನ ಪುತ್ರ ಜನಿಸಿದಾಗ ಅವರಿಗೆ ಹೇಳಿದೆ ನಾನು ನನ್ನ ಅರ್ಧ ಆಭರಣಗಳನ್ನು ಜಮಾಅತ್ತಿಗೆ ಅರ್ಪಿಸ ಬೇಕೆಂದು ಯೋಚಿಸಿದ್ದೇನೆ ಎಂದು ಹೇಳಿದಾಗ ಅವರು ಹೇಳಿದರು ಅದಕ್ಕೇನು ಸಂಪೂರ್ಣ ಆಭರಣಗಳು ನೀಡಿರಿ ಎಂದರು. ಪ್ರಾರಂಭದ ಕಾಲದಲ್ಲಿ ಆಫ್ರಿಕದಲ್ಲಿ ಮಸೀದಿ ನಿರ್ಮಿಸ ಬೇಕೆಂಬ ಅಭಿಯಾನ ಶುರವಾಯಿತು. ಆ ಕಾಲದಲ್ಲಿ ನಮ್ಮ ಬಳಿ ಮನೆಯು ಇರಲಿಲ್ಲ ಆದರೆ ನಮ್ಮ ಬಳಿ ಕೂಡಿಟ್ಟದ ಎಲ್ಲಾ ಹಣವನ್ನು ಮಸೀದಿಯ ನಿರ್ಮಾಣಕ್ಕಾಗಿ ನೀಡಿದೆವು. ಅವರು ತಮ್ಮ ಮೇಲೆ ಬಹಳ ಜಿಪುಣತನದಿಂದ ಖರ್ಚು ಮಾಡುತ್ತಿದ್ದರು. ಆದರೆ ಬೇರೆಯವರ ಮೇಲೆ ಖರ್ಚು ಮಾಡಬೇಕಾದರೆ ಏನೂ ಯೋಚಿಸುತ್ತಾ ಇರಲಿಲ್ಲ. ಯಾವಾಗಲೂ ಅವರು ಧರ್ಮಕ್ಕೆ ಆದ್ಯತೆ ನೀಡುತ್ತಿದ್ದರು. ಅವರು ನೈಜ್ಯವಾದ ಮೂಮಿನ್‌ನ ಹಾಗೆ ನಿಷ್ಠೆಯಿಂದ ಲೌಕಿಕ ಹಾಗೂ ಆಧ್ಯಾತ್ಮಿಕ ಪ್ರಗತಿ ಹೊಂದಿದರು. ಪ್ರತಿಯೊಂದು ಕಾರ್ಯದಲ್ಲಿ ನನಗೂ ಅದರ ಬಗ್ಗೆ ಅರಿವಿರಲಿ ಎಂದು ಅವರು ಜೊತೆಗಿರಿಸುತ್ತಿದ್ದರು. ಮತ್ತೆ ಅವರು ಹೇಳುತ್ತಾರೆ: ಮುಸ್ತಫಾ ಸಾಹೆಬ್ ತಮ್ಮ ಕುಟುಂಬದಲ್ಲಿ ಒಬ್ಬರೇ ಅಹ್ಮದಿ ಆಗಿದ್ದರು. ಅವರು ಬೈಅತ್ ಮಾಡಿದಾಗ ತಮ್ಮ ತಂದೆಯವರಿಂದ ಸಿಗುವಂತ ವಿರಾಸತ್ತಿನಂದ ಏನೂ ಪಡೆಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದರು. ಮತ್ತು ದುಆ ಮಾಡಿದ್ದರು ಓ ಅಲ್ಲಾಹನೇ!! ಒಂದು ವೇಳೆ ನಿನ್ನ ಮಸೀಹನು ನಿಜವಾಗಿದ್ದಲ್ಲಿ ಮತ್ತು ನಾನು ಆತನು ನಿಜವಾಗಿದ್ದಾನೆ ಎಂದು ನಂಬಿ ಬೈಅತ್ ಮಾಡಿದ್ದರೆ, ನನಗೆ ನಿನ್ನ ಕಡೆಯಿಂದ ಆಶ್ರಯ ನೀಡು ನನಗೆ ಬೇರೆ ಯಾರ ಆಶ್ರಯ ಬೇಡ. ಅಲ್ಲಾಹನು ಅವರ ಈ ಪ್ರಾರ್ಥನೆಗಳನ್ನು ಸ್ವೀಕರಿಸಿದನು. ಅನಂತರ ಅಲ್ಲಾಹನು ಅವರಿಗೆ ಬೇರೆ ಬೇರೆ ರಿತಿಯಲ್ಲಿ ಸಹಾಯ ಮಾಡಿದ್ದಾನೆ. ತಮ್ಮ ಊರಿನಲ್ಲಿ ಇವರೆಲ್ಲರು ಎಂದಾದರೂ ಅಹ್ಮದಿ ಆಗುವರು ಎಂದು ಸ್ವತಃ ಒಂದು ಮಸೀದಿಯನ್ನು ನಿರ್ಮಿಸಿದರು. ಬೇರೆ ಬೇರೆ ರೀತಿಯಲ್ಲಿ ಅವರು ತಮ್ಮ ಸಂಬಂಧಿಕರಿಗೆ ಸಹೋದರ ಸಹೋದರಿಯರಿಗೆ ಸಹಾಯ ಮಾಡುತ್ತಿದ್ದರು. ಅವರ ಪತ್ನಿ ಹೇಳುತ್ತಾರೆ: ಅವರಿಗೆ ತಮ್ಮ ಪ್ರಾರ್ಥನೆಗಳ ಮೇಲೆ ಬಹಳ ನಂಬಿಕೆ ಇತ್ತು. ಅದರ ಬಗ್ಗೆ ಅನೇಕ ಘಟನೆಗಳನ್ನು ಅವರು ವಿವರಿಸಿದ್ದಾರೆ.

ಅವರ ಪುತ್ರಿ ಸೌಬಿಯ ಮುಸ್ತಫಾ ಹೇಳುತ್ತಾರೆ: ಅಲ್ಲಾಹನನ್ನು ಮತ್ತು ಅವನು ಸ್ಥಾಪಿಸಿದ ಖಿಲಾಫತನ್ನು ಪ್ರೀತಿಸುವುದು ನನ್ನ ತಂದೆಯವರ ಜೀವಿತದ ಧ್ಯೇಯವಾಗಿತ್ತು. ಅಲ್ಲಾಹನ ಮೇಲೆ ದೃಢ ವಿಶ್ವಾಸ ಹೊಂದಿದ್ದರು. ಅವರು ನಮಗೆ ಹೇಳುತ್ತಿದ್ದರು ನಾನು ಆ ಸಂದರ್ಭದಲ್ಲಿ ಹೀಗೆ ದುಆ ಮಾಡಿದ್ದೆ ಅದು ಹೀಗೆ ಸ್ವೀಕೃತವಾಗಿದೆ ಎಂದು. ಅವರು ಯಾವಾಗಲೂ ಎಲ್ಲಿಂದಾದರೂ ಖಲೀಫತುಲ್ ಮಸೀಹರ ತಬರ್ರುಕ್ (ನೆನಪಿನ ಕಾಣಿಕೆ) ಯನ್ನು ಪಡೆಯಲು ಪ್ರಯತ್ನಿಸುತ್ತಿದ್ದರು. ಎಲ್ಲಿಂದಾದರೂ ತಬರ್ರುಕ್ ದೊರೆತರೆ ಅದರಿಂದ ಅವರು ತಮ್ಮ ಭಾಗವನ್ನು ರಕ್ಷಿಸಿ ಉಳಿದ ಭಾಗದಲ್ಲಿ ಎಲ್ಲರಿಗೆ ಹಂಚುತ್ತಿದ್ದರು. ತಬರ್ರುಕನ್ನು ಮನೆಯಲ್ಲಿಯೂ ಒಗ್ಗೂಡಿಸಿ ಇಡುತ್ತಿದ್ದರು ಜಲ್ಸದ ಸಂದರ್ಭದಲ್ಲಿ ಅತಿಥಿಯರು ಯಾರಾದರು ಆಗಮಿಸಿದರೆ ಅವರಿಗೆ ಆ ತಬರ್ರುಕನ್ನು ನೀಡಬಹುದು ಎಂದು. ಅವರು ಬಡವರಿಗೆ ಬಹಳ ಸಹಾಯ ಮಾಡುತ್ತಿದ್ದರು. ಅವರು ರೋಗ ಬಾಧಿತರಾಗುವ ಮೊದಲು ನನಗೆ ಅಂತಿಮ ಉಪದೇಶ ಹೀಗೆ ನೀಡಿದರು: ಯಾವಾಗಲೂ ಜಮಾಅತ್‌ನೊಂದಿಗೆ ಸಂಬಂಧವನ್ನು ಜೋಡಿಸಿಟ್ಟಿರಬೇಕು. ನಮಾಝ್ ನಿರ್ವಹಿಸಬೇಕು. ಪವಿತ್ರ ಖುರ್‌ಆನ್ ಕ್ರಮಬದ್ಧವಾಗಿ ಪಠಿಸುತ್ತಾ ಇರಬೇಕು. ಹಾಗೆ ಮಾಡಿದರೆ ಅಲ್ಲಾಹನು ಯಾವಾಗಲೂ ಸಹಾಯ ನೀಡುವನು.

ಅವರ ಇನ್ನೋರ್ವ ಕಿರಿ ಮಗಳು ಮದೀಹ ಮುಸ್ತಫ ಸಾಹಿಬ ಹೇಳುತ್ತಾರೆ: ನಿಸ್ಸಂದೇಹವಾಗಿಯು ನಮ್ಮ ತಂದೆಯವರು ಒಂದು ಚಿಕ್ಕ ಗ್ರಾಮದಿಂದ ಆಗಮಿಸಿದ್ದರು ಆದರೆ ಅವರ ಯೋಚನೆಗಳು ಬಹಳ ದೃಢವಾಗಿದ್ದವು ಮತ್ತು ಅವರ ಜೀವನ ಶೈಲಿಯು ಅನೇಕ ಉನ್ನ ಶಿಕ್ಷಣ ಪಡೆದಿರುವವರಿಗಿಂತ ಹೆಚ್ಚು ಉತ್ತಮವಾಗಿತ್ತು. ಇಂದಿನ ಜಗತ್ತಿನಲ್ಲಿ ಇಂತಹವರನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಕಾಣುತ್ತೇವೆ, ಅವರು ಪುರುಷ ಮಹಿಳೆಯರಿಗೆ ಸಮಾನವಾದ ಹಕ್ಕುಗಳನ್ನು ನೀಡುತ್ತಾರೆ. ಅವರು ಪುತ್ರಿಯರನ್ನು ಎಂದೂ ಹೊರೆ ಎಂದು ಭಾವಿಸಲಿಲ್ಲ ಅವರು ಸದಾ ಹೇಳುತ್ತಿದ್ದರು ಯಾರ ಮನೆಯಲ್ಲಿ ಪುತ್ರಿ ಜನಿಸುತ್ತದೆಯೋ ಆತನ ಕೆಲಸಗಳ ಕಾಲವು ಕಡಿಮೆಯಾಗುವುದು ಮತ್ತು ಶ್ರಮವಹಿಸುವ ದಿನಗಳು ಮುಕ್ತಾಯವಾಗುವವು. ಅವರು ಹೇಳುತ್ತಾರೆ ನಮ್ಮ ತಂದೆಯವರು ಪುತ್ರ ಹಾಗೂ ಪುತ್ರಿಯರ ವಿದ್ಯಾಭ್ಯಾಸ ಸಮಾನವಾಗಿ ನಡೆಸಿದರು. ಈದ್ ಇರಲಿ ಅಥವಾ ಪುತ್ರಿಯ ವಿವಾಹದ ಸಂದರ್ಭವಾಗಲಿ ಎಂದೂ ನಮಾಝ್ ನಿರ್ವಹಿಸುವುದನ್ನು ತ್ಯಜಿಸಲಿಲ್ಲ. ಅಲ್ಲಾಹನನ್ನು ಸಂಪೂರ್ಣವಾಗಿ ನಂಬಿದ್ದರು.

ಅವರ ಪುತ್ರ ಸರ್‌ಫರಾಝ್ ಮಹ್ಮೂದ್ ಹೇಳುತ್ತಾರೆ: ನಾವು ಟೋಟಂಗ್‌ನಲ್ಲಿದ್ದಾಗೂ ಸಹ ನಮಾಝ್ ನಿರ್ವಹಿಸಲು ಮಸ್ಜಿದ್ ಫಝಲ್‌ಗೆ ಹೋಗುತ್ತಿದ್ದರು. ಯಾವಾಗಲಾದರು ಮಸೀದಿಗೆ ಹೋಗಲು ತಡವಾದಾಗ ಅವರು ಎಲ್ಲರನ್ನು ಒಗ್ಗೂಡಿಸಿ ಮನೆಯಲ್ಲಿಯೇ ನಮಾಝ್ ಬಾಜಮಾಅತ್ ನಿರ್ವಹಿಸುತ್ತಿದ್ದರು. ಅವರು ಹೇಳುತ್ತಾರೆ ನಮ್ಮ ತಂದೆಯವರು ನನಗೆ ಹೇಳುತ್ತಿದ್ದರು: ಜೀವನದಲ್ಲಿ ನೀವು ಯಾವ ವಸ್ತುವನ್ನು ಗಳಿಸಬೇಕೆಂದು ಬಯಸಿದರೆ ಅದು ಕೇವಲ ಅಲ್ಲಾಹನಿಂದಲೇ ಸಾಧ್ಯ. ನಮಾಝಿನ ಹೊತ್ತಾದಾಗ ಅವರು ಎಲ್ಲಾ ಕೆಲಸಗಳನ್ನು ತ್ಯಜಿಸಿ ನಮಾಝ್ ನಿರ್ವಹಿಸುತ್ತಿದ್ದರು. 15 ವರ್ಷದವರೆಗೆ ನನ್ನನ್ನು ಅವರು ತನ್ನೊಂದಿಗೆ ಫಜರ್ ನಮಾಝಿಗೆ ಕರೆದುಕೊಂಡು ಬರುತ್ತಿದ್ದರು. ಅವರ ದುಆವಿನ ಕಾರಣ ನಮಗೆ ಈ ಎಲ್ಲಾ ಅನುಗ್ರಹಗಳು ಲಭಿಸುತ್ತಿದೆ. ಫಜರ್ ನಮಾಝಿನ ನಂತರ ಅವರು ಬಂದಾಗ ನಾನು ನಮಾಝಿಗೆ ಹೋಗಿದ್ದೇನೋ ಇಲ್ಲವೋ ಎಂದು ಪರಿಶೀಲಿಸುತ್ತುದ್ದರು. ಎಂದಾದರು ಹೋಗಲು ಆಲಸ್ಯ ಮಾಡಿದಾಗ ಅವರು ಹೇಳುತ್ತಿದ್ದರು ಅಲ್ಲಾಹನಿಗೆ ದ್ರೋಹ ಮಾಡಿದರೆ ಅದರಲ್ಲಿ ನಿಮಗೆ ನಷ್ಟ ಎಂದು. ಅಲ್ಲಾಹನಿಗೆ ನಿಮ್ಮ ನಮಾಝ್‌ಗಳ ಅವಶ್ಯಕತೆ ಇಲ್ಲ. ಪ್ರತಿಯೊಬ್ಬ ಮನುಷ್ಯನು ತನಗಾಗಿ ನಮಾಝ್ ಮಾಡುವುದು. ಅವರು ಹೇಳುತ್ತಾರೆ ತೀರ ಅನಾರೋಗ್ಯವಾದಾಗ ನಾವು ಆ್ಯಂಬುಲೆನ್ಸ್ ಕರೆಸಿದೆವು ಆಗ ಅವರಿಗೆ ಬಹಳ ತೊಂದರೆ ಇತ್ತು ಆದರೂ ಅವರು ನಿಂತುಕೊಂಡು ನಮಾಝ್ ನಿರ್ವಹಿಸಿದರು.

ಅನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅತಿಥಿಗಳ ಸತ್ಕಾರ. ದೊಡ್ಡ ಮನೆ ಆಗಿತ್ತು. ಸುಮಾರು ನಲವತ್ತು ಜನ ಅತಿಥಿಗಳನ್ನು ಅವರು ತಮ್ಮ ಮನೆಯಲ್ಲಿರಿಸಿದರು. ಇಲ್ಲಿ ಮಸೀದಿಯ ಹತ್ತಿರ ಬಂದಾಗ ಅಲ್ಲಿ ಅವರ ಮನೆ ಚಿಕ್ಕದಾಗಿತು ಆದರೂ ಅಲ್ಲಿಯು ಸಹ ಇಪ್ಪತ್ತೈದು ಅತಿಥಿಗಳನ್ನು ಇರಿಸಿದ್ದರು. ಈ ಮನೆಯಲ್ಲಿಯು ಇಪ್ಪತ್ತೈದು ಅತಿಥಿಯರು ಸೇರುವುದು ಕಷ್ಟವಾಗುತ್ತಿತ್ತು ಆದರೂ ಅವರು ಬಹಳ ಸಂತೋಷದಿಂದ ತಮ್ಮ ಮನೆರಲ್ಲಿರಿಸಿದರು. ಅವರು ಯಾವಾಗಲೂ ಹೇಳುತ್ತಿದ್ದರು: ಎಂದಾದರೂ ಲೌಕಿಕ ವಿಷಯದ ಮೇಲೆ ಆಧ್ಯಾತ್ಮಿಕಕ್ಕೆ ಆದ್ಯತೆ ನೀಡಬೇಕು ಆದರೆ ನೆನಪಿಡಿರೀ ಈ ಕೆಲಸ ಸುಲಭವಲ್ಲ. ಚಂದ ನೀಡುವ ಬಗ್ಗೆ ತಡಮಾಡಬಾರದು ಎಂದು ಅವರು ಯಾವಾಗಲೂ ಉಪದೇಶಿಸುತ್ತಿದ್ದರು. ಅವರು ಪ್ರತಿ ತಿಂಗಳ ಪ್ರಥಮ ದಿನಾಂಕದಂದೇ ತನ್ನ ಚಂದ ನೀಡುತ್ತಿದ್ದರು. ಅವರು ಹೇಳುತ್ತಿದ್ದರು: ಜಮಾಅತ್‌ಗೆ ನಮ್ಮ ಚಂದದ ಆವಶ್ಯಕತೆ ಇದೆ ಎಂದು ಭಾವಿಸಬಾರದು. ವಾಸ್ತವಿಕವಾಗಿ ಚಂದ ಕೊಡುವ ಮೂಲಕ ನಮಗೆ ಅಲ್ಲಾಹನ ಅನುಗ್ರಹಗಳನ್ನು ಪಡೆಯಲು ಸಾಧ್ಯವಾಗುತ್ತದೆ.

ಅವರ ಮಾವ ಕರಾಮತುಲ್ಲಾಹ್ ಸಾಹೆಬ್ ಹೇಳುತ್ತಾರೆ: ಅನೇಕ ಖುರ್‌ಆನಿನ ಪ್ರಶ್ನೆಗಳು ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉಪದೇಶಗಳ ಝೆರಾಕ್ಸ ಮಾಡಿ ನನಗೆ ಹಾಗೂ ಇನ್ನಿತರ ಸಹೋದರ, ಸಹೋದರಿಯರಿಗೆ ಹಾಗೂ ಸಂಬಂಧಿಕರಿಗೆ ಇದನ್ನು ಓದಿ ಹಾಗೂ ಖುರ್‌ಆನಿನ ದುಆಗಳನ್ನು ಕಂಠಪಾಠ ಮಾಡಿರಿ ಎಂದು ನೀಡುತ್ತಿದ್ದರು. ನಾನು ಅವರಿಗೆ ನೋಡಿದ್ದೇನೆ ಅವರು ಮಸ್ಜಿದ್ ಫಝಲ್‌ನಲ್ಲಿ ನೀಡುತ್ತಿದ್ದಂತಹ ದರ್ಸ್‌ಗಳ ಪ್ರತಿಯನ್ನು ಪಡೆದು ಅದನ್ನು ಪುನಃ ಮನೆಗೆ ಹೋಗಿ ಅದನ್ನು ಓದುತ್ತಿದ್ದರು. ಮತ್ತು ಅದನ್ನು ತಮ್ಮ ಮೋಬೈಲಿನಿಂದ ಫೋಟೋವನ್ನು ತೆಗೆದು ಅದನ್ನು ತಮ್ಮ ಅಹ್ಮದೀಯೇತರ ಸಂಬಂದಿಕರಿಗೆ ಕಳುಹಿಸುತ್ತಿದ್ದರು. ಅನಂತರ ಅವರು ಅವರನ್ನು ಓದಿದ್ದರೋ ಎಲ್ಲವೋ ಎಂದು ಫೋನ್ ಮಾಡಿ ಕೇಳುತ್ತಿದ್ದರು. ಸಾಮಾನ್ಯ ದಿನಗಳಲ್ಲಿ ಯಾರದರು ಒಬ್ಬ ಅತಿಥಿಯನ್ನು ಕರೆದುಕೊಂಡು ಬರುತ್ತಿದ್ದರು. ಜಲ್ಸಗಳ ಕಾಲದಲ್ಲಿ ಇಪ್ಪತ್ತನಾಲ್ಕು ಗಂಟೆ ಅತಿಥಿಗಳೊಂದಿಗೆ ಇರುತ್ತಿದ್ದರು.

ಅಸ್ಲಮ್ ಖಾಲಿದ್ ಸಾಹೆಬ್ ಹೇಳುತ್ತಾರೆ: ನಮ್ಮ ಕಚೇರಿಯಲ್ಲಿ ಅವರೊಂದಿಗೆ ದಿನಾಗಲೂ ಸಂಪರ್ಕವಿತ್ತು. ಅನೇಕ ವಿಶೇಷತೆಗಳನ್ನು ಹೊಂದಿದ್ದರು. ಬಡವರಿಗೆ ಸಹಾಯ ಮಾಡುವವರು, ಧೈರ್ಯವಂತರು, ಆತಿಥಿ ಸತ್ಕಾರ ಮಾಡುವವರು, ಚಂದಗಳನ್ನು ಕಡ್ಡಾಯವಾಗಿ ನಿಡುವವರು ಮುಂತಾದ ಹಲವಾರು ಒಳ್ಳೆಯ ಕಾರ್ಯಗಳಲ್ಲಿ ಮುಂದೆ ನಿಲ್ಲುವವರಾಗಿದ್ದರು.

ಫಹೀಮ್ ಅಹ್ಮದ್ ಭಟ್ಟ್ ಸಾಹೆಬ್ ಹೇಳುತ್ತಾರೆ: ಬಹುಶಃ 1992ರಿಂದ ಕಚೇರಿಯಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದ್ದಿರಬಹುದು. ಆ ಕಾಲದಲ್ಲಿ ಕಚೇರಿಯಲ್ಲಿ ಸಹಾಯಕರು ಯಾರೂ ಇರಲಿಲ್ಲ. ಬಹಳ ಅಚ್ಚು ಕಟ್ಟಾಗಿ ಕಾರ್ಯ ನಿರ್ವಹಿಸುತ್ತಿದ್ದರು. ನಿಷ್ಠಾವಂತ ಸೇವಕರಾಗಿದ್ದರು. ಅನೇಕ ವಿಶೇಷತೆ ಹೊಂದಿದವರಾಗಿದ್ದರು. ಧೈರ್ಯವಂತ, ಖಿಲಾಫತ್‌ನೊಂದಿಗೆ ಪ್ರೀತಿ, ನಿಷ್ಠಾವಂತ, ಚಿಕ್ಕ ಚಿಕ್ಕ ವಿಷಯಗಳಲ್ಲಿ ಅವರು ಸಲಹೆ ಕೇಳುತ್ತಿದ್ದರು. ಅಲ್ಲಾಹನು ಅವರಿಗೆ ಸಂಪತ್ತನ್ನು ಸಹ ನೀಡಿದ್ದನು. ಯಾವಾಗಾಲಾದರು ಇದರ ಬಗ್ಗೆ ಹೇಳಿದಾಗ

ಅವರು ಹೇಳುತ್ತಿದ್ದರು. ಇದೆಲ್ಲವೂ ಈ ಕಚೇರಿಯಲ್ಲಿ ಸೇವೆಸಲ್ಲಿಸುವ ಕಾರಣ ಅಲ್ಲಾಹನು ನೀಡಿದ್ದಾನೆ ಎಂದು.

ಡಾಕ್ಟರ್ ಇಬ್ರಾಹೀಮ್ ನಾಸಿರ್ ಭಟ್ಟಿ ಸಾಹಿಬ್ ಹೇಳುತ್ತಾರೆ: ಕೊರೋನ ವೈರಸ್ ರೋಗ ವರ್ಧಿಸಿದಾಗ ಅವರಿಗೆ ಸಿ.ಪಿ.ಎ.ಸಿ. ಚುಚ್ಚು ಮದ್ದು ನೀಡುವ ಆವಶ್ಯಕತೆ ತಲೆದೋರುತ್ತಿತ್ತು. ಆಗ ಅವರ ಸ್ಥಿತಿ ಭಯಾನಕವಾಗಿರುತ್ತಿತ್ತು. ಅವರು ಬಹಳ ನೋವು ಅನುಭವಿಸುವಾಗ ಅವರ ಮನೆಯವರು ಅವರ ಸಮೀಪಕ್ಕೆ ಹೋಗಿ ಹೇಳುತ್ತಿದ್ದರು ಖಲೀಫರು ಮಾರ್ಗದರ್ಶನ ನೀಡಿದ್ದಾರೆ – ಡಾಕ್ಟರ್‌ಗಳ ಮಾರ್ಗಸೂಚಿ ಪ್ರಕಾರ ಕಾರ್ಯನಿರತರಾಗಬೇಕೆಂದು. ಹಾಗೆ ಅವರಿಗೆ ನನ್ನ ಸಂದೇಶ ತಲಪುವಾಗ ಅವರು ಅಚಾನಕವಾಗಿ ಸಾಂತ್ವನಗೊಳ್ಳುತ್ತಿದ್ದರು.

ಅಲ್ಲಾಹನು ಈ ಎಲ್ಲಾ ನಿಧನ ಹೊಂದಿದವರ ಪದವಿಗಳನ್ನು ಉನ್ನತಗೊಳಿಸಲಿ. ಅವರೆಲ್ಲರೂ ಅಲ್ಲಾಹನೊಂದಿಗೆ ಮತ್ತು ಅವನ ಧರ್ಮದೊಂದಿಗೆ ಹೊಂದಿದ್ದ ನಿಷ್ಠೆಯ ಕಾರಣದಿಂದಲೂ ಅವರು ತಮ್ಮ ಬೈಅತ್ ಪ್ರತಿಜ್ಞೆಗಳನ್ನು ನಿರ್ವಹಿಸಲು ಮಾಡಿದ ಪ್ರಯತ್ನಗಳ ಕಾರಣದಿಂದಲೂ ಅಲ್ಲಾಹನು ಅವರೊಂದಿಗೆ ಹೆಚ್ಚಿನ ಪ್ರೀತಿಯಿಂದ ವರ್ತಿಸುವವನಾಗಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಈ ಜನರು ಶಹೀದರಾದವರಾಗಿದ್ದಾರೆ. ಅಲ್ಲಾಹನು ಅವರ ಮಕ್ಕಳನ್ನು ತನ್ನ ಸಂರಕ್ಷಣೆಯಲ್ಲಿಯೂ ಸಮಾಧಾನದಲ್ಲಿಯೂ ಇರಿಸುವವನಾಗಲಿ. ಅವರ ಒಳಿತುಗಳನ್ನು ಮೈಗೂಡಿಸಿಗೊಂಡು ಜಾರಿಯಲ್ಲಿರಿಸುವ ಭಾಗ್ಯವನ್ನು ಅವರ ಮಕ್ಕಳಿಗೆ ಅಲ್ಲಾಹನು ದಯಪಾಲಿಸಲಿ. ಮಕ್ಕಳು ಅಲ್ಲಾಹನೊಂದಿಗೆ ಸಂಬಂಧ ಸೃಷ್ಟಿಸುವವರೂ ಜಮಾಅತ್‌ನೊಂದಿಗೂ ಖಿಲಾಫತ್‌ನೊಂದಿಗೂ ಯಾವಾಗಲೂ ನಿಷ್ಠೆಯ ಸಂಬಂಧವನ್ನು ಹೊಂದುವವರೂ ಆಗುವಂತೆ ಅಲ್ಲಾಹನು ಅವರಿಗೆ ಭಾಗ್ಯ ನೀಡಲಿ. ಅವರ ಮಾತಾಪಿತರು ಅವರಿಗೋಸ್ಕರ ಅಲ್ಲಾಹನೊಂದಿಗೆ ಮಾಡಿದ ಪ್ರಾರ್ಥನೆಗಳನ್ನು ಅಲ್ಲಾಹನು ಅವರ ಹಿತಕ್ಕೋಸ್ಕರ ಅಂಗೀಕರಿಸುವವನಾಗಲಿ – ಆಮೀನ್.

********************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಜನರು ನಮಾಝುಗಳಲ್ಲಿ ಆಲಸ್ಯ ಹಾಗೂ ನಿರಾಸಕ್ತಿ ಹೊಂದಲು ಕಾರಣವೇನೆಂದರೆ ಅವರಿಗೆ ಅದರಲ್ಲಿ ಹುದುಗಿರುವ ಅದರ ರುಚಿ, ಅದರಿಂದ ಲಭಿಸುವ ನೆಮ್ಮದಿ ಮತ್ತು ಮನಃಶ್ಶಾಂತಿ ತಿಳಿಯದಾಗಿದೆ. ಅದಕ್ಕಿರುವ ಬಹು ದೊಡ್ಡ ಕಾರಣ ಇದೇ ಆಗಿದೆ. ನಗರ ಮತ್ತು ಪಟ್ಟಣಪ್ರದೇಶಗಳಲ್ಲಿ ಜನರು ಹೆಚ್ಚಿನ ಆಲಸ್ಯ ಮತ್ತು ಅನಾಸಕ್ತಿ ಹೊಂದಿದವರಾಗುತ್ತಾರೆ. ಒಟ್ಟಿನಲ್ಲಿ ಶೇಕಡಾ ಐವತ್ತು ಜನರು ಪೂರ್ಣ ಶ್ರದ್ಧೆಯಿಂದಲೂ, ನಿಜವಾದ ಭಕ್ತಿಯಿಂದಲೂ ಸರ್ವ ಲೋಕಪರಿಪಾಲಕನಾದ ಅಲ್ಲಾಹನ ಮುಂದೆ ತಲೆ ಬಾಗಿಸುತ್ತಿಲ್ಲ. ಮತ್ತೊಮ್ಮೆ ಅದೇ ಪ್ರಶ್ನೆ ಏಳುತ್ತದೆ, ಅವರಿಗೆ ಯಾಕೆ ಸಾಮರಸ್ಯ ದೊರೆಯುತ್ತಿಲ್ಲ ಎಂದು. ಅವರು ಆ ಸ್ವಾದವನ್ನು ಅನುಭವಿಸಿದವರಲ್ಲ. ಎಂದಾದರೂ ನಾವು ಕೆಲಸದಲ್ಲಿ ಮಗ್ನರಾಗಿರುವಾಗ ಮುಅಝ್ಝಿನ್ ಅಝಾನ್ ಕೊಟ್ಟರೆ ಆಗ ಅದನ್ನು ಅವರು ಕೇಳಲೂ ಇಚ್ಛಿಸುವುದಿಲ್ಲ. ಅಂದರೆ ಅವರ ಹೃದಯುಗಳು ಅಷ್ಟು ದುಃಖಿತವಾಗುತ್ತವೆ. ಇಂತಹ ಜನರು ತುಂಬ ಕರುಣೆಗೆ ಯೋಗ್ಯರಾಗಿರುತ್ತಾರೆ. ಮತ್ತೆ ಕೆಲ ಜನರು ತಮ್ಮ ಅಂಗಡಿಗಳು ಮಸೀದಿಯ ಕೆಳಭಾಗದಲ್ಲಿಯೇ ಇದ್ದರೂ ಮಸೀದಿಗೆ ಹೋಗುವುದಿಲ್ಲ. ಆದುದರಿಂದ ನಾನು ಹೇಳಬಯಸುವುದೇನೆಂದರೆ ಅಲ್ಲಾಹನೊಡನೆ ಅತ್ಯಂತ ವ್ಯಾಕುಲತೆಯಿಂದಲೂ ಭಕ್ತಿಯಿಂದಲೂ ಪ್ರಾರ್ಥಿಸಬೇಕು. ಯಾವ ರೀತಿ ಇಲ್ಲಿಯ ಹಣ್ಣು ಹಂಪಲುಗಳಲ್ಲಿಯೂ ಮತ್ತು ಇತರ ತಿಂಡಿಗಳಲ್ಲಿಯೂ ವಿಭಿನ್ನ ರೀತಿಯ ಸ್ವಾದವಿದೆಯೋ ಅದೇ ರೀತಿಯ ಸ್ವಾದ ನಮಾಝ್ ಮತ್ತು ಆರಾಧನೆಯಲ್ಲಿದೆ. ಅದರ ಸ್ವಾದ ಅನುಭವಿಸುವಂತೆ ಮಾಡು ಎಂದು ನಾವು ಅಲ್ಲಾಹನಲ್ಲಿ ಪ್ರಾರ್ಥಿಸಬೇಕು. ಒಬ್ಬ ಸುಂದರ ವ್ಯಕ್ತಿಯನ್ನು ಕಂಡರೆ ಅದು ಚೆನ್ನಾಗಿ ನೆನಪಿರುತ್ತದೆ. ಅದೇ ಜಾಗದಲ್ಲಿ ಒಬ್ಬ ಕುರೂಪಿಯನ್ನು ಕಂಡರೆ ಅವನ ಸಂಪೂರ್ಣ ಸ್ಥಿತಿ ಮುಂದೆ ಬಂದು ನಿಲ್ಲುತ್ತದೆ. ಯಾವುದಕ್ಕೂ ಸಂಬಂಧವಿಲ್ಲದಿದ್ದರೆ ಏನೂ ನೆನಪಿರುವುದಿಲ್ಲ. ಅದೇ ರೀತಿ ನಮಾಝ್ ಮಾಡದವರಿಗೆ ನಮಾಝ್ ಎಂಬುದು ಒಂದು ತೆರಿಗೆಯಂತೆ ಭಾಸವಾಗುತ್ತದೆ. ಸುಮ್ಮನೆ ಯಾಕಾಗಿ ಮುಂಜಾನೆ ಎದ್ದು ಚಳಿಯಲ್ಲಿ ವುಝು ಮಾಡಿ, ಗಾಢನಿದ್ರೆಯನ್ನು ಬಿಟ್ಟು ನಮಾಝ್ ಮಾಡಬೇಕು? ವಾಸ್ತವವೇನೆಂದರೆ ಅವರು ಆಲಸಿಗಳಾಗಿದ್ದಾರೆ. ಅದನ್ನು ಅವರಿಂದ ತಿಳಿಯಲು ಸಾಧ್ಯವಿಲ್ಲ. ನಮಾಝಿನಲ್ಲಿರುವ ಸ್ವಾದ ಮತ್ತು ಸುಖದ ಅರಿವು ಅವರಿಗೆ ಇರುವುದಿಲ್ಲ. ಆದುದರಿಂದ ಅವರಿಗೆ ಹೇಗೆ ತಾನೇ ನಮಾಝ್ ರುಚಿಸಬಹುದಾಗಿದೆ?

ಒಬ್ಬ ಮಧ್ಯ ವ್ಯಸನಿ, ತಾನು ಕುಡಿದಾಗ ಅಮಲು ಏರದಿದ್ದರೆ ಅಮಲೇರುವವರೆಗೆ ಮತ್ತೆ ಮತ್ತೆ ಕುಡಿಯುತ್ತಾನೆ. ಬುದ್ಧಿವಂತರೂ ಸಜ್ಜನರೂ ಇದರಿಂದ ಪಾಠ ಕಲಿಯಬಹುದಾಗಿದೆ. ನಮಾಝುಗಳನ್ನು ಬಿಡದೆ ನಿರಂತರವಾಗಿ ನಿರ್ವಹಿಸಬೇಕು. ಯಾವ ರೀತಿ ಒಬ್ಬ ಮಧ್ಯ ವ್ಯಸನಿ ತನ್ನ ಗುರಿ ಸಾಧಿಸುವವರೆಗೆ ಕುಡಿಯುವುದನ್ನು ಬಿಡುವುದಿಲ್ಲವೋ ಅದೇ ರೀತಿಯ ಮನೋಭಾವದಿಂದ ನಮಾಝ್ ನಿರ್ವಹಿಸಬೇಕು. ತನ್ಮಯತೆಯಿಂದ, ಹುಮ್ಮಸ್ಸಿನಿಂದ ಆ ಕುಡುಕನ ಹವ್ಯಾಸದಂತೆಯೇ ಒಂದು ಕ್ಷಣ ಕಳೆಯಬೇಕು. ನಾನು ಸತ್ಯವಾಗಿಯೂ ಹೇಳುತ್ತೇನೆ – ಆಗ ನಿಶ್ಚಯವಾಗಿಯೂ ನೀವು ಯಶಸ್ಸು ಸಾಧಿಸುವಿರಿ.

**(ಮಲ್ಫೂಝಾತ್ ಸಂಪುಟ 1 ಪುಟ 140 ರಿಂದ 143 ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ಶಾಹ್ ಝೈನ್ ಮಿರ್ಝ, ರಾಹಿಲ್ ಅಹ್ಮದ್ ನಾಝ್, ಸಯ್ಯದ್ ಬಾಸಿಲ್ ಅಹ್ಮದ್.

ಆಮೀನ್ ಸಮಾರಂಭದ ನಂತರ ಮಗ್ರೀಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

**19 ಅಕ್ಟೋಬರ್ 2019 (ಶನಿವಾರ)**

ಹುಝೂರ್(ಅಬಿಅ) ಮುಂಜಾನೆ 7 ಗಂಟೆಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್(ಅಬಿಅ) ಕಚೇರಿ ಅಂಚೆಗಳನ್ನು, ವರದಿಗಳನ್ನು ಮತ್ತು ಕಾಗದಪತ್ರಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿ ಕಚೇರಿ ಕಾರ್ಯಗಳಲ್ಲಿ ತೊಡಗಿಸಿಕೊಂಡರು.

ಕಾರ್ಯಕ್ರಮದನ್ವಯ ಮುಂಜಾನೆ 11 ಗಂಟೆ 30 ನಿಮಿಷಕ್ಕೆ ಹುಝೂರ್(ಅಬಿಅ) ತಮ್ಮ ಕಚೇರಿಗೆ ಆಗಮಿಸಿ ಕೌಟುಂಬಿಕ ಭೇಟಿಯನ್ನು ಪ್ರಾರಂಭಿಸಿದರು. ಮುಂಜಾನೆಯ ಈ ಅಧಿವೇಶನದಲ್ಲಿ 45 ಕುಟುಂಬಗಳ 178 ಜನರು ಮತ್ತು 3 ಜನ ವೈಯಕ್ತಿಕವಾಗಿ ತಮ್ಮ ಪ್ರೀತಿಯ ಇಮಾಮರೊಂದಿಗೆ ಭೇಟಿಯಾಗುವ ಭಾಗ್ಯ ಪಡೆದರು. ಭೇಟಿ ಮಾಡಲು ಬಂದ ಈ ಕುಟುಂಬಗಳು ಜರ್ಮನಿಯ ವಿವಿಧ ಜಮಾಅತುಗಳಿಂದ ಬಂದಿದ್ದರು.

ಇವರೆಲ್ಲರೂ ಹುಝೂರ್(ಅಬಿಅ) ರ ಜೊತೆಯಲ್ಲಿ ಭಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ಪಡೆದರು. ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಲೇಖನಿ (Pen) ಮತ್ತು ಬಾಲಕ ಬಾಲಕಿಯರು ಚಾಕ್‌ಲೇಟ್‌ಗಳನ್ನು ಪಡೆದುಕೊಂಡರು.

**ಬಾಲಕಿಯರ ಆಮೀನ್ ಸಮಾರಂಭ:–**

ಅನಂತರ ಹುಝೂರ್(ಅಬಿಅ) ಲಜ್ನ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಬಾಲಕಿಯರ ಆಮೀನ್ ಸಮಾರಂಭ ಏರ್ಪಡಿಸಲಾಗಿತ್ತು. ಕೆಳಗೆ ನಮೂದಿಸಿದ 35 ಬಾಲಕಿಯರಿಂದ ಪವಿತ್ರ ಖುರ್‌ಆನ್‌ನ ಒಂದೊಂದು ವಚನವನ್ನು ಆಲಿಸಿ ಕೊನೆಯಲ್ಲಿ ದುಆ ಮಾಡಿಸಿದರು.

ಅಝೀಝು ಅಲೀಶ ವಹೀದ್, ತಮ್‌ಸೀಲ ಅಹ್ಮದ್, ಲಬೀಖ ಹಮೀದ್, ಅಖೀಖ ಅಮಾನ್, ಬಾಸಿಮಾ ರಝಾ, ಅಲೀಝ ಮಹ್ಮೂದ್, ಮಾಹಾ ಅಹ್ಮದ್, ಹಿನ್ನತುಸ್ಸಬೂರ್ ತಾಹಿರ್, ಅದೀನ ಬುಶ್ರ, ಹಾದಿಯಾ ಅಹ್ಮದ್, ರಾಬಿಯಾ ಕರೀಮ್, ಸಮ್ರಾನ್ ಅತಿಯ, ಇನಾಯ ಅಹ್ಮದ್ ಕಹ್ಲೂನ್, ಅಲೀಬ ತಾಹಿರ್, ಲಬೀಖ ಖಮರ್, ಜಾಝಿಬಾ ಅಖ್ಸಾ ಅಹ್ಮದ್, ಮಾಎರಹ್ ಲಂಗಹ್, ರೂಮಾನ ಮುದಸ್ಸಿರ್, ಉಝ್ಮಾ ಮೀರ್, ಫರ್‌ಯಾಲ್ ಚೌಧರೀ, ಫರೀಹ ಚೌಧರಿ, ಮೀರಾಬ್ ಇಮ್ತಿಯಾಝ್ ವಡಾಇಚ್, ಆಲಿಯಾ ಅಹಜ್ಮದ್, ಆಯಿಶ ಅಹ್ಮದ್, ಸಬಾ ಖಾನ್, ದುಆ ವಸೀಮ್, ನಾಎಲಾ ಲೈಲತುಲ್ ಖದರ್ ಝಿಯಾ, ಹಿಬ ಚೀಮ, ಮಲಾಹತ್ ಫಹೀಮ್, ಈಸ ಲತೀಫ್, ನಾಎಲ ಸಯೀದ್, ರಾಫಿಆ ಸಯೀದ್, ಜಾಝಿಬಾ ನಸೀರ್ ಅಹ್ಮದ್, ಹಾಲ ಪರೀಸ ತಾಹಿರ್, ಹಿರಾ ಸಾಲೆಹ ಹಸನ್.

ಹುಝೂರ್(ಅಬಿಅ) ಆಮೀನ್ ಸಮಾರಂಭದ ನಂತರ ಮಸೀದಿಯ ಪುರುಷರ ಸಭಾಂಗಣಕ್ಕೆ ಆಗಮಿಸಿ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**ಕೌಟುಂಬಿಕ ಭೇಟಿಗಳು**

ಕಾರ್ಯಕ್ರಮದನ್ವಯ 6 ಗಂಟೆ 25 ನಿಮಿಷಕ್ಕೆ ಹುಝೂರ್(ಅಬಿಅ) ತಮ್ಮ ಕಚೇರಿಗೆ ಆಗಮಿಸಿದರು ನಂತರ ಕೌಟುಂಬಿಕ ಭೇಟಿಯ ಕಾರ್ಯಕ್ರಮ ಪ್ರಾರಂಭವಾಯಿತು. ಇಂದಿನ ಸಂಜೆಯ ಈ ಅಧಿವೇಶನದಲ್ಲಿ 19 ಕುಟುಂಬಗಳ 72 ಜನರು ಮತ್ತು 15 ಜನರು ವೈಯಕ್ತಿಕವಾಗಿ ಹುಝೂರ್(ಅಬಿಅ) ರ ಜೊತೆ ಭೇಟಿಯಾಗುವ ಭಾಗ್ಯ ಪಡೆದರು. ಭೇಟಿಯಾಗಲು ಬಂದ ಈ ಕುಟುಂಬಗಳು

ಜರ್ಮನಿಯ ವಿವಿಧ ಬಾಗದ 251 ಜಮಾಅತುಗಳಿಂದ ಬಂದವರಾಗಿದ್ದರು. ಅವರಲ್ಲಿ ಕೆಲವರು ಬಹು ದೂರ ಪ್ರಯಾಣ ಸಾಗಿಸಿ ಬಂದವರಾಗಿದ್ದರು.

Iserlohn ಮತ್ತು Immenhausen ನಿಂದ ಎರಡು ಮೂರು ಕಿ.ಮೀ ಮತ್ತು Augsburg ನಿಂದ 350 ಕಿ.ಮೀ ದೂರವನ್ನು ಕ್ರಮಿಸಿ ಬಂದವರಾಗಿದ್ದರು. ಜರ್ಮನಿ ಅಲ್ಲದೇ ಪಾಕಿಸ್ತಾನ ಮತ್ತು ಸ್ವೀಡನ್‌ನಿಂದ ಬಂದ ಕೆಲವರು ಸಹ ಭೇಟಿಯಾಗುವ ಭಾಗ್ಯ ಪಡೆದರು. ಈ ಎಲ್ಲಾ ಕುಟುಂಬಗಳು ಮತ್ತು ಸದಸ್ಯರು ತಮ್ಮ ಪ್ರೀತಿಯ ಇಮಾಮರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್(ಅಬಿಅ) ಪ್ರೀತಿಯಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೇಖನಿ (Pen) ನೀಡಿದರು. ಮತ್ತು ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್‌ಲೇಟ್‌ಗಳನ್ನು ನೀಡಿದರು. ಭೇಟಿಯ ಈ ಕಾರ್ಯಕ್ರಮ 7 ಗಂಟೆ 25 ನಿಮಿಷದವರೆಗೆ ನಡೆಯಿತು. ಅನಂತರ ಅಲ್ಪ ಸಮಯದ ವಿಶ್ರಾಂತಿಗಾಗಿ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**ಜಲ್ಸ ಸಾಲಾನ ಜರ್ಮನಿಯ ನಾಝಿಮೀನ್ ನಾಝಿಮಾತರಿಗೆ ಸಂಜೆಯ ಔತಣಕೂಟ**

ಕಾರ್ಯಕ್ರಮದನ್ವಯ ಇಂದು ಸಂಜೆ ನಾಝಿಮೀನ್ ಹಾಗೂ ನಾಝಿಮಾತ್ ಜಲ್ಸ ಸಾಲಾನ 2019 ಔತಣಕೂಟವು ಹುಝೂರ್(ಅಬಿಅ) ರ ಜೊತೆಯಲ್ಲಿ ಲಜ್ನಾ ನಮಾಝ್ ಸಭಾಂಗಣದ ಹತ್ತಿರವಿರುವ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಜಲ್ಸ ಸಾಲಾನ ಅಧಿಕಾರಿಗಳು ಮತ್ತು ಉಪ ಅಧಿಕಾರಿಗಳು ಹಾಗೂ ನಾಝಿಮೀನ್ ಅವರ ಒಟ್ಟು ಸಂಖ್ಯೆ 57 ಆಗಿದೆ. ಲಜ್ನಾ ಜಲ್ಸ ಸ್ಥಳದ ನಾಝಿಮ ಆರಾ, ಉಪ ನಾಝಿಮ ಆಲಾ ಮತ್ತು ನಾಝಿಮಾತ್‌ಗಳ ಸಂಖ್ಯೆ 59 ಇದೆ. ಇವರೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

7 ಗಂಟೆ 40 ನಿಮಿಷಕ್ಕೆ ಹುಝೂರ್(ಅಬಿಅ) ಸಭಾಂಗಣಕ್ಕೆ ಆಗಮಿಸಿ ದುಆ ಮಾಡಿಸಿದರು. ಮತ್ತು ಸೇವಾನಿರತರೆಲ್ಲರೂ ಹುಝೂರರ ಸಹಭಾಗಿತ್ವದಲ್ಲಿ ಊಟ ಮಾಡುವ ಭಾಗ್ಯ ಪಡೆದರು. ಅನಂತರ 8 ಗಂಟೆ 10 ನಿಮಿಷಕ್ಕೆ ಹುಝೂರ್(ಅಬಿಅ) ಮಸೀದಿಯ ಸಭಾಂಗಣಕ್ಕೆ ಆಗಮಿಸಿ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

**ಇಲಾನಾತೆ ನಿಕಾಹ್ (ವಿವಾಹ ಸಮಾರಂಭ)**

ನಮಾಝುಗಳ ನಂತರ ಹುಝೂರ್(ಅಬಿಅ) 19 ವಿವಾಹಗಳ ಘೋಷಣೆ ಮಾಡಿದರು.

ಹುಝೂರ್(ಅಬಿಅ) ಖುತುಬ ನಿಕಾಹ್ ಮತ್ತು ನಿಗದಿತ ವಚನಗಳನ್ನು ಪಠಿಸಿದ ನಂತರ ಹೇಳಿದರು. ಈಗ ನಾನು ಕೆಲವು ವಿವಾಹಗಳ ಘೋಷಣೆಯನ್ನು ಮಾಡಬೇಕು.

ವಿವಾಹಗಳ ಘೋಷಣೆಯ ನಂತರ ಹುಝೂರ್(ಅಬಿಅ) ಹೇಳಿದರು ದುಆ ಮಾಡುವ ಅಲ್ಲಾಹನು ಇವೆಲ್ಲ ಸಂಬಂಧಗಳನ್ನು ಎಲ್ಲ ರೀತಿಯಿಂದ ಅನುಗ್ರಹಭರಿತರಾಗುವಂತೆ ದಯಪಾಲಿಸಲಿ.

ದುಆದ ನಂತರ ಹುಝೂರ್(ಅಬಿಅ) ತಮ್ಮ ವಸತಿ ನಿಲಯಕ್ಕೆ ತೆರಳಿದರು.

**20 ಅಕ್ಟೋಬರ್, 2019 (ಭಾನುವಾರ)**

ಹುಝೂರ್(ಅಬಿಅ) ಮುಂಜಾನೆ 7 ಗಂಟೆಗೆ ಮಸೀದಿಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು. ಮುಂಜಾನೆ ಹುಝೂರ್(ಅಬಿಅ) ಕಚೇರಿ ಅಂಚೆಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿ ನಿರ್ದೇಶನಗಳನ್ನು ನೀಡಿದರು. ಅಂತೆಯೇ ವಿವಿಧ ಕಚೇರಿ ಕಾರ್ಯಗಳನ್ನು ನಿರ್ವಹಿಸಿದರು.

**ಕೌಟುಂಬಿಕ ಭೇಟಿ**

ಕಾರ್ಯಕ್ರಮದನ್ವಯ ಹನ್ನೊಂದೂವರೆ ಗಂಟೆಗೆ ಹುಝೂರ್(ಅಬಿಅ) ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕೌಟುಂಬಿಕ ಭೇಟಿಯ ಕಾರ್ಯಕ್ರಮ ಪ್ರಾರಂಭವಾಯಿತು. ಮುಂಜಾನೆಯ ಅಧಿವೇಶನದಲ್ಲಿ 39 ಕುಟುಂಬಗಳ 146 ಜನರು ಮತ್ತು ಇತರ 13 ಜನರು ವೈಯಕ್ತಿಕವಾಗಿ ತಮ್ಮ ಪ್ರೀತಿಯ ಇಮಾಮರೊಂದಿಗೆ ಭೇಟಿಯಾಗುವ ಭಾಗ್ಯ ಪಡೆದರು. ಭೇಟಿ ಮಾಡಿದ ಈ ಕುಟುಂಗಳು ಜರ್ಮನಿಯ 29 ವಿವಿಧ ಜಮಾಅತುಗಳಿಂದ ಬಂದಿದ್ದರು. ಕೆಲವು ಕುಟುಂಬಗಳು ಬಹು ದೂರದ ಪ್ರಯಾಣ ಬೆಳೆಸಿ ಇಲ್ಲಿ ತಲುಪಿದ್ದರು.

Dusseldert ನಿಂದ 250 ಕಿ.ಮೀ, Calw ನಿಂದ 285 ಕಿ.ಮೀ ಮತ್ತು ಮ್ಯಾನಿಬ್ ನಿಂದ 405 ಕಿ.ಮೀ ದೀರ್ಘವಾದ ಪ್ರಯಾಣ ಕ್ರಮಿಸಿ ತಮ್ಮ ನೇತಾರರನ್ನು ಭೇಟಿ ಮಾಡಲು ಬಂದು ತಲುಪಿದ್ದರು. ಪ್ರತಿಯೊಬ್ಬರೂ ಹುಝೂರ್(ಅಬಿಅ) ಜೊತೆಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಪ್ರೀತಿಯಿಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲೇಖನಿ (Pen) ಪಾರಿತೋಷಕವಾಗಿ ನೀಡಿದರು. ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್‌ಲೇಟ್‌ಗಳನ್ನು ನೀಡಿದರು. ಭೇಟಿಯ ಈ ಕಾರ್ಯಕ್ರಮವು ಮಧ್ಯಾಹ್ನ 2 ಗಂಟೆಯವರೆಗೆ ನಡೆಯಿತು. ಅನಂತರ ಅವರು ತಮ್ಮ ವಸತಿನಿಲಯಕ್ಕೆ ನಿರ್ಗಮಿಸಿದರು.

**ಮಸ್ಜಿದ್ ಬೈತುಲ್ ಹಮೀದ್ ಉದ್ಘಾಟನೆ**

ಇಂದು ಕಾರ್ಯಕ್ರಮದನ್ವಯ ಫ್ರೆಂಕ್‌ಫರ್ಟ್‌ನಿಂದ 115 ಕಿ.ಮೀ ದೂರವಿರುವ Fulda ನಗರದಲ್ಲಿ ಮಸ್ಜಿದ್ ಬೈತುಲ್–ಹಮೀದ್‌ನ ಉದ್ಘಾಟನಾ ಸಮಾರಂಭ ಏರ್ಪಡಿಸಲಾಗಿತ್ತು. 3 ಗಂಟೆ 45 ನಿಮಿಷಕ್ಕೆ ಹುಝೂರ್(ಅಬಿಅ) ತಮ್ಮ ವಸತಿನಿಲಯದಿಂದ ಹೊರಗೆ ಬಂದರು ಮತ್ತು Fulda ನಗರಕ್ಕೆ ಹೊರಟರು. ಸುಮಾರು ಒಂದು ಗಂಟೆ 15 ನಿಮಿಷ ಪ್ರಯಾಣದ ನಂತರ 5 ಗಂಟೆಗೆ ಹುಝೂರ್(ಅಬಿಅ) Fulda ಬೈತುಲ್ ಹಮೀದ್ ಮಸೀದಿಗೆ ತಲುಪಿದರು. ಸ್ಥಳೀಯ ಜಮಾಅತಿನ ಸ್ತ್ರೀ ಪುರುಷ ಬಾಂಧವರು ಅವರ ಆಗಮನವನ್ನು ನಿರೀಕ್ಷಿಸುತ್ತಿದ್ದರು. ವಾಹನದಿಂದ ಹೊರ ಬರುತ್ತಲೇ ಎಲ್ಲರು ಅವರಿಗೆ ಉತ್ಸಾಹಪೂರ್ಣ ಸ್ವಾಗತ ಕೋರಿದರು. ಬಾಲಕ ಬಾಲಕಿಯರು ಸ್ವಾಗತ ಗೀತೆ ಮತ್ತು ಪ್ರಾರ್ಥನಾ ಗೀತೆಗಳನ್ನು ಪ್ರಸ್ತುತಪಡಿಸಿದರು. ಮಹಿಳೆಯರು ತಮ್ಮ ಕೈಗಳನ್ನು ಬೀಸುತ್ತ ದರ್ಶನ ಭಾಗ್ಯ ಪಡೆದರು. Fulda ನಿವಾಸಿಗಳಿಗೆ ಅಂದಿನ ದಿವಸವು ತುಂಬ ಹರ್ಷ ಹಾಗೂ ಅನುಗ್ರಹದ ದಿನವಾಗಿತ್ತು. ಎರಡನೆ ಸಲ ಹುಝೂರ್(ಅಬಿಅ) ರು ಈ ನಗರಕ್ಕೆ ಆಗಮಿಸಿದ್ದರು. ಮತ್ತು ಅಂದು ಮಸೀದಿಯ ಉದ್ಘಾಟನೆ ಆಗಬೇಕಿತ್ತು. ಪ್ರತಿಯೊಬ್ಬರೂ ಹರ್ಷಭರಿತರಾಗಿದ್ದರು. ಎಲ್ಲೆಡೆಯಿಂದ ಅಹಲನ್ ವ ಸಹಲನ್ ವ ಮರಹಬನ್ ಧ್ವನಿ ಮೊಳಗುತಿತ್ತು. ಮುಕರ್ರಮ್ ನಜ್‌ಮುಸ್ಸಾಖಿಬ್, ಪುಲ್ಡಾ ಜಮಾಅತ್ ಅಧ್ಯಕ್ಷರು ಮತ್ತು ಇಜಾಝು ಜಂಜುಆ, ಪುಲ್ಡಾ ಜಮಾಅತ್ ಮುಬಲ್ಲಿಗರು ಹುಝೂರ್(ಅಬಿಅ) ರಿಗೆ ಸ್ವಾಗತ ಕೋರಿದರು.

ಅನಂತರ ಹುಝೂರ್ ಮಸೀದಿಯ ಹೊರಗೆ ಗೋಡೆಯಲ್ಲಿ ಸ್ಥಾಪಿಸಿದ್ದ ಉದ್ಘಾಟನಾ ಫಲಕವನ್ನು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಕೆಳಗೆ ನಮೂದಿತ ಮಾಧ್ಯಮ ಪ್ರತಿನಿಧಿಗಳು ಉಪಸ್ಥಿತರಿದ್ದರು: ಹೇಸನ್ ರಾಜ್ಯದ H R ರೇಡಿಯೋ ಪ್ರತಿನಿಧಿ, Dsthessen News ಪ್ರತಿನಿಧಿ, Fulda Zeitung ಪತ್ರಿಕೆಯ ಪ್ರತಿನಿಧಿ.

ಉದ್ಘಾಟನಾ ಫಲಕವನ್ನು ಅನಾವರಣ ಮಾಡಿದ ನಂತರ ಹುಝೂರ್ ಮಸೀದಿಯ ಸಭಾಂಗಣಕ್ಕೆ ಆಗಮಿಸಿ ಮಸೀದಿಯನ್ನು ವೀಕ್ಷಿಸಿದರು. ಅದರ ನಕ್ಷೆಯನ್ನು ಪರಿಶೀಲಿಸಿ ಸ್ವಲ್ಪ ಬದಲಾವಣೆ ಮಾಡಿದ್ದರೆ ಮಸೀದಿಯ ಹಿಂಭಾಗದಲ್ಲಿ ಇನ್ನೊಂದು ಪಂಕ್ತಿ ಸೇರಿಸಬಹುದಾಗಿತ್ತೆಂದು ಹೇಳಿದರು.

ಅನಂತರ ಝೊಹರ್, ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ಅದರೊಂದಿಗೆ ಮಸೀದಿಯ ಉದ್ಘಾಟನಾ ಕಾರ್ಯ ಆರಂಭವಾಯಿತು. ತದನಂತರ ಅವರು ಲಜ್ನ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಬಾಲಕಿಯರು ಗುಂಪು ಗುಂಪಾಗಿ ಪ್ರಾರ್ಥನಾ ಗೀತೆಗಳನ್ನೂ, ಇತರ ಗೀತೆಗಳನ್ನೂ ಪ್ರಸ್ತುತಪಡಿಸಿದರು. ಮಹಿಳೆಯರು ದರ್ಶನ ಭಾಗ್ಯ ಪಡೆದರು. ಹುಝೂರ್(ಅಬಿಅ) ಪ್ರೀತಿಯಿಂದ ಬಾಲಕಿಯರಿಗೆ ಚಾಕ್‌ಲೇಟ್‌ಗಳನ್ನು ನೀಡಿದರು.

ಅನಂತರ ಹುಝೂರ್(ಅಬಿಅ) ಮಸೀದಿಯ ಹೊರಭಾಗಕ್ಕೆ ಆಗಮಿಸಿ ಒಂದು ನೆನಪಿಗಾಗಿ ಸಸಿಯನ್ನು ನೆಟ್ಟರು. ಅನಂತರ ಮಸೀದಿಯ ಹೊರ ಆವರಣದಲ್ಲಿ ಮೊದಲೇ ನಿರ್ಮಿಸಲ್ಪಟ್ಟ ಕಟ್ಟಡವನ್ನು ವೀಕ್ಷಿಸಿದರು. ಹಾಗೂ ಅಲ್ಲಿಯ ಮುರಬ್ಬಿಯರಾದ ಮುಕರ್ರಮ್ ಇಜಾಝ್ ಅಹ್ಮದ್ ಜಂಜೂಆ ಸಾಹಿಬ್ ಅವರ ಮನೆಗೆ ಆಗಮಿಸಿದರು. ಮೊದಲೇ ನಿರ್ಮಿಸಲ್ಪಟ್ಟ ಆ ಕಟ್ಟಡದ ಒಂದು ಭಾಗದಲ್ಲಿ ಅವರ ಮನೆಯಿದೆ.

ಅನಂತರ ಮಸೀದಿಯ ಆವರಣದಲ್ಲಿಯೇ ಇದ್ದ ಪುಲ್ಡಾ ಜಮಾಅತಿನ ಓರ್ವ ಸದಸ್ಯರಾದ ಮುಕರ್ರಮ್ ಮಸ್‌ಊದ್ ಅಹ್ಮದ್ ಸಾಹಿಬ್‌ರವರು ನಿರ್ಮಾಣ ಮಾಡಬಯಸಿದ ಹೊಸಮನೆಗೆ ಅಡಿಗಲ್ಲು ಹಾಕಿದರು. ಅದೇ ಆವರಣದಲ್ಲಿ ಪ್ರೀತಿಯಿಂದ ಒಂದು ಸಸಿಯನ್ನೂ ನೆಟ್ಟರು. ಆಗ ಮಕ್ಕಳು ಸಾಲಾಗಿ ನಿಂತುಕೊಂಡಿದ್ದರು. ಆಗ ಆ ಮಕ್ಕಳಿಗೆ ಪ್ರೀತಿಯಿಂದ ಚಾಕ್‌ಲೇಟ್‌ಗಳನ್ನು ಹಂಚಿದರು. ಅನಂತರ ಮಜ್ಲಿಸ್ ಆಮ್‌ಲಾ (ಕಾರ್ಯಕಾರಿಣಿ ಸಭೆಯ ಸದಸ್ಯರು) ಪುಲ್ಡಾ ಮತ್ತು ಮಸೀದಿ ನಿರ್ಮಾಣ ಕಾರ್ಯ ವಿಭಾಗದವರು ಹಾಗೂ ಕಾರ್ಯಕರ್ತರು ಹುಝೂರ್(ಅಬಿಅ) ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

**ಫುಲ್ಡಾ ನಗರ ಮತ್ತು ಮಸೀದಿಯ ಪರಿಚಯ**

Fulda ನಗರವು ಜರ್ಮನಿಯ ಮಧ್ಯಭಾಗದಲ್ಲಿದೆ. ಇದು ಕೆಥೋಲಿಕ್ ಸಂಪ್ರದಾಯದ ವಿಶೇಷ ಕ್ಷೇತ್ರವಾಗಿದೆ. ಈ ನಗರ ಪ್ರಾರಂಭದಿಂದಲೇ ಕ್ರೈಸ್ತರ ಒಂದು ಪ್ರಮುಖ ಕೇಂದ್ರವಾಗಿತ್ತು. ಈ ನಗರದಲ್ಲಿ 1980ರ ಮೊದಲ ದಶಕದಲ್ಲಿ ನಮ್ಮ ಜಮಾಅತ್ ಸ್ಥಾಪನೆಗೊಂಡಿತ್ತು. ಆರಂಭದಲ್ಲಿ 15 ಕುಟುಂಬಗಳು ಇಲ್ಲಿ ವಾಸಿಸುತ್ತಿದ್ದವು. ನಂತರ ಜಮಾಅತಿನ ಸಂಖ್ಯೆಯಲ್ಲಿ ಅಸಾಮಾನ್ಯ ವೃದ್ಧಿಯಾಯಿತು. 1993ರಲ್ಲಿ ಇಲ್ಲಿಯ ಜಮಾಅತನ್ನು ಎರಡು ಭಾಗಗಳಾಗಿ ವಿಂಗಡಿಸಲಾಯಿತು. ಒಂದು ಜಮಾಅತ್ ಅಹ್ಮದಿಯಾ ಫುಲ್ಡಾ (East), ಮತ್ತೊಂದು ಜಮಾಅತ್ ಅಹ್ಮದಿಯಾ ಫುಲ್ಡಾ (West) ಎಂದು.

ಮಸೀದಿಗೋಸ್ಕರ 3478 ಚ.ಮೀ ವಿಸ್ತೀರ್ಣದ ಭೂಮಿಯನ್ನು 2013 ರಲ್ಲಿ ಮೂರು ಲಕ್ಷ 50 ಸಾವಿರ ಯೂರೋದಲ್ಲಿ ಖರೀದಿಸಲಾಯಿತು. 26 ಜೂನ್ 2013 ರಂದು ಹುಝೂರ್(ಅಬಿಅ) ತಮ್ಮ ಪ್ರವಾಸದ ನಡುವೆ ಈ ಮಸೀದಿಗೆ ಅಡಿಪಾಯ ಹಾಕಿದ್ದರು. ಈ ಮಸೀದಿಯಲ್ಲಿ 420 ಜನರು ನಮಾಝ್ ನಿರ್ವಹಿಸಬಹುದಾಗಿದೆ. ಮಸೀದಿಯ ಗುಂಬಜ್ 6 ಮೀಟರ್ ಅಗಲವಾಗಿದೆ. ಎರಡು ಮಿನಾರುಗಳೂ ಇವೆ. ನಮಾಝಿಗೋಸ್ಕರ 2 ಸಭಾಂಗಣಗಳು, 4 ಕಚೇರಿಗಳು, ಗ್ರಂಥಾಲಯ, ಅಡುಗೆಕೋಣೆ, ಅಂಗಡಿ ಮತ್ತು ಮುರಬ್ಬಿಯವರ ಮನೆಯೂ ಇದೆ. ಈ ಮಸೀದಿಯ ನಿರ್ಮಾಣ ವೆಚ್ಚವು 1.6 ಮಿಲಿಯನ್ ಯೂರೋ ಆಗಿರುತ್ತದೆ.

**ಮಸೀದಿಯ ಉದ್ಘಾಟನಾ ಸಮಾರಂಭ ಕುರಿತು**

ಮಸೀದಿಯ ಉದ್ಘಾಟನಾ ಸಮಾರಂಭವು Fulda ನಗರದ MARITIM ಎಂಬ ಹೋಟೆಲ್‌ನ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಈ ಸಮಾರಂಭದಲ್ಲಿ 330 ಸದಸ್ಯರು ಭಾಗವಹಿಸಿದ್ದರು. ಅವರಲ್ಲಿ

Mr. Heiko Wingen Feld.
Lord Mayor felda.

Mr. Bigrit Kompel
Ex. Member of parliament

Sara Kautzsch
Chairman Round table of religions felda.

Josepf Benkner
Chairman SPD Council Felda

Alja Epp-Naliwaiko
Chairman Green party Council Felda

Jurgen Plappert
Chairman liberal Party council felda

ಅವರುಗಳಲ್ಲದೇ ವಿವಿಧ ಕ್ಷೇತ್ರಗಳ ಮೇಯರ್‌ಗಳು, ಕೌನ್ಸಿಲರ್‌ಗಳು, ಸದಸ್ಯರುಗಳು, ಸರ್ಕಾರಿ ಕಾರ್ಯಕರ್ತರು, ಅಲ್ಲದೇ ವಿದ್ವಾಂಸರು, ವೈದ್ಯರು, ಅಧ್ಯಾಪಕರು, ವಕೀಲರು ಮುಂತಾದ ವಿವಿಧ ವಿಭಾಗಕ್ಕೆ ಸೇರಿದ ಜನರು ಭಾಗವಹಿಸಿದ್ದರು. ಕಾರ್ಯಕ್ರಮದನ್ವಯ ಹುಝೂರ್(ಅಬಿಅ) 5 ಗಂಟೆ 45 ನಿಮಿಷಕ್ಕೆ ಬೈತುಲ್ ಹಮೀದ್ ಮಸೀದಿಯಿಂದ ಈ ಸಮಾರಂಭಕ್ಕೆ ಪಾಲ್ಗೊಳ್ಳಲು ಹೊರಟರು. ಪೋಲೀಸರು Escort ನೀಡಿದರು. 6 ಗಂಟೆಗೆ ಅವರು Maritim ಹೋಟೇಲಿಗೆ ಆಗಮಿಸಿದರು. ಸಭಾಂಗಣದ ಹೊರಗಿನ ಬಾಗಿಲಿನಲ್ಲಿ ಫುಲ್ಡಾ ನಗರದ ಮೇಯರ್ ಹುಝೂರರನ್ನು ಸ್ವಾಗತಿಸಿದರು. ಅವರು ಆಗಮಿಸುವ ಮೊದಲೇ ಎಲ್ಲ ಅತಿಥಿಗಳು ತಮ್ಮ ಆಸನಗಳಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಆರಂಭವು ಖುರ್‌ಆನ್ ಪಠಣದಿಂದಾಯಿತು. ಅದನ್ನು ಮುಕರ್ರಮ್ ಹಾಫಿಝ್ ಝಾಕಿರ್ ಮುಸ್ಲಿಂ ಬಟ್ ಸಾಹಿಬ್ ನೆರವೇರಿಸಿದರು. ಮುಕರ್ರಮ್ ಡಾ॥ ರಾನಾ ಅಹ್ಮದ್ ಸಾಹಿಬ್ ಅದರ ಜರ್ಮನ್ ಅನುವಾದ ಪ್ರಸ್ತುತಪಡಿಸಿದರು.

ಅನಂತರ ಪ್ರಪ್ರಥಮವಾಗಿ ಜರ್ಮನಿಯ National ಅಮೀರ್ ಮುಕರ್ರಮ್ ಅಬ್ದುಲ್ಲ ವಾಗಸ್ ಹೌಝುರ್ ಸಾಹೇಬರು ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅತಿಥಿಗಳಿಗೆ ಶುಭಾಗಮನ ಕೋರುತ್ತ ಫುಲ್ಡಾ ನಗರ ಮತ್ತು ಜಮಾಅತಿನ ಪರಿಚಯ ನೀಡಿದರು. ಫುಲ್ಡಾದಲ್ಲಿ ಅಹ್ಮದಿಯರ ಸಂಖ್ಯೆ 450 ರಷ್ಟಿದೆ. 1984 ರಲ್ಲಿ ಇಲ್ಲಿ ಮೊದಲಿಗೆ ಅಹ್ಮದಿಯರು ವಾಸಿಸಲು ಪ್ರಾರಂಭಿಸಿದರು. 1990 ರಲ್ಲಿ ಒಂದು ಸಣ್ಣ ಮನೆಯನ್ನು ಬಾಡಿಗೆಗೆ ಪಡೆದು ನಮಾಝ್ ಕೇಂದ್ರವಾಗಿ ಬಳಸಲು ಪ್ರಾರಂಭಿಸಿದರು. ಫುಲ್ಡಾ ನಗರದಲ್ಲಿ ಪ್ರಾರಂಭದಿಂದಲೇ Inter Religious Dialogue (ಸರ್ವಧರ್ಮ ಸಂವಾದ) ಗಳನ್ನು ಏರ್ಪಡಿಸಲಾಗಿತ್ತು ಹಾಗೂ ಪ್ರಚಾರ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು.

ಫುಲ್ಡಾ ನಗರವನ್ನು Hessen ರಾಜ್ಯದ ಸುಪ್ರಸಿದ್ಧ ನಗರಗಳಲ್ಲಿ ಒಂದಾಗಿ ಪರಿಗಣಿಸಲಾಗುತ್ತದೆ. ಇದರ ಉದ್ಭವ Stone Age (ಶಿಲಾಯುಗ) ದಲ್ಲಿ ಆಗಿತ್ತು ಎಂಬ ವರದಿಯಿದೆ. ಈ ನಗರದಲ್ಲಿ 7 ಲಕ್ಷ ಜನರು ವಾಸವಾಗಿದ್ದಾರೆ ಈ ನಗರವು Closter ನಿಂದಾಗಿ ವಿಶೇಷವಾದ ಪ್ರಸಿದ್ಧಿಗೆ ಕಾರಣವಾಗಿದೆ. ಅದು 744 ಇಸವಿಯಲ್ಲಿ ನಿರ್ಮಾಣವಾಗಿತ್ತು. ಅದನ್ನು Saint Boniface ನಿರ್ಮಿಸಿದ್ದಾರೆ. ಅವರು ಕ್ರೈಸ್ತ ಧರ್ಮವನ್ನು ಜರ್ಮನಿಯಲ್ಲಿ ಪ್ರಚಾರಗೊಳಿಸಲು ಇದನ್ನು ಸ್ಥಾಪಿಸಿದರು. ಅದೇ ರೀತಿ ಈ ನಗರವು ತನ್ನ ವಸ್ತು ಸಂಗ್ರಹಾಲಯ (Museums) ಗಳಿಂದ ಪ್ರಸಿದ್ಧಿ ಪಡೆದಿದೆ. ಅಲ್ಲದೆ ನಗರದಲ್ಲಿ ಹಲವು ಶೈಕ್ಷಣಿಕ ಸಂಸ್ಥೆಗಳೂ ಸ್ಥಾಪನೆಗೊಂಡಿವೆ. ಅವು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿವೆ.

ಅಮೀರ್ ಸಾಹಿಬ್ ಹೊಸ ಮಸೀದಿಯ ಕುರಿತು ವಿವರಿಸಿದರು. 2009 ರಿಂದಲೇ ಮಸೀದಿಯ ಜಾಗಕ್ಕಾಗಿ ಹುಡುಕಾಟ ಪ್ರಾರಂಭವಾಗಿತ್ತು. ಅಂತಿಮವಾಗಿ 2013 ರಲ್ಲಿ ಈ ಸ್ಥಳ ಲಭ್ಯವಾಗಿತ್ತು. ನಿರ್ಮಾಣ ಕಾರ್ಯವು ಡಿಸೆಂಬರ್ 2016 ರಂದು ಪ್ರಾರಂಭವಾಯಿತು. 26 ಜೂನ್ 2013 ರಂದು ಹುಝೂರ್ ಬೈತುಲ್ ಹಮೀದ್‌ಗೆ ಅಡಿಪಾಯ ಹಾಕಿದರು. ಮಸೀದಿ ನಿರ್ಮಾಣ ಕಾರ್ಯಕ್ಕಾಗಿ ಒಟ್ಟು 1.6 ಮಿಲಿಯನ್ ಯೂರೋ ಖರ್ಚಾಯಿತು. ಅದರ ಬಹುಭಾಗ ಖರ್ಚನ್ನು ಫುಲ್ಡಾ ಜಮಾಅತಿನವರೇ ನಿರ್ವಹಿಸಿರುತ್ತಾರೆ. ಕೊನೆಯಲ್ಲಿ ಅಮೀರ್ ಸಾಹೇಬರು ಈ ಸಮಾರಂಭದಲ್ಲಿ ಭಾಗವಹಿಸಿದ ಎಲ್ಲಾ ಅತಿಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಅನಂತರ Sara Kautzsch ಸಾಹಿಬರು ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರು Luthur church Fulda ಚೇರ್‌ಮ್ಯಾನ್ ಆಗಿರುತ್ತಾರೆ. ಅವರು ಎಲ್ಲರಿಗೂ ಸ್ವಾಗತ ಕೋರಿದರು ಮತ್ತು ಸಲಾಂ ಪ್ರಸ್ತುತಪಡಿಸಿದರು. Luther church ಸಮೀಪವೇ ಮಸೀದಿ ಆದ ಕಾರಣ ತನ್ನ ಸಂತೋಷವನ್ನು ವ್ಯಕ್ತಪಡಿಸಿದರು. ಆ ನೆಲೆಯಲ್ಲಿ ಈ ಕ್ಷೇತ್ರದಲ್ಲಿರುವ ಎಲ್ಲರ ಸಮಸ್ಯೆಗಳನ್ನು ನೋಡಿಕೊಳ್ಳುವುದು ನನ್ನ ಜವಾಬ್ದಾರಿಯಾಗಿರುತ್ತದೆ ಎಂದರು. ಆದುದರಿಂದ ನಮಗೆ ಪರಸ್ಪರ ಹೊಂದಿಕೊಂಡು ಕೆಲಸ ಮಾಡುವುದು ಅನಿವಾರ್ಯವಾಗುತ್ತದೆ. ಎಲ್ಲರಿಗೂ ಅಲ್ಲಾಹನ ಸಾನಿಧ್ಯ ದೊರೆಯುವಂತೆ ಮಾಡಬೇಕು. ಏಕೆಂದರೆ ನಾವೆಲ್ಲರೂ ಅಲ್ಲಾಹನ ಮೇಲೆ ವಿಶ್ವಾಸ ಹೊಂದಿದವರಾಗಿದ್ದೇವೆ ಮತ್ತು ಅವನ ಆರಾಧನೆ ಮಾಡುವವರಾಗಿದ್ದೇವೆ. ಆ ಮೂಲಕ ಶಾಂತಿ ಸ್ಥಾಪನೆ ಸಾಧ್ಯವಾಗಬಹುದಾಗಿದೆ ಎಂದರು.

ಅನಂತರ ಅವರು ಕ್ರೈಸ್ತ ಸಂಘಟನೆಗಳಿಂದಲೂ ಸಲಾಂ ಮತ್ತು ಶುಭಾಶಯಗಳನ್ನು ಪ್ರಸ್ತುತಪಡಿಸಿದರು. ಈ ಮಸೀದಿಯ ಸ್ಥಾಪನೆಯಿಂದಾಗಿ ಶಾಂತಿ ಸ್ಥಾಪನೆಯ ಉದ್ದೇಶ ಇನ್ನು ಹೆಚ್ಚು ಪರಿಣಾಮಕಾರಿಯಾಗಲಿ ಎಂದು ಆಶಿಸಿದರು. ಕೊನೆಯಲ್ಲಿ ಅವರು ಈ ಮಸೀದಿಯನ್ನು ಪರಿಪೂರ್ಣಗೊಳಿಸಿದ್ದಕ್ಕೆ ಮತ್ತೊಮ್ಮೆ ಶುಭಾಶಯಗಳನ್ನು ಪ್ರಸ್ತುತಪಡಿಸಿದರು ಮತ್ತು ಸಂದರ್ಭೋಚಿತವಾಗಿ ಹುಝೂರರಿಗೆ ಒಂದು ಪಾರಿತೋಷಕವನ್ನೂ ನೀಡಿದರು.

ಅನಂತರ Kurt Albnecht ಸಾಹಿಬ್ ತನ್ನ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರು Roundtable of Religions Fulda ದ Chairman ಆಗಿದ್ದಾರೆ. ಅವರು ಮೊಟ್ಟ ಮೊದಲು ಎಲ್ಲ ಸಭಿಕರಿಗೆ ಶುಭಾಗಮನವನ್ನು ಕೋರುತ್ತಾ ಸಭೆಯನ್ನುದ್ದೇಶಿಸಿ ಮಾತನಾಡುವ ಅವಕಾಶ ದೊರೆತದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ಫುಲ್ಡಾದಲ್ಲಿ ನೂರಕ್ಕಿಂತ ಹೆಚ್ಚಿನ ದೇಶಗಳ ಜನರು ಒಟ್ಟಾಗಿ ವಾಸಿಸುತ್ತಾರೆ. ಅವರು ವಿವಿಧ ಧರ್ಮಗಳನ್ನು ಅನುಸರಿಸುವವರಾಗಿದ್ದಾರೆ. ಆದುದರಿಂದ ಎಲ್ಲರನ್ನೂ ಒಗ್ಗೂಡಿಸುವಂತಹ ಒಂದು ಸಂಸ್ಥೆಯ ಅಗತ್ಯವಿದೆ ಎಂದು ಹೇಳಿದರು.

ಮುಂದುವರಿಸುತ್ತಾ Roundtable of Religions Fulda ದ ಉದ್ದೇಶವೂ ಇದೇ ಆಗಿದೆ ಎಂದರು. ವಿವಿಧ ಧರ್ಮಸಂಸ್ಥೆಗಳು ಪರಸ್ಪರ ಒಂದಾಗಿ ಸ್ನೇಹಭಾವದಿಂದ ಜೀವಿಸಬೇಕು. ಅನಂತರ ಅವರು ತಮ್ಮ ಸಂಸ್ಥೆಯನ್ನು ಪರಿಚಯಿಸುತ್ತಾ ಹೇಳಿದರು – ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪ್ರಾರಂಭದಿಂದಲೇ ಈ ಸಂಸ್ಥೆಯೊಂದಿಗೆ ಸಹಕರಿಸುತ್ತಿದೆ. ಎಲ್ಲಾ ಧರ್ಮ ಮತ್ತು ಪಂಥಗಳ ಜನರು ಒಟ್ಟು ಸೇರುತ್ತಾರೆ. ಪರಸ್ಪರ ಸಮಾನತೆಯ ಮಾತುಗಳನ್ನಾಡುತ್ತಾರೆ. ನಮ್ಮಲ್ಲಿ ಸಹಮತ ಹೊಂದುವ ಮಾತುಗಳಿಗೆ ಹೆಚ್ಚಿನ ಒತ್ತು ಕೊಡಬಹುದಾಗಿದೆ. ಮಾನವ ಮೌಲ್ಯಗಳನ್ನು ವಿಶೇಷವಾಗಿ ಗೌರವಿಸಬೇಕಾಗಿದೆ. ಆಗ ಮಾತ್ರ ಎಲ್ಲರೂ ಪರಸ್ಪರ ಪ್ರೀತಿ ಮತ್ತು ಶಾಂತಿಯಿಂದ ಇರಲು ಸಾಧ್ಯವಾಗುತ್ತದೆ. ಕೊನೆಯಲ್ಲಿ ಅವರು ಹೇಳಿದರು: ಇಂದು ನಿಮ್ಮೆಲ್ಲರಿಗೆ ಒಂದು ಅತ್ಯಂತ ಮುಖ್ಯವಾದ ದಿನವಾಗಿದೆ. ಏಕೆಂದರೆ ನಿಮಗೆ ಒಂದು ಕೇಂದ್ರ ದೊರೆತಿದೆ. ಆ ಮೂಲಕ ನಿಮ್ಮ ಎಲ್ಲ ಚಟುವಟಿಕೆಗಳನ್ನು ನೆರವೇರಿಸಿಕೊಳ್ಳಬಹುದಾಗಿದೆ.

**ಹುಝೂರ್ (ಅಬಿಅ) ರವರ ಸಂಬೋಧನೆ**

ಸಂಜೆ 6 ಗಂಟೆ 25 ನಿಮಿಷಕ್ಕೆ ಹುಝೂರ್(ಅಬಿಅ) ಆದರಣೀಯ ಅತಿಥಿಗಳನ್ನುದ್ದೇಶಿಸಿ ಮಾತನಾಡಿದರು. ಅವರ ಮೇಲೆ ಅಲ್ಲಾಹನ ದಯೆ ಹಾಗೂ ಶಾಂತಿಗಾಗಿ ಪ್ರಾರ್ಥಿಸುತ್ತಾ, ಅವರು ಮಸೀದಿಯ ಸಮಾರಂಭದಲ್ಲಿ ಭಾಗವಹಿಸಲು ಬಂದುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಇದು ಅಹ್ಮದಿಯಾ ಜಮಾಅತಿಗೆ ಖಂಡಿತವಾಗಿಯೂ ಒಂದು ಸಂತೋಷದ ದಿನವಾಗಿದೆ. ವಿಶೇಷವಾಗಿ ಫುಲ್ಡಾ ಜನರನ್ನು ಅಲ್ಲಾಹನು ಒಂದುಗೂಡಲು ಮತ್ತು ಒಂದೇ ಸ್ಥಳದಲ್ಲಿ ನಮಾಝ್ ನಿರ್ವಹಿಸಲು ಒಂದು ವೇದಿಕೆಯನ್ನು ನೀಡಿದ್ದಾನೆ. ಈಗ ಅವರು ತಮ್ಮ ಪದ್ಧತಿಯಂತೆ ಐದು ಹೊತ್ತು ನಮಾಝ್ ಮಾಡಲು

ಸಾಧ್ಯವಾಗಿದೆ. ಈ ಮಸೀದಿಯ ನಿರ್ಮಾಣ ಕಾರ್ಯ ಪೂರ್ಣಗೊಳಿಸುವುದರಲ್ಲಿ ಇಲ್ಲಿಯ ಜನರು ಬಹಳಷ್ಟು ಸಹಕಾರ ನೀಡಿದ್ದಾರೆ. ಅದಕ್ಕಾಗಿ ನಾನು ಈ ನಗರದ ಜನರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನೀವು ಇಲ್ಲಿ ಮಸೀದಿ ನಿರ್ಮಿಸಲು ತುಂಬು ಹೃದಯದಿಂದ ಅನುಮತಿಯನ್ನು ನೀಡಿರುತ್ತೀರಿ ಎಂದರು. ಮಸೀದಿಯ ನಿರ್ಮಾಣ ಕಾರ್ಯದಲ್ಲಿ ಸಹಕರಿಸಿದ ಮೇಯರ್‌ರವರಿಗೂ ಕೌನ್ಸಿಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು. ಬಂದವರಲ್ಲಿ ಹೆಚ್ಚಿನವರು ಅಹ್ಮದಿಯರಲ್ಲ, ಮುಸ್ಲಿಮರೂ ಅಲ್ಲ, ಪ್ರಾಯಶಃ ಅಹ್ಮದಿ ಮುಸಲ್ಮಾನರಲ್ಲದೆ ಒಂದೆರಡು ಅಹ್ಮದಿಯೇತರ ಮುಸ್ಲಿಮರೂ ಇರಬಹುದು. ಇಂದಿನ ಸಮಾರಂಭದಲ್ಲಿ ನಿಮ್ಮೆಲ್ಲರ ಭಾಗವಹಿಸುವಿಕೆ ನಿಮ್ಮ ಹೃದಯ ವೈಶಾಲ್ಯತೆಯನ್ನು ತೋರಿಸುತ್ತದೆ. ಅಂತಹ ಹೃದಯ ವೈಶಾಲ್ಯತೆ ಈ ನಗರದ ಇತಿಹಾಸದಿಂದ ತಿಳಿದು ಬರುತ್ತದೆ.

ಕ್ರೈಸ್ತರು ಪುರಾತನ ಕಾಲದಿಂದಲೂ ಇಲ್ಲಿಯ ನಿವಾಸಿಗಳಾಗಿದ್ದಾರೆ. ಹಾಗಾಗಿ ಒಂದು ಐತಿಹಾಸಿಕ ಮಾನ್ಯತೆ ಅವರಿಗೆ ದೊರೆಯುತ್ತದೆ. ಇಲ್ಲಿ ಮಸೀದಿಯ ನಿರ್ಮಾಣವು ನಿಶ್ಚಯವಾಗಿಯೂ ಇಲ್ಲಿಯ ಕ್ರೈಸ್ತ ಬಾಂಧವರ ಹೃದಯ ವೈಶಾಲ್ಯತೆಗೆ ಹಿಡಿದ ಕನ್ನಡಿಯಾಗಿದೆ. ಇದರಿಂದ ತಿಳಿದುಬರುವುದೇನೆಂದರೆ ನೀವೆಲ್ಲರೂ ಎಲ್ಲ ಧರ್ಮಿಯರೊಂದಿಗೆ ಒಟ್ಟುಗೂಡಿ ಇರಬಯಸುತ್ತೀರಿ ಎಂಬುದು. Roundtable ನ ಪ್ರತಿನಿಧಿಯಾಗಿದ್ದವರೊಬ್ಬರು ತಮ್ಮ ಭಾಷಣದಲ್ಲಿ – ಇಲ್ಲಿ ನೂರಕ್ಕಿಂತ ಹೆಚ್ಚು ವಿವಿಧ ದೇಶಗಳ, ಧರ್ಮಗಳ ಜನರು ವಾಸಿಸುತ್ತಿದ್ದಾರೆ ಎಂದು ಹೇಳಿದರು. ಇವರೆಲ್ಲರ ಆಗಮನ, ಇಲ್ಲಿಯ ಕ್ರೈಸ್ತರ ಹೃದಯವಂತಿಕೆಯ ದ್ಯೋತಕವಾಗಿದೆ. ಅದಕ್ಕಾಗಿ ನಾನು ಮತ್ತೊಮ್ಮೆ ನಿಮ್ಮನ್ನು ಅಭಿನಂದಿಸುತ್ತೇನೆ ಎಂದರು.

ಮುಂದುವರಿಸುತ್ತಾ ಹೇಳಿದರು. ಈ ಕಾಲದಲ್ಲಿ ಮಾಧ್ಯಮಗಳ ಪತ್ರಿಕೆಗಳ, T.V. Internet, Transport ಇತ್ಯಾದಿ ಸವಲತ್ತುಗಳ ದೆಸೆಯಿಂದ, ಇಡೀ ಲೋಕವೇ ಒಂದಾಗಿದೆ. ಈ ಹಿಂದೆ ಅಂದರೆ ಸುಮಾರು 100 ವರ್ಷಗಳ ಹಿಂದೆ, ತಿಂಗಳುಗಳೇ ಹಿಡಿಯುವಂತಹ ಪ್ರಯಾಣ ಈಗ ಕೆಲವೇ ಗಂಟೆಗಳಲ್ಲಿ ಸಾಧ್ಯವಾಗಿದೆ. ಆ ದೆಸೆಯಿಂದಾಗಿ ನಾವೆಲ್ಲಾ ಒಂದಾಗಿದ್ದೇವೆ. ಈ ಲೋಕದ ಪ್ರಗತಿಯು ನಮ್ಮನ್ನೆಲ್ಲಾ ಒಟ್ಟುಗೂಡಿಸುತ್ತಿದೆ. ನಾವೆಲ್ಲಾ ಒಂದಾಗಿ ಅದರ ಪ್ರಯೋಜನವನ್ನು ಪಡೆದಾಗ ಮಾತ್ರ ಈ ಪ್ರಗತಿ ಸಾರ್ಥಕವಾಗುತ್ತದೆ. ಪರಸ್ಪರ ಹೆದರಿಕೆ ಆತಂಕ ಒಡ್ಡುವ ಬದಲಿಗೆ ಒಬ್ಬರು ಇನ್ನೊಬ್ಬರ ಹಿತವನ್ನು ಬಯಸಿ ಜೀವಿಸಬೇಕಾಗಿದೆ. ಇದು ಪ್ರತಿಯೊಂದು ವರ್ಗದ ಕೆಲಸವಾಗಿದೆ. ಅವರು ಕ್ರೈಸ್ತರಾಗಿರಲಿ, ಮುಸ್ಲಿಮರಾಗಿರಲಿ, ಯಹೂದಿಯಾಗಿರಲಿ, ಹಿಂದೂವಾಗಿರಲಿ ಅಥವಾ ಯಾರೊಬ್ಬರೇ ಆಗಿರಲಿ. ನಾವು ಇನ್ನೊಬ್ಬರಿಗೋಸ್ಕರ ಒಳ್ಳೆಯ ಭಾವನೆಗಳನ್ನು ಹೃದಯದಲ್ಲಿ ಸ್ಥಾಪಿಸಬೇಕು. ಆ ಮೂಲಕ ಈ ಕಾಲದಲ್ಲಿ ಲೋಕವು ಒಂದು Global village ಆಗಿ ಪ್ರಗತಿ ಸಾಧಿಸಬಹುದಾಗಿದೆ.

ಹುಝೂರ್(ಅಬಿಅ) ಹೇಳಿದರು – ಇಲ್ಲಿ ಒಂದು ವಸ್ತು ಸಂಗ್ರಹಾಲಯವೂ ಇದೆ ಎಂದು ನಮ್ಮ National ಅಮೀರ್ ಸಾಹೇಬರು ಹೇಳಿದ್ದಾರೆ. ನಿಶ್ಚಯವಾಗಿಯೂ ಅಲ್ಲಿ ಪುರಾತನ ವಸ್ತುಗಳಿರಬಹುದು. ಪುರಾತನ ವಸ್ತುಗಳನ್ನು ಸಂಗ್ರಹಿಸಿರುವುದು ಒಂದು ಒಳ್ಳೆಯ ಗುಣವಾಗಿದೆ. ಅಂತಹ ವಸ್ತುಗಳಿಂದ ನಾವು ಒಳ್ಳೆಯ ಪಾಠವನ್ನು ಗ್ರಹಿಸಿಕೊಂಡಾಗ ಮಾತ್ರ ಅದರ ಸದುಪಯೊಗ ಪಡೆಯುವಂತಾಗುತ್ತದೆ. ಕೆಲವು ವಸ್ತುಗಳು ಗತಕಾಲದಲ್ಲಿ ಆದ ಹಾನಿಯನ್ನು ಸೂಚಿಸುವಂತಿರುತ್ತವೆ. ಅದರಿಂದ ನಾವು ಹೇಗೆ ಸಂರಕ್ಷಿಸಿಕೊಳ್ಳಬಹುದೆಂಬ ಪಾಠವನ್ನು ಕಲಿಯಬಹುದಾಗಿದೆ. ಆ ವಸ್ತುಸಂಗ್ರಹಾಲಯದಲ್ಲಿ ಏನೇನಿದೆ ಎಂಬ ವಿವರವಂತೂ ನನಗೆ ಗೊತ್ತಿಲ್ಲ. ಆದರೆ ಸಾಮಾನ್ಯವಾಗಿ ವಸ್ತುಸಂಗ್ರಹಾಲಯಗಳಲ್ಲಿ ವಿವಿಧ ರೀತಿಯ ವಸ್ತುಗಳನ್ನು ಸಂಗ್ರಹಿಸಿರುತ್ತಾರೆ. ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲ್ಪಟ್ಟ ಈ ವಸ್ತುಗಳು ನಮಗೆ ಒಂದೆಡೆ ಅದರ ಇತಿಹಾಸವನ್ನು ಸೂಚಿಸುವುದಾದರೆ ಇನ್ನೊಂದೆಡೆ ನಮಗೆ ಭವಿಷ್ಯದ ಹೊಸ ಮಾರ್ಗಗಳನ್ನು ಸೂಚಿಸುವಂತಿರುತ್ತದೆ. ಆದುದರಿಂದ ನಾನು ಭಾವಿಸುವುದೇನೆಂದರೆ ಇಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿ ಅವನು ಮುಸ್ಲಿಮನಾಗಲಿ, ಕ್ರೈಸ್ತನಾಗಲಿ ಅಥವಾ ಯಾವುದೇ ಧರ್ಮಕ್ಕೆ ಸೇರಿದವನಾಗಲಿ ಅಥವಾ ನಾಸ್ತಿಕನಾಗಲಿ ಅವನು ವಸ್ತುಸಂಗ್ರಹಾಲಯದಿಂದ ಪ್ರಯೋಜನ ಪಡೆಯಬಹುದಾಗಿದೆ.

ಇನ್ನೊಂದು ತಿಳಿದುಬಂದ ವಿಷಯವೆಂದರೆ ಇಲ್ಲಿ ಶೈಕ್ಷಣಿಕ ಅವಕಾಶಗಳು ಹೇರಳವಾಗಿವೆ. ಶಿಕ್ಷಣದ ಕಡೆ ಇಲ್ಲಿಯ ಜನರ ಒಲವು ಹೊಂದಿದವರಾಗಿದ್ದಾರೆ. ಹೃದಯವಂತಿಕೆ ಉಂಟು ಮಾಡುವ ಶಿಕ್ಷಣವೇ ವಾಸ್ತವ ಶಿಕ್ಷಣವಾಗಿದೆ. ಅದರಿಂದ ಮಿದುಳು ಪ್ರಕಾಶಮಯವಾಗುತ್ತದೆ. ಮನುಷ್ಯನು ಶೌರ್ಯವಂತನಾಗುತ್ತಾನೆ. ಒಬ್ಬರು ಇನ್ನೊಬ್ಬರ ಭಾವನೆಗಳನ್ನು ಗೌರವಿಸುವ ಸಂವೇದನೆಗಳು ಜನ್ಮ ತಾಳುತ್ತವೆ. ಆಗ ಮಾತ್ರ ಶಿಕ್ಷಣವು ಫಲಪ್ರದವಾಗುತ್ತದೆ. ಹೃದಯ ವೈಶಾಲ್ಯತೆ ಇಲ್ಲದಿದ್ದರೆ, ಒಬ್ಬರು ಇನ್ನೊಬ್ಬರ ಭಾವನೆಗಳನ್ನು ತಿಳಿಯುವ ಪ್ರಯತ್ನ ಮಾಡದಿದ್ದರೆ, ಒಬ್ಬರು ಇನ್ನೊಬ್ಬರ ಸಮಾರಂಭಗಳಲ್ಲಿ ಸಂತಸದಿಂದ ಭಾಗವಹಿಸುವ ವ್ಯವದಾನವಿಲ್ಲದಿದ್ದರೆ ಶಿಕ್ಷಣವು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಆ ನೆಲೆಯಲ್ಲಿ ಇಲ್ಲಿಯ ಪರಿಸ್ಥಿತಿಯನ್ನು ಕಂಡು ನನಗೆ ತುಂಬ ಸಂತೋಷವಾಗುತ್ತಿದೆ. ಈ ಧಾರ್ಮಿಕ ಸಮಾರಂಭದಲ್ಲಿ ನಮ್ಮ ಧರ್ಮಕ್ಕೆ ಸಂಬಂಧವಿಲ್ಲದ ಇತರ ಜನರೂ ಬಂದು ಸೇರಿದ್ದಾರೆ. ಇಲ್ಲಿ ವಾಸಿಸುವ ಕ್ರೈಸ್ತರಿಂದ ಪ್ರದರ್ಶಿಸಲ್ಪಡುತ್ತಿರುವ ಇಂತಹ ಹೃದಯವಂತಿಕೆ, ಇಲ್ಲಿಯ ಮುಸ್ಲಿಮರಿಂದಲೂ, ವಿಶೇಷವಾಗಿ ಅಹ್ಮದಿ ಮುಸ್ಲಿಮರಿಂದಲೂ ಪ್ರದರ್ಶಿಸಲ್ಪಡಲಿ ಎಂದು ಅವರು ಆಶಿಸಿದರು.

ಮುಂದುರಿಸುತ್ತಾ ಹುಝೂರ್(ಅಬಿಅ) – ಲೂಥರ್ ಚರ್ಚಿನ ಪ್ರತಿನಿಧಿ ಸಾರಾ ಸಾಹಿಬ ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ ಎಂದರು. ಅಲ್ಲಾಹನ ಆರಾಧನೆಯು ಒಂದೇ ರೀತಿಯ ವಿಷಯವಾಗಿದೆ. ಅದರೆಡೆ ನಾವು ಗಮನವಹಿಸಬೇಕಾಗಿದೆ. ಅಲ್ಲಾಹನ ಆರಾಧನೆಯ ಜೊತೆಯಲ್ಲಿ ನಮಗೆ ಶಾಂತಿಯ ಸಂದೇಶವೂ ದೊರೆಯುತ್ತದೆ. ನಿಜವಾಗಿಯೂ ಅಲ್ಲಾಹನ ಆರಾಧನೆ ಮಾಡುವವರೇ ಶಾಂತಿ ಬಯಸುವವರಾಗಿರುತ್ತಾರೆ. ಇದು ಮಾನವ ಮೌಲ್ಯಗಳನ್ನು ಸ್ಥಾಪಿಸುತ್ತದೆ.

ಮದೀನದಲ್ಲಿ ಇಸ್ಲಾಮ್ ಧರ್ಮದ ಸ್ಥಾಪಕರಾದ ಮುಹಮ್ಮದ್ ಮುಸ್ತಫ(ಸ) ರವರ ಕಾಲದಲ್ಲಿ ನಜ್ರಾನ್‌ನಿಂದ ಒಂದು ಕ್ರೈಸ್ತ ಸಮೂಹ ಭೇಟಿ ಮಾಡಲು ಬಂದಿದ್ದರು. ಮಾತುಕತೆ ನಡೆಯುತ್ತಿರುವಾಗ ಅವರ ಆರಾಧನೆಯ ಸಮಯ ಬಂತು. ಅವರು ಆರಾಧನೆಯ ಕುರಿತು ಚಿಂತಿತರಾದರು. ಆಗ ಹಝ್ರತ್ ಮುಹಮ್ಮದ್(ಸ) ರವರು ಅವರ ವ್ಯಾಕುಲತೆಯನ್ನು ನೋಡಿ ಅದರ ಕಾರಣ ವಿಚಾರಿಸಿದರು. ಅವರಿಗೆ ಆರಾಧನೆಯ ಸಮಯ ಬಂದಿದೆ. ಅವರು ಅದಕ್ಕಾಗಿ ಸ್ಥಳವನ್ನು ಹುಡುಕುತ್ತಿದ್ದಾರೆ ಎಂದು ರಸೂಲುಲ್ಲಾಹ್(ಸ) ಅವರಿಗೆ ಆಗ ತಿಳಿಯಿತು. ನೀವು ಅದಕ್ಕಾಗಿ ಚಿಂತಿಸಬೇಡಿರಿ. ಈ ಮಸೀದಿಯೂ ಅಲ್ಲಾಹನ ಆರಾಧನೆಗೋಸ್ಕರವೇ ನಿರ್ಮಿಸಲ್ಪಟ್ಟಿದೆ. ನೀವು ಇಲ್ಲಿ ನಿಮ್ಮ ಇಷ್ಟ ಪ್ರಕಾರ ಆರಾಧನೆ ಮಾಡಿಕೊಳ್ಳಬಹುದಾಗಿದೆ ಹಾಗೂ ಅದರಿಂದ ಪರಸ್ಪರ ಶಾಂತಿ ವಿಶ್ವಾಸಗಳನ್ನು ಸುಧಾರಿಸಿಕೊಳ್ಳಬಹುದಾಗಿದೆ ಎಂದರು.

ಇಸ್ಲಾಮಿನ ಶಿಕ್ಷಣ ಇದೇ ಆಗಿದೆ ಎಂದು ಹುಝೂರ್ ಹೇಳಿದರು. ಇಂದು ಇಸ್ಲಾಮ್ ಮತ್ತು ಮುಸಲ್ಮಾನರ ಹೆಸರು ಕೆಡಲು ಕಾರಣವೇನೆಂದರೆ ಅವರು ಶಾಂತಿಯನ್ನು ಭಂಗ ಮಾಡುತ್ತಿದ್ದಾರೆ. ಇಸ್ಲಾಮ್ ಪದದ ಅರ್ಥವೇ ಶಾಂತಿ ಎಂದಾಗಿದೆ. ಇಸ್ಲಾಮ್ ಧರ್ಮದ ಸ್ಥಾಪಕರಾದ ಮುಹಮ್ಮದ್ ಮುಸ್ತಫ(ಸ) ಹೇಳಿದ್ದಾರೆ– ಯಾರ ಕೈಗಳಿಂದ ಮತ್ತು ನಾಲಿಗೆಯಿಂದ ಇತರರು ಸುರಕ್ಷಿತವಾಗಿರುವರೋ ಅವರೇ ನಿಜವಾದ ಮುಸಲ್ಮಾನರಾಗಿದ್ದಾರೆ ಎಂದು.

ಆದ್ದರಿಂದ ಶಾಂತಿ ಬಯಸುವುದೇ ಯಥಾರ್ಥ ಇಸ್ಲಾಮ್ ಆಗಿರುತ್ತದೆ. ಯಾರದೇ ಶಾಂತಿಗೆ ಭಂಗ ಮಾಡದಿರುವವನೇ ಶಾಂತಿಪ್ರಿಯ ನಾಗರಿಕ ಎನಿಸಿಕೊಳ್ಳುತ್ತಾನೆ. ಅವರ ಜೊತೆ ನೀವು ಶಾಂತಿಯಿಂದಿರಿ. ಲೋಪವೇನಾದರೂ ಕಂಡರೆ ಕಾನೂನನ್ನು ಕೈಗೆತ್ತಿಕೊಳ್ಳಬಾರದು. ಇಂದಿನ ಕೆಲವು ಉಗ್ರವಾದಿ ಗುಂಪುಗಳು ಇದನ್ನೇ ಮಾಡುತ್ತಿವೆ. ಇದು ಇಸ್ಲಾಮಿನ ಶಿಕ್ಷಣಕ್ಕೆ ವಿರುದ್ಧವಾಗಿದೆ. ಶಾಂತಿಯನ್ನು ಭಂಗ ಮಾಡದಿರುವುದೇ ನಿಜವಾದ ಇಸ್ಲಾಮಿನ ಶಿಕ್ಷಣವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದ್ದಾನೆ. ಒಬ್ಬ ಮನುಷ್ಯನ ಹತ್ಯೆಯು ಎಲ್ಲಾ ಮಾನವ ಕುಲದ ಹತ್ಯೆಯಾಗಿದೆ ಮತ್ತು ಒಬ್ಬ ಮನುಷ್ಯನ ಜೀವ ಉಳಿಸುವುದು ಎಲ್ಲ ಮಾನವ ಕುಲದ ಜೀವ ಉಳಿಸಿದಂತಾಗುವುದು. ಈ ಶಿಕ್ಷಣವೇ ನಿಜವಾದ ಧಾರ್ಮಿಕ ಶಿಕ್ಷಣವಾಗಿದೆ ಮತ್ತು ಇದುವೇ ಇಸ್ಲಾಮಿನ ಶಿಕ್ಷಣವಾಗಿದೆ. ಇದೆಲ್ಲಾ ಪವಿತ್ರ ಖುರ್‌ಆನಿನಲ್ಲಿ ಒಳಗೊಂಡಿರುತ್ತದೆ. ನಿಜವಾದ ಇಸ್ಲಾಮಿಕ ಶಿಕ್ಷಣವು ಶಾಂತಿ, ಪ್ರೀತಿ ನೆಮ್ಮದಿ ಹೊರತು ಬೇರೇನೂ ಇಲ್ಲ. ಇದೇ ನಮ್ಮ ಧ್ಯೇಯವಾಗಿದೆ. ಈ ಮೂಲಕವೇ ಅಹ್ಮದಿಯಾ ಜಮಾಅತ್ ಲೋಕಕ್ಕೆ ಇಸ್ಲಾಮಿನ ನೈಜ ರೂಪವನ್ನು ಪ್ರದರ್ಶಿಸುತ್ತಿದೆ.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**


**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 04 June 2020 Issue No. 21

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 20ರ ವರದಿಯ ಉಳಿದ ಭಾಗ)**

### ನಮಾಝೆ ಜನಾಝಾ ಗಾಯಿಬ್

**1) ಮುಕರ್ರಮ್ ಅಬ್ದುಲ್ ಹಫೀಝು ಕಾನ್ ಸಾಹಿಬ್**

90 ವರ್ಷ ವಯಸ್ಸಿನಲ್ಲಿ ಅಕ್ಟೋಬರ್ 16 ರಂದು ರಬ್ವಾದಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತರು ಮುಕರ್ರಮ್ ಅಬ್ದುಲ್ ಕರೀಮ್ ಸಾಹಿಬ್‌ರವರ ಪುತ್ರರಾಗಿದ್ದರು. ಮುಕರ್ರಮ್ ಅಬ್ದುಲ್ ಸತ್ತಾರ್ ಸಾಹಿಬ್ ಸಂಘಟನಾ ಮುಬಲ್ಲಿಗ್ ಹಿರಿಯ ಸಹೋದರರಾಗಿದ್ದರು. ಮತ್ತು ಮುಕರ್ರಮ್ ಹಾಫಿಝ್ ಮುಝಫರ್ ಅಹ್ಮದ್ ಸಾಹಿಬ್‌ರವರ ಮಾಮಾ (ಸಹೋದರ ಮಾವ) ಆಗಿದ್ದರು. ದಿವಂಗತರು ಒಂದು ವರ್ಷ ಸದರ್ ಅಂಜುಮನ್ ಅಹ್ಮದಿಯಾದಲ್ಲಿ ಮಹಾಸಿನ್ (Accountant) ನೆಲೆಯಲ್ಲಿ, ಹತ್ತು ವರ್ಷದವರೆಗೆ ತಮ್ಮ ವಲಯದಲ್ಲಿ ಸೆಕ್ರೆಟರಿ ಮಾಲ್‌ಆಗಿ ತಮ್ಮ ಸೇವೆಗಳನ್ನು ಸಲ್ಲಿಸಿದರು. ರೋಗಪೀಡಿತರಾಗುವವರೆಗೆ ಅವರು ಕ್ರಮಬದ್ಧವಾಗಿ ಮಸೀದಿಗೆ ಬಂದು ಜಮಾಅತ್ ಸಹಿತ ನಮಾಝುಗಳನ್ನು ನಿರ್ವಹಿಸುತ್ತಿದ್ದರು. ದಿವಂಗತ ಮೂಸಿಯಾಗಿದ್ದರು. ಅವರು ತಮ್ಮ ಹಿಂದೆ ಇಬ್ಬರು ಪುತ್ರರು ಮತ್ತು ಆರು ಪುತ್ರಿಯರನ್ನು ಅಗಲಿ ಹೋಗಿದ್ದಾರೆ.

**2) ಮುಕರ್ರಮ್ ಸಲೀಮಾ ಬೇಗಂ ಸಾಹಿಬ** ಗಂಡ ಮುಕರ್ರಮ್ ಮೌಲ್ವಿ ಮುಹಮ್ಮದ್ ಇಸ್ಮಾಯಿಲ್ ಅಸ್ಲಮ್ ಸಾಹಿಬ್ ವಾಕಿಫ್ ಝಿಂದಗಿ ದಿವಂಗತರು (ನಿವೃತ್ತ ತಹರೀಕ್ ಜಹೀದ್, ದಾರುಲ್ ಉಲುಮ್ ಪಶ್ಚಿಮ ಸಾದಿಖ್ ರಬ್ವಹ್)

ಆಗಸ್ಟ್ 31 ರಂದು 2019 ರಲ್ಲಿ 87 ವರ್ಷ ವಯಸ್ಸಿನಲ್ಲಿ ನಿಧನಗೊಂಡರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರು ಹಝ್ರತ್ ಮಸೀಹ್ ಮೌಊದ್(ಅ) ರವರ ಸಹಾಬಿ, ಹಝ್ರತ್ ಮೌಲ್ವಿ ಫಜ್ಲುದ್ದೀನ್ ಸಾಹಿಬ್(ರ) (ಬಾಂಗಟ್ ಊಂಚೆ, ಮಾಜಿ ಮುಬಲ್ಲಿಗರು ಹೈದ್ರಾಬಾದ್ ದಖನ್ ಹಾಗೂ ಬಿಹಾರ್) ರವರ ಪುತ್ರಿ ಆಗಿದ್ದರು. ಸೌಮ್ ವ ಸಲಾತಿನ ಪ್ರಯಾಣಿಕರಾಗಿದ್ದರು. ತಹಜ್ಜದ್ ನಿರ್ವಹಿಸುವವರಾಗಿದ್ದರು. ಅತಿಥಿ ಸತ್ಕಾರಗಳ ಗುಣ ಹೊಂದಿದ್ದರು. ನಿಷ್ಠರು ಮತ್ತು ಸಜ್ಜನ ಮಹಿಳೆಯಾಗಿದ್ದರು. ಖುರ್‌ಆನ್ ಪಠಣ ಪ್ರಾಮಾಣಿಕ ರೀತಿಯಲ್ಲಿ ನಿರ್ವಹಿಸುತ್ತಿದ್ದರು. ಅಲ್-ಫಝ್ಲ್ ಮತ್ತು ಜಮಾಅತಿನ ಗ್ರಂಥಗಳನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡುತ್ತಿದ್ದರು. ಖಿಲಾಫತ್ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಕುಟುಂಬ ಸದಸ್ಯರೊಡನೆ ಆತ್ಮೀಯಭಾವ ಹೊಂದಿದ್ದರು. 1976 ರಲ್ಲಿ ಅವರು ಮಧ್ಯಭಾಗ ರಬ್ವಾದ ದಾರುಲ್‌ಯಮನ್ ವಲಯದ ಸದರ್ ಲಜ್ನಾ ಆಗಿ ನಿಯುಕ್ತಿಗೊಂಡಿದ್ದರು. ಸುಮಾರು 15 ವರ್ಷ ಸೇವೆ ಸಲ್ಲಿಸಿದರು. ತಮ್ಮ ಮಕ್ಕಳಿಗೂ ಸಹ ಒಳ್ಳೆಯ ತರಬೇತಿ ನೀಡಿದ್ದರು. ದಿವಂಗತರು ಮೂಸಿಯೂ ಆಗಿದ್ದರು. ಅವರು ತಮ್ಮ ಹಿಂದೆ ನಾಲ್ಕು ಪುತ್ರರು, ಮೂರು ಪುತ್ರಿಯರನ್ನು ಅಗಲಿ ಹೋಗಿದ್ದಾರೆ. ಅವರ ಪುತ್ರ ಮುಕರ್ರಮ್ ನಾಸಿರ್ ಅಹ್ಮದ್ ಮಹ್ಮದ್ ಸಾಹಿಬ್ (ಆಫ್ ನಾರ್ವೆ) ಮತ್ತು ಸೊಸೆ ಅವರಿಗೆ ನುಸ್ರತ್ ಜಹಾಂ ಸ್ಕೀಮ್ ಅಡಿಯಲ್ಲಿ ಸಿರಾಲಿಯೋನಿನಲ್ಲಿ ಸೇವೆ ಸಲ್ಲಿಸುವ ಭಾಗ್ಯ ದೊರೆಯಿತು. ಎರಡನೆ ಪುತ್ರ ಮುಕರ್ರಮ್ ತಾಹಿರ್ ಅಹ್ಮದ್ ಮುಬಶರ್ ಸಾಹಿಬ್ (ಮುರಬ್ಬಿ) ಟೌನ್ ಶಿಪ್‌ನಲ್ಲಿ ಮತ್ತು ಒಬ್ಬ ಅಳಿಯ ಮುಕರ್ರಮ್ ನಿಯಮತುಲ್ಲಾಹ್ ಜಾವೀದ್ ಸಾಹಿಬ್ (ಮುರಬ್ಬಿ) ಖಸೂರಿನಲ್ಲಿ ಸೇವೆ ಸಲ್ಲಿಸುವ ಭಾಗ್ಯ ಪಡೆದರು. ಅವರ ಒಬ್ಬ ಮೊಮ್ಮಗ ಜಾಮಿಯಾ ಅಹ್ಮದಿಯದಲ್ಲಿ ಶಿಕ್ಷಣ ಪಡೆಯುತ್ತಿದ್ದಾನೆ.

**3. ಮುಕರ್ರಮ್ ಮುನವ್ವರ್ ಅಹ್ಮದ್ ಭಟ್ ಸಾಹೆಬ್‌ರವರ ಪತ್ನಿ ಮುಕರ್ರಮ ರಝಿಯಾ ಬೇಗಮ್ ಸಾಹಿಬ ರಬ್ವಾಹ್**

29 ಆಗಸ್ಟ್ 2019 ರಂದು 85 ವರ್ಷ ವಯಸ್ಸಿನಲ್ಲಿ ನಿಧನ ಗೊಂಡರು **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರು ಹಝ್ರತ್ ಮಸೀಹ್ ಮೌಊದ್(ಅ) ರವರ ಸಹಾಬಿ ಹಝ್ರತ್ ಪೀರ್ ಮುಹಮ್ಮದ್ ಸಾಹಿಬರ ಮೊಮ್ಮಗಳಾಗಿದ್ದರು. ಧಾರ್ಮಿಕತೆಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರಾಗಿದ್ದರು. ಸರ್ವರ ಭಾವನೆಗಳಿಗೆ ಸ್ಪಂಧಿಸುವವರಾಗಿದ್ದರು. ಉತ್ತಮ ನಡತೆ ಹೊಂದಿದವರು ಎಲ್ಲರ ಅಚ್ಚುಮೆಚ್ಚಿನವರಾಗಿದ್ದರು. ದಿವಂಗತರು ಮೂಸಿಯೂ ಆಗಿದ್ದರು. ಅವರು ನಾಲ್ವರು ಪುತ್ರಿಯರು, ಆರು ಪುತ್ರರು ಮತ್ತು ಹಲವು ಮೊಮ್ಮಕ್ಕಳು ಹೊಂದಿದ್ದರು. ಅವರ ಒಬ್ಬ ಮೊಮ್ಮಗ ಮುಕರ್ರಮ್ ಸಾದಿಖ್ ಅಹ್ಮದ್ ಬದ್ (ಮುರಬ್ಬಿ) ತುರ್ಕಿಯಲ್ಲಿದ್ದಾರೆ ಮತ್ತು ಇನ್ನೊಬ್ಬ ಮೊಮ್ಮಗ ಮುಕರ್ರಮ್ ಬಹಝಾದ್ ಅಹ್ಮದ್ ಸಾಹಿಬ್ (ಮುರಬ್ಬಿ) ರಬ್ವಾದಲ್ಲಿ ಸೇವೆ ಸಲ್ಲಿಸುತ್ತಿದ್ದಾಳೆ. ಇನ್ನೊರ್ವ ಮೊಮ್ಮಗ ಮುಕರ್ರಮ್ ಸಾಗರ್ ಅಹ್ಮದ್ ಬಟ್ ಸಾಹಿಬ್ ಜಾಮಿಯಾ ಅಹ್ಮದಿಯಾ ಜರ್ಮನಿಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

**4) ಮುಕರ್ರಮಾ ಝುಬೇದ ಬಿಬಿ ಸಾಹಿಬಾ (ಮುಖ್ತನಿಪುರ ಜಿಲ್ಲಾ ಕಟಕ್, ಇಂಡಿಯಾ)**

ಅವರು 28 ಮಾರ್ಚ್ 2019 ರಂದು 48 ವರ್ಷ ವಯಸ್ಸಿನಲ್ಲಿ ಅಲ್ಲಾಹನ ವಿಧಿಯನ್ವಯ ತೀರಿಹೋದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತೆ ಜನ್ಮತಃ ಅಹ್ಮದಿಯಾಗಿದ್ದರು. ಐದು ಹೊತ್ತಿನ ನಮಾಝುಗಳು ಪ್ರಮಾಣಿಕವಾಗಿ ನಿರ್ವಹಿಸುತ್ತಿದ್ದರು. ಚಂದ ಪ್ರಮಾಣಿಕವಾಗಿ ನೀಡುತ್ತಿದ್ದರು. ದಿವಂಗತೆ ಜಮಾಅತಿನ ನಿಷ್ಠೆ ಹೊಂದಿದ ಸದಸ್ಯರಾಗಿದ್ದರು.

**5) ಮುಕರ್ರಮಾ ಅಮತುರ್ ರಶೀದ್ ಬೇಗಂ ಸಾಹಿಬಾ** ಇವರು ಮುಕರ್ರಮ್ ಮೌಲ್ವಿ ಹಮೀದುಲ್ಲಾಹ್ ಖಾನ್ ಸಾಹಿಬ್ ತಾಲೀಮುಲ್ ಖುರ್‌ಆನ್ ವರ್ಗ, ಮಸ್ಜಿದ್ ಮುಬಾರಕ್ ರಬ್ವಾದ ಶಿಕ್ಷಕನ ಪತ್ನಿ ಆಗಿದ್ದರು.

ಅವರು 8 ಜೂನ್ 2019 ರಂದು 99 ವರ್ಷಗಳ ವಯಸ್ಸಿನಲ್ಲಿ ದೈವಿಕ ವಿಧಿಯನ್ವಯ ತೀರಿಕೊಂಡರು **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಹಝ್ರತ್ ಮುಸ್ಲಿಹ್ ಮೌಊದ್(ರ)ರವರ ಖಿಲಾಫತ್ ಕಾಲದಲ್ಲಿ ಅಹ್ಮದಿಯತ್ ಸೇರಿದ್ದರು. ದಿವಂಗತೆ ತನ್ನ ಒಂಭತ್ತು ಮಕ್ಕಳ ತರಬೇತಿ ಅಲ್ಲದೇ ಮನೆಯಲ್ಲಿ ಹಲವು ಬಾಲಕ ಬಾಲಕಿಯರಿಗೆ ಪವಿತ್ರ ಖುರ್‌ಆನಿನ ಶಿಕ್ಷಣ ನೀಡಿದರು. ದಿವಂಗತೆ ಮೂಸಿಯೂ ಆಗಿದ್ದರು.

ಅಲ್ಲಾಹನು ಎಲ್ಲಾ ದಿವಂಗತರಿಗೆ ಮಗ್ಫಿರತ್ ನೀಡಲಿ ಮತ್ತು ಅವರಿಗೆ ತನ್ನ ಪ್ರಿಯನ ಸಾನಿಧ್ಯ ಸಿಗುವಂತಾಗಲಿ, ಅಲ್ಲಾಹನು ಅವರ ಸಂಬಂದಿಕರಿಗೆ ಸಬ್ರ್ ಜಮೀಲ್ (ಸಹನಶಕ್ತಿ) ನೀಡುವಂತಾಗಲಿ ಮತ್ತು ಅವರ ಸದ್ಗುಣಗಳು ಚಿರಾಯುವಾಗಿರುವ ಭಾಗ್ಯ ನೀಡಲಿ. ಆಮೀನ್.

### ಆಮೀನ್ ಸಮಾರಂಭ

ಅನಂತರ ಹುಝೂರ್(ಅಬಿಅ) ಮಸೀಹ್ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಕಾರ್ಯಕ್ರಮದನ್ವಯ ಆಮೀನ್ ಸಮಾರಂಭ ಏರ್ಪಡಿಸಲಾಗಿತ್ತು. ಕೆಳಗೆ ನಮೂದಿತ 36 ಮಕ್ಕಳಿಂದ ಪವಿತ್ರ ಖುರ್‌ಆನಿನ ಒಂದೊಂದು ವಚನವನ್ನು ಆಲಿಸಿ ಕೊನೆಯಲ್ಲಿ ದುಆ ಮಾಡಿಸಿದರು.

ಅಝಿಝುಮ್ ಮುಮಿನ್ ಅಹ್ಮದ್, ದಾನಿಯಾಲ್ ರಾಜ, ಮಸ್ರೂರ್ ಅಹ್ಮದ್ ಶೇಖ್, ಆಸಿಮ್ ಖಾನ್, ಲಿಖ್ಮಾನ್ ಮುಬಶ್ಶಿರ್, ಅಬೀರ್ ಆಝುಮ್ ಬಟರ್, ಝಿಯಾನ್ ಫರಾಝ್ ನಾಝ್, ನಬೀಲ್ ಮಹ್‌ಮೂದ್, ವಜೀಹ ರಹ್ಮಾನ್, ತಲ್‌ಹ ಅಕ್ಬರ್ ಜವೈಇಹ, ಸೆಹ್ರಾಬ್ ಅಹ್ಮದ್ ಅವಾನ್, ಹಸೀಬ್ ಅಹ್ಮದ್, ಸಯ್ಯದ್ ಝುಲ್‌ಕಿಫಿಲ್ ಅಹ್ಮದ್, ಮುರ್‌ತಝಾ ಅಹ್ಮದ್, ಶಾಯಾನ್ ಅಹ್ಮದ್, ಆಹಿಲ್ ಅಹ್ಮದ್, ಸದಾಖತ್ ಅಹ್ಮದ್, ಕಾಮ್ರಾನ್ ಅನ್ವರ್, ಫೈಝಾನ್ ನಾಸಿರ್, ಕಾಮ್ರಾನ್ ಅಹ್ಮದ್, ಜಲೀಸ್ ಅಹ್ಮದ್ ರಾನಾ, ತಾಬಿಶ್ ಅಹ್ಮದ್, ಮಲಕ್ ಏಝಾಝುಲ್ ಹಖ್, ಫರ್‌ಹಾನ್ ಅಲಿ ಆವಾನ್, ಸುಬ್ಹಾನ್ ಅಹ್ಮದ್, ಅಯ್ಯಾನ್ ಅಹ್ಮದ್, ಅಲೀಮ್ ಅಹ್ಮದ್, ಬಾಸಿಲ್ ಅಹ್ಮದ್, ನೂಹ್ ಸಿರಾಜ್ ಅಹ್ಮದ್, ಸಾಎಮ್ ಮುನೀರ್ ಅಹ್ಮದ್, ರಿಝ್ವಾನ್ ಅಹ್ಮದ್ ಮಿರ್ಝ,

*(ಉಳಿದ ವರದಿ ಪುಟ ಸಂಖೆ 08 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.